ಮಾಡಿ. ಹೇಳಿಕೆ ಕೊಟ್ಟಿಲ್ಲ. ನಾನೂ ಪತ್ರಿಕೆಯಲ್ಲಿ ಓದಿದ್ದೇನೆ. ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಹೇಳಿದ್ದಾರೆ ಇದು ಆಡಳಿತಾತ್ಮಕ ವಿಷಯ. ಕ್ಲಿಯರೆನ್ಸ್ ಸಿಕ್ಕಿದೆ ಎಂದರೆ ಪಾಲಿಸಿ ಮ್ಯಾಟರ್ ಆಗುವುದಿಲ್ಲ. ಮಾನ್ಯ ನೀರಾವರಿ ಮಂತ್ರಿಗಳು ಬಂದಮೇಲೆ ಸದನಕ್ಕೆ ವಿವರಗಳನ್ನು ಈ ಕುರಿತು ಕೊಡುತ್ತಾರೆ.

ಅಧ್ಯಕ್ಷರು. ಈಗ ನಮ್ಮ ಮುಂದಿರುವ ವಿಷಯ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರು ಹೇಳಿಲ್ಲ ಎಂದು ಹೇಳಿದ್ದಾರೆ ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ......

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ನಮ್ಮ ಮುಂದಿರುವ ವಿಷಯ

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

ಅಧ್ಯಕ್ಷರು.—ಈಗ ''ಜನವರಿ ೨೯, ೧೯೮೭ ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ'' ಎಂದು ಶ್ರೀ ಎಂ. ಪಿ. ಪ್ರಕಾಶ್ ಅವರು ಸೂಚಿಸುವುದು. ಶ್ರೀ ವೈ. ಕೆ. ರಾಮಯ್ಯನವರು ಅನುಮೋದಿಸುವುದು.

† ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ''ಜನವರಿ ೨೯, ೧೯೮೭ ರಂದು ವಿಧಾನ ಮಂಡಳದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ.''

ಶ್ರೀ ವೈ. ಕೆ. ರಾಮಯ್ಯ.—''ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಾಡಿದ ಪ್ರಸ್ತಾವನೆಯನ್ನು ನಾನು ಅನುಮೋದಿಸುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ಜನವರಿ ೨೯, ೧೯೮೭ ರಂದು ವಿಧಾನಮಂಡಲದ ಜಂಟಿ ಅಧಿವೇಶನಗಳನ್ನುದ್ದೇಶಿಸಿ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ ಅತ್ಯಂತ ಸಂಕೀರ್ಣವಾದಂತಾದ್ದು ಮತ್ತು ಸಂಕ್ಷಿಪ್ತವಾದಂತಾದ್ದು ಎಂದು ಮೇಲ್ನೋಟಕ್ಕೆ ಕಂಡರೂ ಕೂಡ ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಸರಕಾರ ಸಾಧನೆ ಮಾಡಿದಂತಹ ಎಲ್ಲಾ ವಿಷಯಗಳ ಬಗ್ಗೆ ವಿವರವಾದ ಪ್ರಸ್ತಾಪವನ್ನು ಮಾಡಿದ್ದಾರೆ. ಒಂದು ಅರ್ಥದಲ್ಲಿ, ಈ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣ ಅತ್ಯಂತ ಮುಖ್ಯವಾದುದು. ಜಿಲ್ಲಾಪರಿಷತ್ ಮತ್ತು ಮಂಡಲ್‌ಪಂಚಾಯತ್ ಚುನಾವಣೆಗಳನಂತರ. ನಡೆದಿರುವಂತಹ ಈ ಸಭೆಯಲ್ಲಿ ಈ ಸರಕಾರ ತಾನು ಜನತೆಗೆ ಕೊಟ್ಟಿರತಕ್ಕಂಥ ಅಭಿವಚನಗಳನ್ನು ನೆರವೇರಿಸಿ, ಈ ಚುನಾವಣೆಗಳ ಮೂಲಕ ಮಾಡಿದಂತಹ ಒಂದು ದೊಡ್ಡ ಕ್ರಾಂತಿ ಕಾರಕ ಬದಲಾವಣೆಯಾಗಿದೆ. ಅದನ್ನು ಅನುಷ್ಠಾನಕ್ಕೆ ತಂದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ.

ಅಧ್ಯಕ್ಷರೇ, ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಯಿಂದ ಅಧಿಕಾರ ಗ್ರಾಮಮಟ್ಟದಲ್ಲಿ ವಿಕೇಂದ್ರೀಕರಣ ಆಗುತ್ತದೆ ಎಂಬ ಒಂದೇ ಒಂದು ದೃಷ್ಟಿಕೋನದಿಂದ. ಇದನ್ನು ಯೋಚಿಸಬೇಕಾದಂತಹ ಅಗತ್ಯ ಇಲ್ಲ ಇದು ಸಮಗ್ರವಾದಂತಹ ಕ್ರಾಂತಿಕಾರಕ ಬದಲಾವಣೆಯನ್ನು ದೇಶದ ನಡವಳಿಕೆಯಲ್ಲಿ ತರತಕ್ಕಂಥ ಒಂದು ವ್ಯವಸ್ಥೆಯಾಗಿದೆ. ಸಾಂಸ್ಥಿಕ ಸಂಸ್ಥೆಗಳ ವ್ಯವಸ್ಥೆಯ ಒಂದು ಚೌಕಟ್ಟಿನಲ್ಲಿ ಇಡೀ ನಮ್ಮ ರಾಜ್ಯಭಾರದ ವ್ಯವಸ್ಥೆಯನ್ನು ನಾವು ನೋಡಬಹುದು. ಪ್ರಾರಂಭದಲ್ಲಿ ಸ್ವಲ್ಪಮಟ್ಟಿಗೆ ಆಡಳಿತದಿಂದ ಇದು ಕಟುವಾಗಿ ಇರಬಹುದು, ಅಥವಾ ನಮ್ಮ ದೇಶ ದಲ್ಲಿರತಕ್ಕಂಥ ನಿರಕ್ಷರತೆ, ಬಡತನ, ಇವುಗಳ ಮುಖಾಂತರ ಆಗಿರತಕ್ಕಂಥ ಜಾತೀಯ ಕಲಹಗಳಿಂದ ಆಗಬಹುದು, ಆದರೆ ಇವುಗಳು ಎಲ್ಲಾ ಕೂಡ ತಾತ್ಕಾಲಿಕ ಈ ಮಟ್ಟದಲ್ಲಿ ಸಾಂಸ್ಥಿಕ ಸಂಸ್ಥೆಗಳಿಗೆ ಘನತೆಯನ್ನು, ಗಾಂಭೀರ್ಯತೆಯನ್ನು ತಾರದೇ ಹೋದರೆ, ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರ ಭಾಷಣದ ಮೇಲೆ ಮಾತನಾಡಬೇಕೇ ವಿನಹ ಮುಸ್ಲೀಂರವರು ಹಾಗಿದ್ದಾರೆ, ಹಿಂದೂಗಳು ಹಾಗಿದ್ದಾರೆ ನಾವು ಹೀಗೆ ಇದ್ದೇವೆ ಹೀಗೆ ಹೇಳುವುದಾಗಲಿ ಅಥವಾ ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕಂಥ ಕಥೆಯನ್ನಾಗಿಲಿ ಹೇಳುವುದಲ್ಲ. ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕಂಥ ಕಥೆಯಿಂದ ಏನು ಪರಿಣಾಮ ವಾಗುತ್ತದೆ ಅದನ್ನು ಅವರು ಹೇಳುವ ಅವಶ್ಯಕತೆಯಾದರೂ ಏನು ? ನಾವು ಕೇಳುವುದು ಇಷ್ಟೆ. ಇದರ ಬಗ್ಗೆ ನಿಮ್ಮ ಜನತಾ ಪಕ್ಷದವರ ನೀತಿ ಏನು ? ಮುಸಲ್ಮಾನರು ತಪ್ಪು ಮಾಡಿದಾಗ ನಿಮ್ಮ ನೀತಿಗಳು ಏನು ? ಮುಸಲ್ಮಾನರಿಗೆ ಹೇಗೆ ಭದ್ರತೆ ಕೊಡಬೇಕು ಅದನ್ನೆಲ್ಲಾ ಇಲ್ಲಿ ಹೇಳುವುದು ಸಮಂಜಸವಲ್ಲ. He was talking so nicely. I reqest you to talk on the subject.

ಅಧ್ಯಕ್ಷರು.—ನೋಡಿ, ನೀವು ಇಂಟರ್‌ಫೀಯರ್ ಅದ್ದರಿಂದ ಮಾನ್ಯ ಪ್ರಕಾಶ್‌ರವರು ಯೀಲ್ಡ್ ಆದರು. ಮಾನ್ಯ ಪ್ರಕಾಶ್‌ರವರೇ ನೀವು ಯೀಲ್ಡ್ ಆಗುವುದಿಲ್ಲ ಎಂದು ಹೇಳಿಬಿಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ತಾವೇ ಹೇಳಿಬಿಡಿ.

ಅಧ್ಯಕ್ಷರು.—ಯಾರಾದರೂ ಮಾತನಾಡುವುದಕ್ಕೆ ಎದ್ದರೆ ಅವರು ಯೀಲ್ಡ್ ಆಗಬಾರದು ಎನ್ನುವುದು ನನ್ನ ಅಭಿಪ್ರಾಯ. ನಿಮಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಪ್ರಕಾಶ್‌ರವರು ಈಗ ಮಾತನಾಡಲಿ ನಿಮಗೆ ಸೋಮವಾರ ಮಾತನಾಡುವುದಕ್ಕೆ ಅವಕಾಶ ಕೊಡು ತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಆರೋಗ್ಯಕರವಾಗಿರತಕ್ಕಥದ್ದನ್ನು ಮಾತನಾಡಲಿ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಅದು ಅವರಿಗೆ ಆರೋಗ್ಯಕರವಾಗಿದೆ, ಅದು ನಿಮಗೆ ಅನಾರೋಗ್ಯಕರ ಅಷ್ಟೆ.

ಶ್ರೀ ಎಂ.ಪಿ. ಪ್ರಕಾಶ್.—ಹಿರಿಯ ಸದಸ್ಯರಾದ ಶ್ರೀ ಬಿ. ಬಸವಲಿಂಗಪ್ಪನವರು ಮಾತನಾಡಿ ದಾಗ ಈ ವಿಚಾರವನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ರಾಜ್ಯಪಾಲರ ಭಾಷಣದ 8ನೇ ಪ್ಯಾರಾದಲ್ಲಿ ಏನು ಇದೆ ಎನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.

> ''ದುರದೃಷ್ಟವಶಾತ್ ವೃತ್ತಪತ್ರಿಕೆಯೊಂದರಲ್ಲಿ ಪ್ರಕಟವಾದ ಕಥೆಯು ಒಂದು ಕೋಮಿ ನವರ ಭಾವನೆಗಳನ್ನು ಕೆರಳಿಸಿದ್ದು ಕರ್ನಾಟಕದ ಈ ಖ್ಯಾತಿಗೆ ಕಳಂಕ ತಟ್ಟಿತು. ಬೆಂಗಳೂರು ಮೈಸೂರು ಮತ್ತು ತುಮಕೂರುಗಳಲ್ಲಿ ಹಿಂಸಾತ್ಮಕ ಘಟನೆಗಳು ಸಂಭವಿಸಿ, ಸಾರ್ವ ಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಯಿತು'' ಎಂದು

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ಪ್ರಸ್ತಾಪ ಮಾಡಿರುವುದರಿಂದ ನಾನು ಇದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಯಿತು. ಈ ದೇಶದ ಮೂಲಭೂತವಾಗಿರುವಂತಹ ವ್ಯವಸ್ಥೆಯಲ್ಲಿ ಇಂತಹ ದುರಂತಗಳು ಯಾವ ರೀತಿ ನಡೆಯುತ್ತವೆ ಎಂಬುದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಸಹ ಅನೇಕ ಸಂದರ್ಭದಲ್ಲಿ ಈ ಮಾತನ್ನು ಒಪ್ಪಿದ್ದಾರೆ. ಇಂತಹ ದುರಂತಗಳು

(ಶ್ರೀ ಚಂದ್ರಕಾಂತ್ ಬೆಲ್ಲದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ದೇಶವನ್ನು ಎಷ್ಟೊಂದು ವಿಕಾರಗೊಳಿಸಿವೆ ಮತ್ತು ಇದರಿಂದ ಎಂತಹ ಪ್ರವೃತ್ತಿ ಉಂಟಾಗು ತ್ತಿದೆ ಎಂಬ ಮಾತನ್ನು ನಾನು ಹೇಳಿದರೆ ಯಾರೂ ಸಹ ಇಲ್ಲಿ ತಪ್ಪಾಗಿ ಭಾವಿಸುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸಣ್ಣ ಕಥೆಯಿಂದ ಇಷ್ಟೊಂದು ದೊಡ್ಡ ಗಲಾಟೆ ಆಗುತ್ತದೆಂದು ಯಾರೂ ತಿಳಿದಿರಲಿಲ್ಲ. ಸಾಮಾಜಿಕ ಸಂಘರ್ಷವಾಗಲು ಇಂತಹ ಒಂದು ಕಿಡಿಯೇ ಸಾಕು ಎಂಬುದು ಇದರಿಂದ ತಿಳಿದು ಬರುತ್ತದೆ. ಈ ಘಟನೆ ನಡೆದ ಸಂದರ್ಭದಲ್ಲಿ ನಮ್ಮ ಸರ್ಕಾರ ಬಹಳ ಸಂಯಮದಿಂದ ವರ್ತನೆ ಮಾಡಿದೆ. ಆ ಸಮಯದಲ್ಲಿ ಗುಂಡನ್ನು ಹಾರಿಸ ವಂಥ ಅಗತ್ಯವಿರಲಿಲ್ಲವೆಂದು ನಿನ್ನೆ ಮಾತನಾಡಿದ ನನ್ನ ಮಿತ್ರರು ಹೇಳಿದರು. ಆ ಸಮಯದಲ್ಲಿ ಸರ್ಕಾರದವರು ಕ್ಷಿಪ್ರ ಕ್ರಮವನ್ನು ಮತ್ತು ಸುರಕ್ಷಿತ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಇದೇ ಮಾನ್ಯ ಸದಸ್ಯರುಗಳು ಇಲ್ಲಿ ಪತ್ರಿಕಾ ಕಛೇರಿಗಳಿಗೆ ಸರಿಯಾದ ಸಂರಕ್ಷಣೆ ಕೊಡಲಿಲ್ಲ ಎಂದು ಟೀಕೆ ಟಿಪ್ಪಣಿ ಗಳನ್ನು ಮಾಡುತ್ತಿದ್ದರು. ಹಿಂಸಾ ಕೃತ್ಯವನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂಬ ಅಪವಾದವನ್ನು ಸಹ ನಮ್ಮ ಸರ್ಕಾರದ ಮೇಲೆ ಮಾಡುತ್ತಿದ್ದರು. ಆ

ಸಮಯದಲ್ಲಿ ಗೋಲಿಬಾರ್ ಮಾಡುವಂತಹ ಒಂದು ಪರಿಸ್ಥಿತಿ ಉಂಟಾಗಿತ್ತು. ನಮ್ಮ ಪೋಲೀಸ್ ಇಲಾಖೆಯವರು ಸಹ ಆ ಸಂದರ್ಭದಲ್ಲಿ ಬಹಳ ಸಂಯಮದಿಂದ ಕೆಲಸ ಮಾಡಿದ್ದಾರೆ. ಕೇವಲ ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾತ್ರವಲ್ಲ, ಆಳಂದ್, ಕೆ.ಆರ್. ನಗರ, ಬಾಗಲಕೋಟೆ, ಬಿಜಾಪುರ, ಕೊಡಗು ಮುಂತಾದ ಕಡೆಗಳಲ್ಲಿ ಈ ಜಾತಿಯ ಕಲಹಗಳು ನಡೆದಾಗಲೂ ಸಹ ನಮ್ಮ ಪೋಲೀಸರು ಬಹಳ ಸಂಯಮದಿಂದ ವರ್ತನೆ ಮಾಡಿದ್ದಾರೆ ಮತ್ತು ಶಾಂತಿ ಮತ್ತು ಶಿಸ್ತನ್ನು ಕಾಪಾಡಿಕೊಂಡು ಹೋಗುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಇದನ್ನು ನಾವೆಲ್ಲರೂ ಮೆಚ್ಚ ಬೇಕಾಗಿದೆ. ಈ ಘಟನೆಗಳು ನಡೆದಂಥ ಸಂದರ್ಭಗಳಲ್ಲಿ ನಮ್ಮ ಹಿರಿಯ ಸಚಿವರಾದಂಥ ಶ್ರೀಮಾನ್ ರಾಚಯ್ಯನವರು ಗೃಹ ಸಚಿವರಾಗಿ ಬಹಳ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಈ ಮಾತನ್ನು ಹೇಳುವ ಸಂದರ್ಭದಲ್ಲಿ ಕೊಡಗಿನಲ್ಲಿ ನಡೆದಂಥ ಪ್ರಸಂಗವನ್ನು ಸಹ ನಾವು ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕಾಗುತ್ತದೆ. ಇಲ್ಲಿ ನಡೆದಿದ್ದು ಮೇಲ್ನೋಟಕ್ಕೆ ಜಾತಿಯ ವಿಷಯವಾಗಿ ಕಂಡರೂ ಸಹ ಇದರ ಹಿಂದೆ ಆರ್ಥಿಕ ಕಾರಣಗಳೂ ಸಹ ಇವೆ. ಅಲ್ಲಿರುವಂತಹ ದೇವರ ಕಾಡಿನ ಬಗ್ಗೆ ಅಲ್ಲಿನ ಜನರಿಗೆ ಬಹಳ ಪೂಜ್ಯ ಭಾವನೆ ಇದೆ. ಈ ಕಾಡನ್ನು ಕಡಿಯಲು ಅಲ್ಲಿನ ಜನ ಇಷ್ಟಪಡುವುದಿಲ್ಲ. ಆದರೆ ಕಳ್ಳಸಾಗಾಣಿಕೆದಾರರು ತಮ್ಮ ಒಂದು ಆರ್ಥಿಕ ಶಕ್ತಿಯನ್ನು ಬೆಳೆಸಿಕೊಳ್ಳುವ ಸಲುವಾಗಿ ಇಲ್ಲಿನ ಕಾಡನ್ನು ಕಡಿದು ಹೊರಗಡೆಗೆ ಸಾಗಿಸುತ್ತಿದ್ದಾರೆ. ಇವಕ್ಕೆಲ್ಲಾ ಅಲ್ಲಿನ ಮೂಲ ನಿವಾಸಿಗಳೇ ಕಾರಣ ಎಂದು ಕೆಲವರು ಹೇಳಬಹುದು. ಆದರೆ ಇದು ಹಿಂದೂ ಮತ್ತು ಮುಸಲ್ಮಾನರ ನಡುವೆ ನಡೆದಂಥ ಜಾತಿ ಸಂಘರ್ಷವಲ್ಲ. ದೇವರ ಕಾಡಿನ ಬಗ್ಗೆ ಅಲ್ಲಿನ ನಿವಾಸಿಗಳಿಗೆ ಪೂಜ್ಯ ಭಾವನೆ ಇರುವುದರಿಂದ ಯಾರೂ ಕಾಡನ್ನು ಕಡಿಯುವುದಿಲ್ಲ. ಇದರಿಂದ ಕಾಡು ಚೆನ್ನಾಗಿ ಬೆಳೆಯುತ್ತದೆ ಮತ್ತು ಅದರ ಸೌಂದರ್ಯ ಹೆಚ್ಚುತ್ತದೆ ಎಂದು ಅವರ ನಂಬಿಕೆ. ಇದರಿಂದ ಮಳೆಯೂ ಚೆನ್ನಾಗಿ ಬರುತ್ತವೆ. ಆದರೆ ಬೇರೆ ಊರುಗಳಿಂದ ಇಲ್ಲಿಗೆ ವಲಸೆ ಬಂದಿರುವವರು ಕಾಡನ್ನು ಕಡಿದು ನಾಟಾಗಳನ್ನು ಹೊರಗಡೆಗೆ ಕಳ್ಳಸಾಗಾಣಿಕೆ ಮಾಡುತ್ತಿದ್ದ ಕಾರಣದಿಂದ ಇವರಿಗೂ ಅಲ್ಲಿನ ಮೂಲ ನಿವಾಸಿಗಳಿಗೂ ಆರ್ಥಿಕ ಸಂಘರ್ಷಣೆ ನಡೆದಿದೆ. ಆದರೆ ಇದು ಬೇರೆಯವರಿಗೆ ಜಾತಿಯ ಸಂಘರ್ಷವಾಗಿ ಕಂಡಿರಬಹುದು. ಇದೇ ಕಾರಣದಿಂದ ನಡೆದ ಹಿಂಸಾಚಾರ ಮತ್ತು ಗೋಲಿಬಾರ್‌ಗೆ ಜಾತೀಯ ಸಂಘರ್ಷವೇ ಕಾರಣ ಎಂದು ಗುರುತು ಮಾಡುವುದಾದರೆ, ಯಾವ ಕಾರಣಕ್ಕೂ ಅಲ್ಲಿನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ಅದು ಮೂಲಭೂತವಾಗಿ ಆರ್ಥಿಕ ಸಮಸ್ಯೆಯಾಗಿದೆ. ಆದ್ದರಿಂದ ಈ ಆರ್ಥಿಕ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದರೆ ಅಲ್ಲಿನ ಜಾತಿ ಸಂಘರ್ಷವನ್ನು ತಪ್ಪಿಸಬಹುದೆಂದು ಹೇಳಿದರೆ ಅದು ತಪ್ಪಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರಗಳ ಬಗ್ಗೆ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಈ ಬಗ್ಗೆ ೩೧ನೆಯ ತಾರೀಖು ಡೆಕ್ಕನ್-ಹೆರಾಲ್ಡ್ ಪತ್ರಿಕೆಯಲ್ಲಿ ಅಗ್ರಲೇಖನ ಸಹ ಬಂದಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಪ್ರಸ್ತಾಪವಾಗಿರುವ ಕಾರಣದಿಂದ ನಾನು ಸಹ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿದೆ.

ಇನ್ನು ನಮ್ಮ ರಾಜ್ಯದ ಆಯವ್ಯಯದಲ್ಲಿ ಕಡಿತ ಆಗಿರುವ ಬಗ್ಗೆ ಮತ್ತು ಸಂಪನ್ಮೂಲಗಳನ್ನು ಸಂಗ್ರಹ ಮಾಡುವುದರ ಬಗ್ಗೆ ನಮ್ಮ ಸರ್ಕಾರ ಹಿಂದೆ ಬಿದ್ದಿರುವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದನದ ಹಿರಿಯ ಸದಸ್ಯರಾದಂಥ ಹಾಗೂ ವಿರೋಧಪಕ್ಷದ ನಾಯಕರಾಗಿದ್ದಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎರಡು ವಿಚಾರಗಳಲ್ಲಿ ನಾವು ವಿಚಾರ ಮಾಡುವುದಾಗಿದ್ದರೆ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮಾತ ನಾಡುವಾಗ ೪೫೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಯೋಜನಾ ಆಯೋಗದವರು ಒಪ್ಪಿದರು ಎನ್ನುವಂಥ ಮಾತನ್ನು ಹೇಳಿದರು. ಇದು ವಾಸ್ತವಿಕವಾಗಿ ತಪ್ಪಾಗಿದೆ. ೫೫೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಸಲ್ಲಿಸಿರತಕ್ಕಂಥಾದ್ದಕ್ಕೆ ಯೋಜನಾ ಆಯೋಗದವರು ಅಂತಿಮ ವಾಗಿ ಒಪ್ಪಿರುವುದು ೩೫೦೦ ಕೋಟಿ ರೂಪಾಯಿಗಳಿಗೆ ಮಾತ್ರ. ಅವರ ಪ್ರಸ್ತಾಪದ ಪ್ರಕಾರ ೬ನೇ ಯೋಜನೆಯಲ್ಲಿ ಕರ್ನಾಟಕದ ಭಾಗ ೫.೯ ಇದ್ದದ್ದು ೭ನೇ ಯೋಜನೆಯಲ್ಲಿ ೪.೯ ಆಯಿತು ಎಂದು ಹೇಳಿದ್ದಾರೆ. ೬ನೇ ಯೋಜನೆಯಲ್ಲಿ ಕರ್ನಾಟಕದ ಭಾಗ ೫.೯ ಇತ್ತು, ೭ನೇ ಯೋಜನೆಯಲ್ಲಿ ೪.೬ ಆಯಿತು ಎಂದು ಅವರು ತಪ್ಪು ಲೆಕ್ಕಾಚಾರ ಮಾಡಿದ್ದಾರೆ. ಆದರೆ ಇರುವ ಅಂಕಿಸಂಖ್ಯೆಗಳ ವಾಸ್ತ ವಾಂಶ ಎಂದರೆ, ೬ನೇ ಯೋಜನೆಯಲ್ಲಿ ಕರ್ನಾಟಕದ ಒಟ್ಟು ಭಾಗ ೪.೮ ಇದ್ದದ್ದು ೭ನೇ ಯೋಜನೆಯಲ್ಲಿ ೪.೫ ಆಗಿದೆ. ಇದರಲ್ಲಿ ಕಾವೇರಿ ಯೋಜನೆಗಳಿಗಾಗಿ ಖರ್ಚು ಮಾಡಿರತಕ್ಕಂಥ ಎಲ್ಲಾ ಹಣಕಾಸನ್ನು ಲೆಕ್ಕ ಹಾಕಿದರೆ ೬ನೇ ಯೋಜನೆಯಲ್ಲಿ ಕರ್ನಾಟಕದ ಭಾಗ ೫.೧ ಆಗುತ್ತದೆ, ೭ನೇ ಯೋಜನೆಯಲ್ಲಿ ೪.೯ ಆಗು ತ್ತದೆ. ಇದು ಮಾರ್ಜಿನಲ್ ಆಗಿ ಆಗಿರತಕ್ಕಂಥಾದ್ದು, ಅಂತಿಮವಾಗಿ ಸ್ವಲ್ಪ ವ್ಯತ್ಯಾಸ ಕಡಿಮೆಯಾಗಿದೆ. ಈ ಕಡಿತ ಪ್ರಾರಂಭವಾಗಿರತಕ್ಕಂಥಾದ್ದು ಕಳೆದ ೪ ವರ್ಷಗಳಿಂದ ನಾವು ಅಧಿಕಾರಕ್ಕೆ ಬಂದ ಕಾಲದಿಂದ

ಪ್ರಾರಂಭವಾದದ್ದಲ್ಲ, ಈ ಕಡಿತ ಮೊದಲಿಂದಲೇ ಪ್ರಾರಂಭವಾಗಿದೆ. ಮಾನ್ಯ ವೀರಪ್ಪಮೊಯಿಲಿಯವರು ಹಣಕಾಸಿನ ಸಚಿವರಾಗಿದ್ದ ಸಂದರ್ಭದಲ್ಲಿ ಪ್ರಾರಂಭವಾಗಿದೆ. ೫ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೫.೪ರಷ್ಟು ಮಾತ್ರ ಇತ್ತು. ಇಡೀ ರಾಜ್ಯದ ಯೋಜನೆಯಲ್ಲಿ ಕರ್ನಾಟಕದ್ದು ಮೈನಸ್ ೫.೪ ಇದ್ದರೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಹಣಕಾಸಿನ ಸಚಿವರಾಗಿದ್ದಂಥ ಸಂದರ್ಭದಲ್ಲಿ ೪.೮ ಆಯಿತು. ಇದು ಮಾರ್ಮಿಕವಾದಂಥ ವಿಚಾರ. ಕೇಂದ್ರ ಸರ್ಕಾರದಲ್ಲಿ ಇಡೀ ಯೋಜನೆಯ ಪರಿಕಲ್ಪನೆಯ ದೃಷ್ಟಿಯಿಂದ ಎಲ್ಲಾ ಯೋಜನೆಗಳ ಲೆಕ್ಕಾಚಾರದಲ್ಲಿ ಕಡಿಮೆ ಮಾಡತಕ್ಕಂಥ ಪ್ರವೃತ್ತಿ ಆಗುತ್ತಿದೆ- ಉತ್ತರ ಪ್ರದೇಶದಲ್ಲಿ ಯೋಜನೆಗೆ ಕಡಿತ ಮಾಡಿರತಕ್ಕಂಥಾದ್ದು ಮೈನಸ್ ೩೮, ಒರಿಸ್ಸ ಮೈನಸ್ ೪೭, ಆಂಧ್ರಪ್ರದೇಶ ಮೈನಸ್ ೩೧, ವೆಸ್ಟ್‌ಬೆಂಗಾಲ್ ಮೈನಸ್ ೩೮, ಕರ್ನಾಟಕ ಮೈನಸ್ ೩೭ ಆಗಿದೆ. ಇಡೀ ಯೋಜನಾ ವ್ಯವಸ್ಥೆಯಲ್ಲಿ ಕರ್ನಾಟಕದಿಂದ ೫೫೦೦ ಕೋಟಿ ರೂಪಾಯಿಗಳ ಕರಡು ಯೋಜನೆಯನ್ನು ಕಳುಹಿಸಿಕೊಟ್ಟರೆ ಅಂತಿಮವಾಗಿ ಒಪ್ಪಿರುವುದು ೩೫೦೦ ಕೋಟಿ ರೂಪಾಯಿಗಳಿಗೆ ಮಾತ್ರ. ಅಂದರೆ ಮೈನಸ್ ೩೭ರಷ್ಟು ಕಡಿತ ಆಗಿದೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವ ಬಂದಿರತಕ್ಕಂಥ ಸರ್ಕಾರದ ಕಾಲದಲ್ಲಿ ಇದು ಆಗಿರತಕ್ಕಂಥಾದ್ದಲ್ಲ. ಈ ರೀತಿ ಕಡಿತ ಮಾಡುವ ಕ್ರಮ ಯೋಜನಾ ಆಯೋಗದಲ್ಲಿ ಪ್ರಾರಂಭದ ದಿಸೆಯಲ್ಲಿ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಹಣಕಾಸಿನ ಸಚಿವರಾಗಿದ್ದ ಸಂದರ್ಭದಲ್ಲಿ ಆಗಿದೆ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೪.೮ ಆಗಿದೆ, ೫ನೇ ಯೋಜನೆಯಲ್ಲಿ ೫.೪ ಇತ್ತು. ಇದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ಅಗ್ರ ಲೇಖನದಲ್ಲಿ ಬಂದಿರತಕ್ಕಂಥ ಮಾಹಿತಿಯ ವಿಚಾರವಾಗಲಿ ಅಥವಾ ಮಾನ್ಯ ವೀರಪ್ಪ ಮೊಯಿಲಿಯವರು ಪ್ರಸ್ತಾಪ ಮಾಡಿರತಕ್ಕಂಥದ್ದಾಗಲಿ, ಇದರ ಆರ್ಥಿಕ ಹಿಂಬಡ್ತಿ ಕರ್ನಾಟಕ ರಾಜ್ಯದಲ್ಲಿ ಆಗಿಲ್ಲ. ಯೋಜನಾ ಆಯೋಗದವರು ತಮ್ಮದೇ ಆಗಿರತಕ್ಕ ನೀತಿಗಳ ವಿಚಾರವಾಗಿ ಸ್ವಲ್ಪಮಟ್ಟಿನ ಕಡಿತವನ್ನು ಅವರು ಮಾಡುತ್ತಾ ಇದ್ದಾರೆ. ಆಗಿರತಕ್ಕ ಕಡಿತ ಏನಿದೆ ಅದು ಮಾರ್ಜಿನಲ್ಲಾಗಿ ಆಗಿರುವುದು ಎನ್ನುವುದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇರೀತಿಯಾಗಿ ಇನ್ನೂ ಒಂದು ವಿಚಾರವನ್ನು ಅವರು ಪ್ರಸ್ತಾಪ ಮಾಡಿದರು. ಕೇಂದ್ರಸರ್ಕಾರ ಬೇಕಾದಷ್ಟು ಅನುದಾನ ಕೊಟ್ಟರೂ ಕೂಡ ಸಂಪನ್ಮೂಲದ ಸಂಗ್ರಹಣ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯ ಹಿಂದೆ ಬಿದ್ದಿದೆ ಎನ್ನುವಂಥ ಮಾತನ್ನು ಹೇಳಿದರು. ಇದರ ಬಗ್ಗೆ ಅಗ್ರ ಲೇಖನದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪವಾಗಿದೆ. ಈ ಅಗ್ರಲೇಖನದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುತ್ತಾ ಇರುವುದು ಏಕೆಂದರೆ, ಪತ್ರಿಕೆಯವರಿಗೂ ಎಷ್ಟೋ ಜವಾಬ್ದಾರಿಯುತವಾಗಿ ಟೀಕೆ ಟಿಪ್ಪಣಿಗಳನ್ನು ರಾಜ್ಯಸರ್ಕಾರದ ನಡವಳಿಕೆಗಳ ಮೇಲೆ ಮಾಡಿದರೂ ಅದರ ಹಿನ್ನೆಲೆಯನ್ನು ಪ್ರಸ್ತಾಪ ಮಾಡುವುದರ ಜೊತೆಗೆ ಇಂದಿನ ವಾಸ್ತವಿಕ ಚಿಂತನೆಗಳ ಬಗ್ಗೆಯೂ ಕೂಡ ಇಷ್ಟರಮಟ್ಟಿಗೆ ತಪ್ಪುಗಳನ್ನು ಪತ್ರಿಕೆಗಳು ಹೇಳುತ್ತಿವೆ. ಅವು ಒಂದು ಅರ್ಧ ಕಥೆಯನ್ನು ಮಾತ್ರ ಹೇಳುತ್ತವೆ. ಅರ್ಧ ಸತ್ಯದ ಕೆಲಸ. ಅರ್ಧ ಸತ್ಯ ಅನೇಕ ಸಂದರ್ಭದಲ್ಲಿ ಬಹಳ ಅಪಾಯಕಾರವಾದ ವಿಷಯ, ಆದರೆ ಇದು ಅರ್ಧ ಸತ್ಯದ ವಿಷಯವಲ್ಲ, ಪೂರ್ಣ ಕಥೆಯನು ಹೇಳುತ್ತವೆ. ಮಾನ್ಯ ವೀರಪ್ಪ ಮೊಯಿಲಿಯವರು ಪ್ರಸ್ತಾಪ ಮಾಡಿರುವುದು ಕೂಡ ಅರ್ಧ ಸತ್ಯದ ಪ್ರಸ್ತಾಪವಾಗಿದೆ. ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿರತಕ್ಕಂಥ ಹಣಕಾಸಿನ ಸಹಾಯ ಹೆಚ್ಚಾಗಿದೆ ಎನ್ನುವಂಥ ಮಾತು ಸುಳ್ಳು. ಏಕೆಂದರೆ, ೧೯೮೦-೮೧ನೇ ಸಾಲಿನಲ್ಲಿ ೩೮೫ ಕೋಟಿ ರೂಪಾಯಿಗಳ ಯೋಜನೆಗೆ ಅವರು ಕೊಟ್ಟಿರತಕ್ಕಂಥಾ ಅನುದಾನ ೧೦೨ ಕೋಟಿ ರೂಪಾಯಿಗಳು ಎಂದರೆ ಶೇಕಡ ೨೬ ಆಯಿತು. ೧೯೮೬-೮೭ನೇ ಸಾಲಿನಲ್ಲಿ ೭೬೫ ಕೋಟಿ ರೂಪಾಯಿಗಳ ಯೋಜನಾ ವೆಚ್ಚದಲ್ಲಿ ಅವರು ಎಂದರೆ ಕೇಂದ್ರ ಸರ್ಕಾರದ ಸಹಾಯ ೧೯೭ ಕೋಟಿ ರೂಪಾಯಿಗಳು, ಅಂದರೆ ೨೫ ಪರ್ಸೆಂಟ್ ಆಯಿತು. ಆದುದರಿಂದ ಕೇಂದ್ರ ಸರ್ಕಾರದವರು ನಮಗೆ ಹೆಚ್ಚು ಅನುದಾನ ಕೊಟ್ಟಿದ್ದಾರೆ ಎನ್ನುವಂಥ ಮಾತು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಪ್ರಾಯಶಃ

೧೦-೩೦ ಎ, ಎಂ.

ಈ ಮಾತನ್ನು ಹೇಳುವಂಥ ಸಂದರ್ಭದಲ್ಲಿ ವಿರೋಧಪಕ್ಷದವರು ಕೇಂದ್ರ ಸರ್ಕಾರದಲ್ಲಿ ತಾವು ಆಡಳಿತದಲ್ಲಿರುವುದರಿಂದ ಇಲ್ಲಿ ಇರುವ ರಾಜ್ಯ ಸರ್ಕಾರ ಮಾಡುವ ಎಲ್ಲಾ ಕಾರ್ಯದಲ್ಲೂ ನಮ್ಮ ಪಾಲು ಹೆಚ್ಚು ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ನೇರವಾಗಿ ಇರತಕ್ಕಂಥ ಸತ್ಯ ಅಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇಲ್ಲಿ ನಿನ್ನೆ ಮತ್ತು ಮೊನ್ನೆ ನಡೆದಂಥ ಚರ್ಚೆಯಲ್ಲಿ ತಮಾಷೆ ಎಂದರೆ, ಈ ದಿವಸವೂ ಸಹ ಸನ್ಮಾನ್ಯ ಶ್ರೀನಿವಾಸ್ ಅವರು ಕೊಟ್ಟಿರತಕ್ಕಂಥ ಮದ್ಯಪಾನಕ್ಕೆ ಸಂಬಂಧಿಸಿರತಕ್ಕ ನಿರ್ಣಯಕ್ಕೆ ಚರ್ಚೆ ಮುಂದುವರೆಯಬೇಕೆಂದು ಇದ್ದರೂ ಸಹ ಇದು ರಾಜ್ಯಪಾಲರ ಭಾಷಣಕ್ಕೆ ನೇರವಾಗಿ ಇರತಕ್ಕ ಸಂಬಂಧ ಇಲ್ಲದೇ ಇದ್ದರೂ ಕೂಡ, ರಾಜ್ಯಪಾಲರ ಭಾಷಣಕೆ

ಮಂಗಸಾ ನಿರ್ಣಯ ಚರ್ಚೆ ಮಾಡುವ ಸಂದರ್ಭದಲ್ಲಿ, ಶ್ರೀನಿವಾಸ್ ಅವರು ತಂದಿರತಕ್ಕ ಮದ್ಯಪಾನಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಆಗಿರತಕ್ಕದ್ದು ನೋಡಿದಾಗ ನೆಪೋಲಿಯನ್ ಹೇಳಿರುವಂಥಾದ್ದು ಜ್ಞಾಪಕಕ್ಕೆ ಬರುತ್ತದೆ. "Vices are very good patriots" ಎನ್ನುವ ಮಾತನ್ನು ಹೇಳುತ್ತಾರೆ. ಯಾವುದೇ ಒಂದು ರಾಜ್ಯ, ಗ್ರಾಮಗಳಲ್ಲಿ ತೆರಿಗೆ ರೂಪದಲ್ಲಿ ಹಣಕಾಸು ವ್ಯವಸ್ಥೆ ನಿರ್ಮಾಣ ಮಾಡುವಂಥ ಸಂದರ್ಭದಲ್ಲಿ ಕೆಟ್ಟದಾಗಿರಕ್ಕಂಥ ವಿಷಯಗಳಿಗೆ ಜನರು ಹೆಚ್ಚು ಹಣವನ್ನು ಕೊಡುತ್ತಾರೆ. Love of Brandy brought him five million francs. ಎಂದು ನೆಪೋಲಿಯನ್ ಪ್ರಸ್ತಾಪ ಮಾಡಿದ್ದಾರೆ. ಇಂಥ ಒಂದು ಅನೈತಿಕ ವ್ಯವಹಾರಗಳ ಮೂಲಕ ತೆರಿಗೆ ಹೆಚ್ಚು ಬರುತ್ತದೆ ಎಂದು ಹೇಳುತ್ತಾರೆ ಎಮ್ಮರ್‌ಸನ್ ಅವರು ಪ್ರಸ್ತಾಪ ಮಾಡಿ Vices have broad backs and with tabacco can cheerfully carry the load of armies. ಎಂದು ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.— ಆ ಕೆಲಸವನ್ನು ನೀವು ಮಾಡುವುದಿಲ್ಲ ಎಂದು ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಇದು ಅನುಸಾಂಗಿಕವಾಗಿ ನಾನು ಹೇಳಿದ ಮಾತು. ಇಲ್ಲಿ ಸನ್ಮಾನ್ಯ ಶ್ರೀನಿವಾಸ್ ಅವರು ಮದ್ಯಪಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ಕೌಟಿಲ್ಯನ ಮಾತು ಕೂಡ ಜ್ಞಾಪಕಕ್ಕೆ ಬರುತ್ತದೆ. ಅದನ್ನು ಯಾವ ರೀತಿ ಇಟ್ಟುಕೊಳ್ಳಬೇಕು ಎನ್ನುವ ಮಾತಿಗೆ ಅರ್ಥ ಇದೆ. ಇನ್ನು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವ ಮತ್ತು ಕ್ರೋಢೀಕರಿಸಿಕೊಳ್ಳುವ ವಿಚಾರ ಪ್ರಸ್ತಾಪವಾಗಿದೆ. ಈ ಸಂಪನ್ಮೂಲ ಕ್ರೋಢೀಕರಣದಲ್ಲಿ ರಾಜ್ಯಸರ್ಕಾರ ಹಿಂದೆ ಬಿದ್ದಿಲ್ಲ. ಅದೂ ಕೂಡ ದೊಡ್ಡದಾಗಿರತಕ್ಕ ಕೆಲಸ ಮಾಡಿದೆ. ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ೧೯೮೫-೮೬ರಲ್ಲಿ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ೧೩ ರೂಪಾಯಿಯಷ್ಟು ಆಗಿದೆ. ಆದರೆ ಬೇರೆ ರಾಜ್ಯಗಳ ಸಂಪನ್ಮೂಲಗಳ ಕ್ರೋಢೀಕರಣ ಕೇವಲ ೧೦ ರೂಪಾಯಿಯಷ್ಟು ಆಗಿದೆ. ೧೯೮೬-೮೭ರಲ್ಲಿ ತಲಾ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ೧೪ ರೂಪಾಯಿಯಷ್ಟು ಆಗಿದ್ದರೆ, ಬೇರೆ ರಾಜ್ಯಗಳದ್ದು ೧೪ ರೂಪಾಯಿಯಷ್ಟು ಇದೆ. ಆದ್ದರಿಂದ, ರಾಜ್ಯ ಸರ್ಕಾರ ಸುಮಾರು ೧೩೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಈ ಬಡತನ ನಿರ್ಮೂಲನೆ ಕಾರ್ಯಕ್ರಮಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆ ಮೂಲಕ ನಡೆಯತಕ್ಕ ಅನೇಕ ವಿಚಾರಗಳ ಬಗ್ಗೆ ಖರ್ಚು ಮಾಡಲಾಗಿದೆ. ಹಾಗೆಯೆ ಸಂಪನ್ಮೂಲ ಕ್ರೋಢೀಕರಿಸುವುದರಲ್ಲಿಯೂ ಸಹ ಹೆಚ್ಚು ಮುಂದೆ ಬಂದಿದೆ. ಬಡತನ ಸೀಮಾ ರೇಖೆಯ ಕೆಳಗೆ ಇರತಕ್ಕ ಜನಗಳಿಗೆ ಕೊಳ್ಳುವ ಶಕ್ತಿಯನ್ನು, ಆತ್ಮ, ಘನತೆ, ಗೌರವವನ್ನು ಸಮಾಜದಲ್ಲಿ ಕಲ್ಪಿಸುವುದರ ಮೂಲಕ ಅದು ತನ್ನದೇ ಆದ ಪ್ರಾಥಮಿಕ ಕರ್ತವ್ಯವನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇಡೀ ೨೦ ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯ ಇವೊತ್ತು ೫ನೆಯ ಮಟ್ಟಕ್ಕೆ ಬಂದಿದೆ ಎಂದು ನೋಡಿದಾಗ ಕೇಂದ್ರಸರ್ಕಾರದವರು ನಾವು ಮಾಡಿರತಕ್ಕ ದಕ್ಷತೆ, ಪ್ರಾಮಾಣಿಕತೆಯ ಬಗ್ಗೆ ಮೆಚ್ಚುಗೆಯನ್ನು ಸೂಚನೆ ಮಾಡಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿ ಕರ್ನಾಟಕ ೫ನೇ ಸ್ಥಾನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ಅವರು ಏನು ಮಾಡಿದ್ದಾರೆ ಎನ್ನುವ ಬಗ್ಗೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಟ್ಟರೆ ಚೆನ್ನಾಗಿರುತ್ತದೆ. ಟಾರ್‌ಗೆಟ್ ಫಿಕ್ಸ್ ಮಾಡುವುದನ್ನು ಕಡಿಮೆ ಮಾಡುತ್ತಿದ್ದೀರಿ. ನಾವು ಹಿಂದೆ ಒಂದು ಲಕ್ಷ ಮನೆಗಳನ್ನು ಹಂಚಬೇಕೆಂದು ಇಟ್ಟರೆ, ತಾವು ೫೦ ಸಾವಿರ ಟಾರ್‌ಗೆಟ್ ಇಟ್ಟು, ೪೦ ಸಾವಿರ ಮನೆ ಕಟ್ಟಿಸಿ, ನಾವು ೮೦ ಪರ್ಸೆಂಟ್ ಅಚೀವ್ ಮಾಡಿದ್ದೇವೆಂದು ಹೇಳುವುದು. ಬೆನಿಫಿಷಿಯರೀಸ್ ಫಿಕ್ಸ್ ಮಾಡುವುದು ಕಡಿಮೆ, ಯಾವುದೇ ವೆಲ್‌ಫೇರ್ ಅವರಿಗೆ ಸಿಕ್ಕಲಿಲ್ಲ. ಬೆನಿಫಿಷಿಯರೀಸ್ ಕಡಿಮೆ ಮಾಡಿ ೧೦೦ ಪರ್ಸೆಂಟ್ ಅಚೀವ್‌ಮೆಂಟ್ ಎಂದು ಹೇಳುತ್ತೀರಿ. ಪ್ರಪೋಷನೇಟ್ ಆಗಿ ಹೇಳಿ ಹಿಂದೆ ಸರ್ಕಾರದವರು ಒಂದು ಲಕ್ಷ ಮಾಡಿದ್ದುದು ಇದ್ದರೆ, ತಾವು ಒಂದು ಲಕ್ಷ ಮಾಡಿ, ಅದರಲ್ಲಿ ಎಷ್ಟು ಅಚೀವ್ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ಹಿಂದೆ ನಾವು ೫೦ ಸಾವಿರ ಸೈಟು ಕೊಡುತ್ತೇವೆಂದು ಹೆಳಿದ್ದುದು ಇದ್ದರೆ ತಾವು ೫೦ ಸಾವಿರ ಸೈಟು ಕೊಡುತ್ತೇವೆಂದು ಹೇಳಿ. ಈಗ ತಾವು ೧೦ ಸಾವಿರ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ತಾವು ಪ್ರಪೋಷನ್ ಹೇಳಿ ಆಗ ಗೊತ್ತಾಗುತ್ತದೆ. ತಾವು ಎಷ್ಟು ಕೆಲಸ ಮಾಡಿದ್ದೀರಿ ಎನ್ನುವುದು.

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖಾರ್ಗೆಯವರು ಪ್ರಸ್ತಾಪ ಮಾಡಿದಂತೆ ನಾವು ಗುರಿಯನ್ನು ಬಹಳ ಕಡಿಮೆ ಇಟ್ಟುಕೊಂಡು ಆ ಗುರಿಯನ್ನು ನಾವು ಮುಟ್ಟಿದ್ದೇವೆಂಬ ಹುಸಿ ಮಾತನ್ನು ಹೇಳುತ್ತೇವೆಂದು ಅವರು ಹೇಳಿದ್ದಾರೆ. ಅದು ಸರಿಯಲ್ಲ.

ಕೇಂದ್ರ ಸರ್ಕಾರದವರು ಶಿಫಾರಸು ಮಾಡಿದ ಕಾರ್ಯಕ್ರಮಗಳಲ್ಲಿ ಗುರಿಯನ್ನು ಸಾಧಿಸಿ ಆ ಪಟ್ಟಿಯಲ್ಲಿ ನಾವು ೪ನೇ ಸ್ಥಾನವನ್ನು ಮುಟ್ಟಿದ್ದೇವೆ, ೫ನೇ ಸ್ಥಾನವನ್ನು ಮುಟ್ಟಿದ್ದೇವೆಂದು ಇಲ್ಲಿ ಹೇಳಬಹುದು. ಗುರಿಯನ್ನು ನಾವು ಕಡಿಮೆ ಇಟ್ಟುಕೊಂಡು ಆ ಗುರಿಯನ್ನು ಮುಟ್ಟಿದ್ದೇವೆ ಎನ್ನುವಂಥ ಮಾತನ್ನು ನಾವು ಹೇಳುವುದಾದರೆ ಅದು ಆತ್ಮವಂಚನೆಯಾಗುತ್ತದೆ, ಆತ್ಮ ದ್ರೋಹವಾಗುತ್ತದೆ. ನಮ್ಮನ್ನೆಲ್ಲಾ ಆರಿಸಿ ಕಳುಹಿಸಿರತಕ್ಕಂಥ ಜನರ ಕಲ್ಯಾಣಕ್ಕೋಸ್ಕರ ಯಾವುದೇ ಅರ್ಥಪೂರ್ಣ ಯೋಜನೆಗಳನ್ನು ಅಳವಡಿಸಿಕೊಂಡು ಅವುಗಳ ಪ್ರತಿಫಲವನ್ನು ಅವರಿಗೆ ತಲುಪಿಸಬೇಕೆಂದು ಕೆಲಸ ಮಾಡತಕ್ಕ ಜನರು ನಾವು. ಹಿಂದೆ ಇಂಥ ವಿಚಾರಗಳು ನಡೆಯುತ್ತಿದ್ದುವು. ಆದರೆ ಅವರು ಹೇಳುವಂಥ ರೀತಿಯಲ್ಲಿ ನಾವೂ ಹೇಳುವುದಾದರೆ ಸುಮಾರು ೬ ಲಕ್ಷ ನಿವೇಶನಗಳನ್ನು ನಾವು ಈಗಾಗಲೇ ಹಂಚಿದ್ದೇವೆ. ೫.೨೭ ಲಕ್ಷ ಜನತಾ ಮನೆಗಳನ್ನು ನಾವು ಈಗಾಗಲೇ ಬಡ ಜನತೆಗೆ ಒದಗಿಸಿಕೊಟ್ಟಿದ್ದೇವೆ......

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಹೇಳುತ್ತಿರುವುದು ಈ ಯೋಜನೆ ಪ್ರಾರಂಭವಾಗಿ ನಿಂದ ಇದುವರೆಗಿನದ್ದೂ ಸೇರಿಸಿ ಹೇಳುತ್ತಿದ್ದೀರಿ. ಇದು ಸರಿಯಲ್ಲ. ನೀವು ಹೇಳುತ್ತಿರುವುದು ಕೇವಲ ೪ ವರ್ಷದ ಅಥವಾ ೫ ವರ್ಷದ ಸಾಧನೆ ಅಲ್ಲ......

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೆ, ಜನತಾ ಮನೆಗಳನ್ನು ಕಟ್ಟುವುದಕ್ಕೆ ನಾವು ಇದುವರೆಗೆ ಕೊಡುತ್ತಿದ್ದ ೨೫೦೦ ರೂಪಾಯಿಗಳ ಮಿತಿಯನ್ನು ೪೫೦೦ ರೂಪಾಯಿಗಳಿಗೆ ಏರಿಸಿದ್ದೇವೆ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಿಗೆ ೧೦ ಸಾವಿರ ಆರ್. ಸಿ. ಸಿ. ಮನೆಗಳನ್ನು ಕಟ್ಟಿಸಿಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ......

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆರ್.ಎಲ್.ಇ.ಜಿ.ಪಿ. ಯಲ್ಲಿ ಈ ಯೋಜನೆ ಇದೆ. ಇದು ಕೇಂದ್ರ ಸರ್ಕಾರದ್ದು, ಇದಕ್ಕಾಗಿ ನೂರಕ್ಕೆ ನೂರರಷ್ಟು ಸಹಾಯ ಧನವನ್ನು ಕೇಂದ್ರವೇ ಕೊಡುತ್ತದೆ. ಇದು ತಮಗೂ ಗೊತ್ತಿದೆ. ನಾನು ನೇರವಾಗಿ ಹೇಳುವುದೇನೆಂದರೆ ೮೫–೮೬ರ ಸಾಲಿನಲ್ಲಿ ಏನು ಟಾರ್ಗೆಟ್‌ನ್ನು ನಿಗದಿ ಮಾಡಿದ್ದೀರಿ ? ಒಂದು ವೇಳೆ ಆ ವರ್ಷದ್ದು ಬೇಡವೆನ್ನುವುದಾದರೆ ಅದರ ಹಿಂದಿನ ಯಾವುದಾದರೂ ಒಂದು ವರ್ಷದ್ದು ಅಂದರೆ ೮೦–೮೧ರ ಸಾಲಿನಲ್ಲಿ ಮನೆಗಳು, ನಿವೇಶನಗಳು, ಅಥವಾ ಡೆಟ್ ರಿಲೀಫ್ ಆ್ಯಕ್ಟ್‌ನಲ್ಲಿ ಆಗಲಿ ಅಥವಾ ಲ್ಯಾಂಡ್ ರೀಫಾರಂಸ್‌ನಲ್ಲಾಗಲಿ ಒಂದು ಟಾರ್ಗೆಟ್ ತೆಗೆದುಕೊಂಡು ಅದಕ್ಕೂ ಇದಕ್ಕೂ ಕಂಪೇರ್ ಮಾಡಿ ನೂರಕ್ಕೆ ನೂರು ಪಾಲು ಗುರಿ ಸಾಧನೆ ಆಗಿದ್ದರೆ ಅಥವಾ ಕೇಂದ್ರ ಸರ್ಕಾರದ ಪಟ್ಟಿಯಲ್ಲಿ ೪ನೇ ಸ್ಥಾನ ಅಥವಾ ೫ನೇ ಸ್ಥಾನ ನೀವು ಮುಟ್ಟಿದ್ದರೆ ಅದನ್ನಾದರೂ ನೀವು ತೋರಿಸಿದರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ಪಿ. ಪ್ರಕಾಶ್.—ಸ್ವಾಮಿ, ಅಧ್ಯಕ್ಷರೆ, ಕಳೆದ ವರ್ಷ ಐ.ಆರ್.ಡಿ.ಪಿ. ಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕೊಟ್ಟಿರತಕ್ಕ ಮನೆಗಳಿಗೆ ೬.೪೭ ಲಕ್ಷ ಕುಟುಂಬಗಳಿಗೆ (ಫಲಾನುಭವಿಗಳಿಗೆ) ಎಲ್ಲಾ ರೀತಿಯ ಸಾಲಗಳನ್ನೂ ನಾವು ಕೊಟ್ಟಿದ್ದೇವೆ. ನಾನೂ ಹೇಳುತ್ತೇನೆ, ನಾವು ಗುರಿಯನ್ನು ಕಡಿಮೆ ಇಟ್ಟುಕೊಂಡು ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಈ ವ್ಯವಸ್ಥೆ ನಮ್ಮ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಅಂತಿಮವಾಗಿ ಈ ಗುರಿಯನ್ನು ನಿರ್ಧಾರ ಮಾಡತಕ್ಕವರು ಎಂದರೆ ಕೇಂದ್ರ ಸರ್ಕಾರದವರು. ಅವರು ನಿಗದಿ ಮಾಡಿದ ಗುರಿಯನ್ನು ನಾವು ಹೆಚ್ಚಿನ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಮುಟ್ಟಿದ್ದೇವೆ. ಈ ಗುರಿಯನ್ನು ನಿರ್ಧಾರ ಮಾಡತಕ್ಕ ವಿಚಾರವೂ ಕೂಡ ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರ ಆಯಾಯ ರಾಜ್ಯ ಸರ್ಕಾರಗಳಿಗೆ ಆಯಾಯ ಕಾರ್ಯಕ್ರಮಗಳಿಗೆ ಕುರಿತಾದಂತೆ ಇರುತ್ತದೆ. ಈ ಗುರಿಯನ್ನು ಮುಟ್ಟುವದಿಸೆಯಲ್ಲಿ ಕಳೆದ ೪ ವರ್ಷಗಳಲ್ಲಿ ನಾವು ಮಾಡಿರತಕ್ಕ ಕಾರ್ಯಕ್ರಮಗಳು, ೨೦ ಅಂಶದ ಕಾರ್ಯಕ್ರಮಗಳಲ್ಲಿ ಬಹಳಷ್ಟು ಹೆಚ್ಚಿನ ಯಶಸ್ಸನ್ನು ಗಳಿಸಿದ್ದೇವೆಂದು ಹೇಳಬಯಸುತ್ತೇನೆ. ೮೪–೮೫ರಲ್ಲಿ ಒಪ್ಪಿತವಾದ ಯೋಜನಾ ವೆಚ್ಚ ೬೦೬ ಕೋಟಿ ರೂಪಾಯಿ ಆಗಿದ್ದರೆ ನಾವು ನಿಜವಾಗಿ ಖರ್ಚು ಮಾಡಿರತಕ್ಕದ್ದು ೭೦೬ ಕೋಟಿ ರೂಪಾಯಿಗಳು. ಆಯೋಗದವರು ನಮಗೆ ಒಪ್ಪಿಸಿರತಕ್ಕ ರೀತಿಯಲ್ಲಿ ೧ ವರ್ಷದಲ್ಲಿ ೬೦೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತಿಳಿಸಿದ್ದರೆ ನಾವು ಖರ್ಚು ಮಾಡಿರತಕ್ಕದ್ದು ೭೦೬ ಕೋಟಿ ರೂಪಾಯಿಗಳು. ಮಾನ್ಯ ಅಧ್ಯಕ್ಷರೆ, ಅದೇರೀತಿಯಲ್ಲಿ ೧೯೮೫–೮೬ನೇ ಸಾಲಿನಲ್ಲಿ ಇಟ್ಟಿರತಕ್ಕಂಥದ್ದು ೬೫೦ ಕೋಟಿ ರೂಪಾಯಿಗಳು. ಆದರೆ ಖರ್ಚುಮಾಡಿದ್ದುದು ೭೨೫ ಕೋಟಿ ರೂಪಾಯಿಗಳು, ಈ ಎರಡು ವರ್ಷಗಳಲ್ಲಿ ಅಂದರೆ ೧೯೮೪–೮೫, ೧೯೮೫––೮೬ನೇ ಸಾಲಿನಲ್ಲಿ ಮಾಡಿರುವ ಖರ್ಚನ್ನು ನೋಡಿದಾಗ ನಾವು ಸಂಪನ್ಮೂಲಗಳನ್ನು ಕ್ರೋಢೀಕರಿಸಿದಷ್ಟು ಖರ್ಚು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರದವರೇ ಇದನ್ನು ನಿರ್ವಹಿಸಬೇಕೆಂದು ಕೇಳಿರುವ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯ

ಗಳಿಗೆ ಹಣವನ್ನು ಕೊಡುತ್ತಿರುತ್ತಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂದರೆ ೬೫೦ ಕೋಟಿ ರೂಪಾಯಿಗಳನ್ನು ನಿಗಧಿ ಮಾಡಿದ್ದರೂ ೭೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವುದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ಕಳೆದ ನಾಲ್ಕು ವರ್ಷಗಳಲ್ಲಿ ಭೀಕರ ಬರಗಾಲ ಸುಮಾರು ೧೭ ಜಿಲ್ಲೆಗಳಲ್ಲಿ ಆವರಿಸಿ ಜನರು ಕ್ಷಾಮಕ್ಕೆ ತುತ್ತಾದರು ಕೊನೆಯಪಕ್ಷ ಅವರಿಗೆ ಕುಡಿಯುವ ನೀರನ್ನಾದರೂ ಒದಗಿಸಬೇಕೆಂದು ಸರ್ಕಾರ ಗುರಿಯನ್ನು ಇಟ್ಟು ಕೊಂಡಿತು. ಸುಮಾರು ೩-೪ ಕಿಲೋಮೀಟರು ದೂರಕ್ಕೆ ಹೋಗಿ ಹೆಂಗಸರು ಮಕ್ಕಳು ಖಾಲಿ ಕೊಡವನ್ನು ತರತಕ್ಕಂಥ ಪರಿಸ್ಥಿತಿ ಇತ್ತು. ಜನಪ್ರಿಯರಾದ ಶ್ರೀ ಮಾನ್ ನಜೀರ್ ಸಾಬರನ್ನು ನೀರ್ ಸಾಬ್ ಎಂತಲೇ ಇಂದಿಗೂ ಜನರು ಕರೆಯುತ್ತಿರುವ ಪ್ರತೀತಿ ಇದೆ. ಸುಮಾರು ೫೦ ಸಾವಿರ ಕೊಳವೇಬಾವಿಗಳನ್ನು ತೋಡಿಸುವ ಸಲುವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯ ಸರ್ಕಾರದವರು ಖರ್ಚುಮಾಡಿರುವುದನ್ನು ನೋಡಿದರೆ ಭಾರತದ ಯಾವುದೇ ರಾಜ್ಯ ಸರ್ಕಾರವು ಇಂಥ ಕೆಲಸವನ್ನು ಮಾಡಿಲ್ಲವೆನ್ನುವುದು ಗೊತ್ತಾಗುತ್ತದೆ ಇದು ನಮ್ಮ ಸರ್ಕಾರಕ್ಕೆ ಅಭಿಮಾನ ತಂದು ಕೊಡತಕ್ಕಂಥ ವಿಚಾರ. ಸುಮಾರು ೨೫೦ ಜನರು ಇರತಕ್ಕಂಥ ಹಳ್ಳಿಗೂ ಒಂದು ಬಾವಿ. ಎರಡುಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಯ ಕುಡಿಯುವ ನೀರಿನ ಕಾರ್ಯಕ್ರಮವನ್ನು ವ್ಯಾಪಕವಾಗಿ ತರತಕ್ಕಂಥ ಪ್ರಯತ್ನ ನಿಜಕ್ಕೂ ಅಭಿಮಾನ ಪೂರ್ವಕವಾದ ಪ್ರಯತ್ನ. ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆಗಾಗಿಯೇ ಖರ್ಚುಮಾಡಿದ್ದೇವೆ. ಕಳೆದ ನಾಲ್ಕು ವರ್ಷದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬರಗಾಲ ಬರುತ್ತದೆಂದು ನಿರೀಕ್ಷೆ ಇರಲಿಲ್ಲ. ಕನಿಷ್ಠ ಕುಡಿಯುವ ನೀರನ್ನು ಒದಗಿಸು ವುದರ ಜೊತೆಗೆ ೩೦ ಲಕ್ಷ ಬಡ ಕುಟುಂಬಗಳಿಗೆ ಎರಡು ರೂಪಾಯಿಗಳಿಗೆ ಒಂದು ಕೇಜಿಯಂತೆ ಒಂದು ಕುಟುಂಬಕ್ಕೆ ೧೦ ಕೆ. ಜಿ. ಅಕ್ಕಿ, ಅರ್ಧಬೆಲೆಗೆ ಕೊಡುವ ಬಟ್ಟೆ, ೧೦೭ ಲಕ್ಷ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ಒದಗಿಸತಕ್ಕಂಥ ಕಾರ್ಯಕ್ರಮ ಇದೆಲ್ಲಾ ಯೋಜನೆಗಳನ್ನು ಹಾಕಿಕೊಳ್ಳಲಾಯಿತು, ಬಹಳ ಬುದ್ಧಿವಂತರಾಗಿರತಕ್ಕಂಥ ಜನ ಇದು ಒಂದು ಅಗ್ಗದ ಪ್ರಚಾರವೆಂದೇ ಹೇಳಿದರು. ಜಿಲ್ಲಾ ಪರಿಶತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಇಂಥ ಒಂದು ವ್ಯಾಪಕವಾದ ಪ್ರಚಾರ ಸಾಧನೆ ಮಾಡಿದ್ದೀರೆಂದು ಹೇಳಿದರು. ಈ ಸನ್ನಿವೇಶವನ್ನು ಉಪ ಯೋಗಿಸಿಕೊಂಡು ಆಪಾದನೆ ನಿರ್ಮಾಣ ಮಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಎಸ್. ಜಿ. ನಂಜಯ್ಯನ ಮಠ್.—ಕುಡಿಯುವ ನೀರಿನ ಯೋಜನೆ ರಾಜ್ಯ ಸರ್ಕಾರದ್ದೇ ಅಲ್ಲ, ಕೇಂದ್ರ ಸರ್ಕಾರದ್ದು ಇರುತ್ತದೆ.

ಶ್ರೀ ಕೆ. ಮಲ್ಲಪ್ಪ.—ಗರೀಬಿ ಹಠಾವೋ ಸೃಷ್ಟಿಮಾಡಿ ವಂಚನೆ ಮಾಡಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಇದು ಬಹಳ ದೂರದೃಷ್ಟಿಯುಳ್ಳ ಒಂದು ಕಾರ್ಯಕ್ರಮ. ಈಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ಕೊಳವೇ ಬಾವಿಯಿಂದ ಕುಡಿಯುವ ನೀರನ್ನು ಕೊಡುವುದು ಬಹಳ ಆರೋಗ್ಯಕರ. ಒಂದುಸಾವಿರ ಜನರಲ್ಲಿ ೧೧೭ ಜನರು ಮಲಿನ ನೀರನ್ನು ಕುಡಿಯುವುದರಿಂದ ಇಪ್ಪತ್ತು ಜನ ಸಾಯುತ್ತಿದ್ದಾರೆ. ಆರೋಗ್ಯಕ್ಕಾಗಿ ಖರ್ಚುಮಾಡುತ್ತಿರತಕ್ಕಂಥ ಹಣಕ್ಕೆ ನಮಗೆ ಮಿತಿಯಿಲ್ಲದ ರೀತಿಯಲ್ಲಿ ಕಡಿತ ಉಂಟಾಗುತ್ತಿದೆ. ಪೌಷ್ಟಿಕ ಆಹಾರ, ಶುದ್ಧವಾದ ನೀರನ್ನು ಜನತೆಗೆ ಕೊಡುವ ಮೂಲಕ ನಾವು ಆರೋಗ್ಯ ಇಲಾಖೆಗೆ ಖರ್ಚುಮಾಡತಕ್ಕಂಥ ಹಣವೂ ಕಡಿಮೆಯಾಗುತ್ತಿದೆ. ಇದು ನಾವು ದೂರದೃಷ್ಟಿಯಿಟ್ಟು ಕೊಂಡಿರತಕ್ಕ ಕಾರ್ಯಕ್ರಮ ಆ ಪಟ್ಟಿಯನ್ನು ಕೊಡುತ್ತೇನೆ. ನಿಮ್ಮ ಮಾತಿನ ಹಿನ್ನೆಲೆಯಲ್ಲಿ ಇರತಕ್ಕದ್ದು ಉದ್ಯೋಗ ಸೃಷ್ಟಿ ಮಾಡತಕ್ಕದ್ದಾಗಿದೆ. ೯೦ ಪರ್ಸೆಂಟ್ ಉತ್ಪಾದಿತವಾಗಿರತಕ್ಕ ಬಟ್ಟೆಯನ್ನು ೧೧ ಲಕ್ಷ ಜನರಿಗೆ ಉದ್ಯೋಗ ಕೊಡತಕ್ಕ ಗಿರಣಿಗಳಲ್ಲಿ ತಯಾರಾಗುತ್ತಿದೆ. ಮಾನ್ಯ ಕೃಷ್ಣನ್‌ರವರು ಇದನ್ನು ಒಪ್ಪಬಹುದು. ಆ ಗಿರಣಿಗಳು ಬೊಂಬಾಯಿಯಲ್ಲಿ ಅಥವಾ ಬೆಂಗಳೂರಿನಲ್ಲಿ ಅಥವಾ ದಾವಣಗೆರೆಯಲ್ಲಿ ಇರಬಹುದು. ೯೦ ಪರ್ಸೆಂಟ್ ಉತ್ಪಾದಿತ ಬಟ್ಟೆಯಿಂದ ೧೧ ಲಕ್ಷ ಜನರಿಗೆ ಉದ್ಯೋಗ ಕೊಡತಕ್ಕ ಕಾರ್ಯಕ್ರಮವನ್ನು ಕೈಗೊಳ್ಳು ವುದೇನಿದೆ. ಇದು ಕೈಮಗ್ಗದ ವ್ಯಾಪ್ತಿಯಲ್ಲಿ ಬರತಕ್ಕದ್ದು. ವಿದ್ಯುತ್ ಚಾಲಿತ ಯಂತ್ರಗಳ ಮೂಲಕ ನೇಯತಕ್ಕ ಬಟ್ಟೆ ೧೦ ಪರ್ಸೆಂಟ್ ಆದರೆ ಅದರಿಂದ ೭೫ ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿದಂತಾಗು ತ್ತದೆ. ಇದನ್ನು ತಾವು ನೋಡಬಹುದು. ಇವತ್ತು ಬಹಟ್ಟಿಯಲ್ಲಿರತಕ್ಕ ನೇಕಾರರ ಉದ್ಯೋಗ ಅವಕಾಶವನ್ನು ನೋಡಿದರೆ ಅವರಲ್ಲಿ ಆರ್ಥಿಕ ಬದಲಾವಣೆಗಳನ್ನು ತರಬೇಕೆಂಬ ಮೂಲ ದೃಷ್ಟಿಕೋನ ವನ್ನು ನಾವು ಇಟ್ಟುಕೊಂಡು ಗಾಂಧೀಜಿಯವರ ಪರಿಕಲ್ಪನೆಯಂತೆ ಈ ದೇಶದ ಕಾರ್ಮಿಕ ಜನರಿಗೆ ರಾಜ ಕೀಯ ಸ್ವಾತಂತ್ರ್ಯ ಒಂದೇ ಅಲ್ಲ ಆರ್ಥಿಕ ಸ್ವಾತಂತ್ರ್ಯ ಉಳಿಯಬೇಕಾದರೆ ಅಲ್ಲಿನ ಕೃಷಿಕರ ಜೊತೆಗೆ

ಅವರನ್ನು ಅವಲಂಬಿತವಾಗಿರತಕ್ಕ ಕಸುಬುದಾರರನ್ನು ಉಳಿಸಬೇಕೆಂಬ ಯೋಜನೆ ಇದಾಗಿದೆ. ಆ ಕಾರಣದಿಂದ ಅಗ್ಗದ ದರಗಳಲ್ಲಿ ಬಟ್ಟೆಯನ್ನು ಕೊಡತಕ್ಕದ್ದು, ಶಾಲಾ ಮಕ್ಕಳಿಗೆ ಬಟ್ಟೆಯನ್ನು ಕೊಡತಕ್ಕದ್ದು ಮತ್ತು ಪುಸ್ತಕಗಳನ್ನು ಕೊಡತಕ್ಕದ್ದು ಈ ಎರಡು ಕಾರ್ಯಕ್ರಮಗಳ ಬದಲಾವಣೆಯನ್ನು ತರುವುದಕ್ಕೆ ಮಾಡಿರತಕ್ಕ ಕಾರ್ಯಕ್ರಮಗಳು ಇವಾಗಿವೆ. ಪ್ರಾಥಮಿಕ ಶಾಲೆಗಳಲ್ಲಿ ಬಟ್ಟೆ ಹಂಚುವ ಕಾರ್ಯಕ್ರಮ ಬಂದಮೇಲೆ ೭೨ ಲಕ್ಷ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಮೊದಲು ೫೪ ಲಕ್ಷ ಮಾತ್ರ ಬರುತ್ತಿದ್ದರು. ಉಚಿತ ಪಠ್ಯಪುಸ್ತಕ ಹಂಚುವ ಸಲುವಾಗಿ ೪೦೦ ನಮೂನೆಯ ಪಠ್ಯಪುಸ್ತಕ ಮುದ್ರಿಸ ಬೇಕಾಗುತ್ತದೆ. ಅದಕ್ಕಾಗಿ ೪-೫ ಕೋಟಿ ರೂಪಾಯಿ ಗಳಿಗಿಂತ ಹೆಚ್ಚು ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಒಟ್ಟು ೩ ಕೋಟಿಗಿಂತ ಹೆಚ್ಚು ಪುಸ್ತಕಗಳನ್ನು ಮುದ್ರಿಸುತ್ತೇವೆ. ಅವರಲ್ಲಿ ಒಂದು ಮತ್ತು ಎರಡನೇ ತರಗತಿಗಳಿಗೆ ತಲಾ ೧. ೧೦ ಪೈಸೆ ಪುಸ್ತಕಗಳನ್ನು ಕೊಡುತ್ತೇವೆ. ಕೆಲವು ಕಡೆ ಕುಚೋದ್ಯ ಕುಚೇಷ್ಟೆಗಳು ನಡೆದಿವೆ. ಕೆಲವು ಶಾಲೆಗಳು ಗೋಡನ್‌ಗಳಾಗಿವೆ, ಮಳಿಗೆಗಳಾಗಿವೆ ರೆಎಂದು ಹೇಳುತ್ತಾರೆ. ವಿದ್ಯಾಭ್ಯಾಸ ಕೊಡುವುದು ಬಿಟ್ಟು ಪಠ್ಯಪುಸ್ತಕ ಹಂಚುವ ಕೆಲಸ ಮಾಡಿದ್ದಾ ರೆಂದು ಕೆಲವರು ಹೇಳುತ್ತಾರೆ. ಈ ಮಾತಿನ ಹಿನ್ನೆಲೆಯಲ್ಲಿ ಮಾನ್ಯ ಬಸವಲಿಂಗಪ್ಪನವರು ಮತ್ತು ಖಾರ್ಗೆಯವರು ನಾನು ಹೇಳುವುದನ್ನು ಒಪ್ಪುತ್ತಾರೆಂದು ಭಾವಿಸಿದ್ದೇನೆ. ಅವಿವೇಕಿಗಳು ಮತ್ತು ದುರಹಂಕಾರಿಗಳಾಗಿರತಕ್ಕ ಅನೇಕ ಉಪಾಧ್ಯಾಯರು ಪಠ್ಯಪುಸ್ತಕ ಇಲ್ಲವೆಂಬ ಕಾರಣದಿಂದ ಮಕ್ಕಳನ್ನು ಹೊರಗಡೆ ಕಳುಹಿಸಿದಾಗ ಅವಮಾನಕರ ರೀತಿಯಲ್ಲಿ ಮಕ್ಕಳು ಹೊರಗೆ ಬಂದಿದ್ದಾರೆ, ಈ ದೇಶದಲ್ಲಿ ಅನೇಕ ಮಕ್ಕಳು ೫ನೇ ತರಗತಿಯಲ್ಲಿ, ತರಗತಿ ಬಿಟ್ಟು ಹೋಗಿದ್ದಾರೆ. ೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ವಿದ್ಯೆ ಕೊಡಬೇಕೆಂಬ ಪದ್ಧತಿ ಜಾರಿಯಲ್ಲಿದ್ದರೂ ೪೦ ವರ್ಷದ ಅವಧಿಯಲ್ಲಿ ೩೭ ಲಕ್ಷ ಜನ ಮಾತ್ರ ಅಕ್ಷರಸ್ಥರಾಗಿದ್ದಾರೆ. ಅನೇಕರು ಅಕ್ಷರ ಸಂಸ್ಕೃತಿಗೆ ಒಳಗಾಗಿಲ್ಲ. ಈ ಸದನದಲ್ಲಿ ಕುಳಿತಿರ ತಕ್ಕ ಎಲ್ಲಾ ಸದಸ್ಯರ ಬಗ್ಗೆ ಯೋಚಿಸುವುದಾದರೆ ಪ್ರಾಯಶಃ ೧೦-೧೫-೨೦ ಜನರನ್ನು ಬಿಟ್ಟರೆ ಉಳಿದ ವರೆಲ್ಲರೂ ೨-೩ನೇ ತಲೆಮಾರಿನಿಂದ ಅಕ್ಷರ ಸಂಸ್ಕೃತಿಗೆ ಒಳಗಾಗಿರತಕ್ಕವರು, ಅವರ ತಂದೆ ಅಥವಾ ತಾತ ಸಂಸ್ಕೃತಿಗೆ ಒಳಗಾಗಿರಬಹುದು. ೨-೩ನೇ ತಲೆಮಾರಿನವರು ಅಕ್ಷರ ಸಂಸ್ಕೃತಿಗೆ ಒಳಗಾಗಿರು ವುದನ್ನು ನೋಡಿ ಈ ದೇಶದ ಇತಿಹಾಸದಲ್ಲಿ ಸಮಾಜ ಶಾಸ್ತ್ರ ಹೇಗಿದೆ ಎಂಬುದನ್ನು ಅರ್ಥ ಮಾಡಿ ಕೊಳ್ಳಬೇಕಾಗುತ್ತದೆ. ಕಾರಣದಿಂದ ಅನುಮಾನಕ್ಕೆ ಒಳಗಾಗಿರತಕ್ಕ ಜನಗಳಿಗೆ ಆತ್ಮ ಸ್ಥೈರ್ಯವನ್ನು ತುಂಬಿ ಅಕ್ಷರ ಸಂಸ್ಕೃತಿಗೆ ಒಳಪಡಿಸಬೇಕೆಂಬ ಮಹತ್ವಪೂರಿತ ಕಾರ್ಯಕ್ರಮವೆಂದರೆ ಪಠ್ಯಪುಸ್ತಕ ಮತ್ತು ಊಟ ಬಟ್ಟೆಯನ್ನು ಕೊಡತಕ್ಕದ್ದಾಗಿದೆ. ವಿದ್ಯಾಭ್ಯಾಸ ಮಾಡಿದವರೆಲ್ಲರೂ ಉದ್ಯೋಗಿಗಳಾಗ ಬೇಕೆಂದು ಅಲ್ಲ. ಇವೊತ್ತಿನ ದಿವಸ ೫ ಕೋಟಿ ಜನ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟಿರುತ್ತಾರೆ. ಇದು ತಮಗೆಲ್ಲಾ ಗೊತ್ತಿದೆ. ವರ್ಷಕ್ಕೆ ೨೫ ಲಕ್ಷ ಕ್ಕಿಂತ ಹೆಚ್ಚು ಮಂದಿ ಎಸ್. ಎಸ್. ಎಲ್ ಸಿ. ಪಾಸ್ ಆದ ಯುವಕರು ಹೊರಬರುತ್ತಿದ್ದಾರೆ. ಅವರು ತಮ್ಮ ಕಣ್ಣಿನಲ್ಲಿ ಚೂರಿ ಇಟ್ಟುಕೊಂಡಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ ಚಿಂತಿಸುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ರಾಜ್ಯದಲ್ಲಿ ೫ ಕೋಟಿ ಜನ ನಿರುದ್ಯೋಗಿಗಳು ಎಂದು ಹೇಳು ತ್ತಿದ್ದಾರೆ. ಅದರಲ್ಲಿ ೨೫ ಲಕ್ಷ ಎಸ್. ಎಸ್. ಎಲ್. ಸಿ. ಆದವರು ಎಂದು ಹೇಳುತ್ತಿದ್ದಾರೆ. ಅವರು ಏಳೂವರೆ ಲಕ್ಷ ಮಾತ್ರ ಇದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಇಡೀ ಭಾರತ ದೇಶದಲ್ಲಿ ಅಷ್ಟು ಮಂದಿ ಇದ್ದಾರೆಂದು ನಾನು ಹೇಳುತ್ತಿದ್ದೇನೆ, ಕರ್ನಾಟಕದ್ದು ಮಾತ್ರವಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಅವರು ಎಕ್ಸ್‌ಪ್ರೆಸ್ ಸ್ಪೀಡ್‌ನಲ್ಲಿ ಹೋಗು ತ್ತಿದ್ದಾರೆ. ಈ ಕಡೆ ಅವರು ಏನು ಮಾತನಾಡುತ್ತಾರೆ ಎಂಬುದೇ ಅನೇಕಸಾರಿ ಗೊತ್ತಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರೇ ಹೇಳಿದರು ಗೌರ್ನರ್ ಭಾಷಣ ಕೂಡ ೩೦ ಪೇಜ್ ಇದ್ದದ್ದು ೨೦ ಪೇಜ್ ಆಗಿ ನಂತರ ೧೦ ಪೇಜಿಗೆ ಬಂದಿದೆ ಎಂದು. ಅದನ್ನು ಸಮರ್ಥ ಅಡ್ವೋಕೇಟ್ ಮಾಡುವ ಸಲುವಾಗಿ ಒಳ್ಳೆಯ ವಕೀಲರು ಬೇಕು, ಅದಕ್ಕೆ ಅವರು ಪ್ರಕಾಶ್ ಮತ್ತು ವೈ.ಕೆ. ರಾಮಯ್ಯನವರನ್ನು ಹಿಡಿದಿದ್ದಾರೆ, ಅವರು ವಕಾಲತ್ತು ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೀವು ಈ ಕಡೆಯವರ ಸಲುವಾಗಿ ಹೇಗೆ ವಕಾಲತ್ತು ಮಾಡುತ್ತೀರೋ ಹಾಗೆ ಅವರು **ಮಾಡುತ್ತಾರೆ.** ಅವರು ಪ್ರಾಸಿಕ್ಯೂಷನ್ ಲಾಯರ್ ನೀವು ಡಿಫೆನ್ಸ್ ಲಾಯರ್.

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ ವಕಾಲತ್ತು ಮಾಡುತ್ತಾರೆ, ಅಡ್ವೊಕೇಟ್ ಮಾಡುತ್ತಾರೆ ಎಂದು ಹೇಳಿದಾಗ ಒಂದು ಸಣ್ಣ ವಿಷಯ ಜ್ಞಾಪಕಕ್ಕೆ ಬರುತ್ತದೆ. ಮಾನ್ಯ ಬಸವಲಿಂಗಪ್ಪನವರು ಅದರ ಬಗ್ಗೆ ಹೆಚ್ಚು ತಮಾಷೆ ಮಾಡದಿದ್ದರೆ ಹೇಳುತ್ತೇನೆ. ನಾವು ನಡೆದು ಬಂದಿರತಕ್ಕ ಪರಂಪರೆಯಲ್ಲಿ ವಿಲಿಯಂ ಕಾಂಕರ್ ಎಂಬುವಂಥ ಒಬ್ಬ ವ್ಯಕ್ತಿ ಇಂಗ್ಲೇಂಡಿನಲ್ಲಿ ಅಡ್ವೊಕೇಟ್ ಗಳಲ್ಲಿ ಆಡಿಯನ್ಸ್ ಬ್ಯಾಟಲ್ ಎಂದು ಪ್ರಾರಂಭ ಮಾಡಿದರು. ನ್ಯಾಯ, ಅನ್ಯಾಯವನ್ನು ಯಾರೋ ಇಬ್ಬರು ನಿರ್ಣಯ ಮಾಡುವ ಹಾಗಿದ್ದರೆ ಹೊಡೆದಾಡಲಿ. ಜಯಶೀಲನಾಗುವನ ಕಡೆಗೆ ಸತ್ಯ ಇರುತ್ತದೆ ಎಂದು ನಿರ್ಣಯ ಮಾಡಿದರು. ಆಗ ವಿಲಿಯಂ ಗ್ರಾಬ್ ಎಂಬ ವ್ಯಕ್ತಿ ೧೫ನೇ ಶತಮಾನದವರೆಗೆ ಕೂಡ ಒಬ್ಬ ದೊಡ್ಡ ಅಡ್ವೊಕೇಟ್ ಆಗಿದ್ದ. ಏಕೆಂದರೆ ಪ್ರತಿಯೊಬ್ಬರೂ ಅವನನ್ನೇ ನೇಮಕ ಮಾಡುತ್ತಿದ್ದರು. ವಿಲಿಯಂ ಗ್ರಾಂಬ್ ಬಂದಿದ್ದಾನೆ ಒಬ್ಬರ ಪರವಾಗಿ ವಕಾಲತ್ತು ಮಾಡುವುದಕ್ಕೆ ಎಂದು ಹೇಳಿದ ತಕ್ಷಣ ಯಾರೂ ಕೂಡ ತಮ್ಮ ಸವಾಲನ್ನು ಕೋರ್ಟಿನಲ್ಲಿ ಹಾಕುತ್ತಿರಲಿಲ್ಲ. ೧೫೧೫ರಲ್ಲಿ ಬದಲಾವಣೆಯಾಗಿ ಆಗ ಅಡ್ವೊಕೇಟ್ ಜನರಲ್‌ಗೆ ಕೊಲೆ ಅಪರಾಧಕ್ಕೆ ಒಳಗಾಗಿರತಕ್ಕ ಒಬ್ಬ ವ್ಯಕ್ತಿ ಹೇಳುತ್ತಾನೆ, ಈ ಕಾನೂನಿನಲ್ಲಿ ಬದಲಾವಣೆ ತಂದಿಲ್ಲ, ವಿಲಿಯಂ ಕಾಂಕರ್ ಕಾಲದಲ್ಲಿದ್ದಂಥ ಕಾನೂನೇ ಇರುವುದರಿಂದ ನಾನು ಅಡ್ವೊಕೇಟ್ ಜನರಲ್ಲನ್ನು ಯುದ್ಧಕ್ಕೆ ಆಹ್ವಾನಿಸುತ್ತೇನೆ ಎಂಬ ಮಾತನ್ನು ಹೇಳಿದಾಗ ನಂತರ ಕಾನೂನಿನಲ್ಲಿ ಬದಲಾವಣೆ ಇಂಗ್ಲೆಂಡಿನಲ್ಲಿ ಆಗಿದೆ. ಆದ್ದರಿಂದ ನಾವು ವಕಾಲತ್ತು ಮಾಡುತ್ತೇವೆ ಎಂದರೆ ಹಣಕ್ಕಾಗಿ ಮಾಡುವ ವಕಾಲತ್ತು ಬೇರೆ. ಜನರಿಂದ ಆರಿಸಲ್ಪಟ್ಟಿರತಕ್ಕ ನಾವು ನಿಜವಾಗಿಯೂ ಕೂಡ ನಾಲ್ಕು ವರ್ಷಗಳಿಂದ ಮಾಡಿರತಕ್ಕ ಕಾರ್ಯಕ್ರಮಗಳೇನಿವೆ ಅವು ಬಡತನ ನಿರ್ಮೂಲನೆಗೆ ಮಾಡಿರುವಂಥ ಕಾರ್ಯಕ್ರಮಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಜನತಾ ಪಕ್ಷದ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ ಎಂದು ಹೇಳಿದೆ.

ಅಧ್ಯಕ್ಷರು.—ಅವರು ಜನತಾ ಪಕ್ಷದ ವಕೀಲರು. ನೀವು ಕಾಂಗ್ರೆಸ್ ಪಕ್ಷದ ವಕೀಲರು. ಅವರೂ ಸರಿಯಾಗಿ ಆರ್ಗ್ಯುಮೆಂಟ್ ಮಾಡಲಿ. ನೀವು ಸರಿಯಾಗಿ ಮಾಡಿ. ಇಬ್ಬರೂ ಮಾಡಲಿ. ಮಾನ್ಯ ಪ್ರಕಾಶ್ ಅವರೇ, ನೀವು ಚೆನ್ನಾಗಿ ಮಾತನಾಡುತ್ತೀರಿ ಎಂದು ವಿಷಯಾಂತರ ಮಾಡಿಸುತ್ತಾರೆ. ಅದಕ್ಕೆ ನೀವು ಒಲಿಯಬೇಡಿ. ನೀವಿಬ್ಬರೂ ಚೆನ್ನಾಗಿ ಕೆಲಸ ಮಾಡಿದರೆ ನನಗೆ ಬಹಳ ಸಂತೋಷ.

ಶ್ರೀ ಎಂ.ಪಿ. ಪ್ರಕಾಶ್.—ಕಳೆದ ನಾಲ್ಕು ವರ್ಷಗಳಿಂದ ಬೇರೆ ಬೇರೆ ದೃಷ್ಟಿಕೋನಗಳಿಂದ ಆರ್ಥಿಕ ಆಯಾಮಗಳನ್ನು ನಾವು ಸೃಷ್ಟಿಸಿದ್ದೇವೆ. ಮಂಡಲ ಪಂಚಾಯಿತಿ ಮತ್ತು ಪಂಚಾಯತ್ ರಾಜ್ಯವನ್ನು ಜಾರಿ ಮಾಡುವ ದೃಷ್ಟಿಕೋನದಲ್ಲಿಯೂ ಕೂಡ ಅದರ ಹಿನ್ನೆಲೆಯ ಪೂರ್ವಸಿದ್ಧತೆ ಇದೆ. ಪೂರ್ವಸಿದ್ಧತೆ ಎಂದರೆ ಗ್ರಾಮೀಣ ಪ್ರದೇಶದಲ್ಲಿರತಕ್ಕ ಜನರಿಗೆ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕದ್ದು, ಸಂಪನ್ಮೂಲವನ್ನು ಹಂಚತಕ್ಕದ್ದು ಅದರ ಜೊತೆಗೆ ಗ್ರಾಮಸ್ವರಾಜ್ಯದ ಪರಿಕಲ್ಪನೆಯ ಮೂಲಕವಾಗಿ ನಿರಕ್ಷರತೆಯನ್ನು ಹೋಗಲಾಡಿಸುವ ಪ್ರಯತ್ನ ಮತ್ತು ಅಲ್ಲಿಯ ಸಂಪನ್ಮೂಲವನ್ನು ಸೃಷ್ಟಿಮಾಡುವಂಥ ಪ್ರಯತ್ನ, ಕೃಷಿ ರಂಗದ ಮೇಲೆ ಅವಲಂಬಿತರಾದ ಕೃಷಿ ಕಾರ್ಮಿಕರಿಗೆ, ಕಸುಬುದಾರರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡತಕ್ಕದ್ದು ಈ ಎಲ್ಲಾ ಕಾರ್ಯಕ್ರಮಗಳ ಸಂಕೀರ್ಣವಾಗಿ ಎಲ್ಲಾ ದೃಷ್ಟಿಕೋನಗಳನ್ನು ಇಟ್ಟುಕೊಂಡಿರತಕ್ಕ ಕೆಲಸವನ್ನು ಕಳೆದ ನಾಲ್ಕು ವರ್ಷಗಳಿಂದ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ೧೩೫ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಕೆಲವು ಸಂದರ್ಭದಲ್ಲಿ ಹೇಳಬಹುದು, ತಾಳಿ ಭಾಗ್ಯದಂಥ ಕಾರ್ಯಕ್ರಮಗಳನ್ನು ಮಾಡಿದ್ದೀರಿ ಎಂದು. ತಾಳಿ ಭಾಗ್ಯದಂಥ ಕಾರ್ಯಕ್ರಮದಲ್ಲಿ ಕೂಡ ವೈಚಾರಿಕವಾದ ಹಿನ್ನೆಲೆ ಇದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳುವಾಗ ಅವರ ಮನಸ್ಸು ಕೂಡ ಒಪ್ಪುವುದಿಲ್ಲ. ತಾಳಿ ಭಾಗ್ಯ ಯಶಸ್ವಿಯಾಗಿಲ್ಲ ಎಂದು ಅವರಿಗೆ ಕೂಡ ಗೊತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್.—ನಮ್ಮ ದೇಶದಲ್ಲಿ ಮದುವೆ ಮತ್ತು ಸಾವು ಎಷ್ಟೋ ಜನಗಳನ್ನು ಆರ್ಥಿಕವಾಗಿ ರುಣಿಗಳನ್ನಾಗಿ ಮಾಡಿದೆ, ನಮ್ಮಲ್ಲಿ ಹುಸಿ ಸಂಸ್ಕೃತಿಗಳ ಮೂಲಕವಾಗಿ, ಧರ್ಮದ ಉಪದೇಶಗಳ ಮೂಲಕವಾಗಿ, ಸಾಮಾಜಿಕ ವ್ಯವಸ್ಥೆಯ ಮೂಲಕವಾಗಿ ಸಾವು ಮತ್ತು ಮದುವೆ ಎರಡೂ ನಮ್ಮ ದೇಶದ ಜನರನ್ನು ಹೆಚ್ಚು ಸಾಲದಲ್ಲಿ ಒಳಗಾಗುವ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದೆ. ಅದನ್ನು ಬದಲಾವಣೆ ಮಾಡಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ೧೦ ಜೋಡಿಗಳಿಗೂ ಹೆಚ್ಚು ಅಂತರಜಾತಿ ಅಥವಾ ಸಾಮೂಹಿಕ ಮದುವೆಗೆ ಅನುಕೂಲ ಮಾಡಿಕೊಡಲು ತಾಳಿ ಭಾಗ್ಯ ಯೋಜನೆ ಮಾಡಿ ಮಿತವ್ಯಯ ತರತಕ್ಕದ್ದು, ಇಡೀ ಸಮಾಜದ ಜನರಲ್ಲಿ ಜಾತಿ ಎಂದರೆ ಗಂಡು ಹೆಣ್ಣು ಎಂಬ

ಪರಿಕಲ್ಪನೆ ಮಾಡುವಂಥ ವಾತಾವರಣ ನಿರ್ಮಾಣ ಮಾಡಿದ್ದೇವೆ. ಮದುವೆ ಸಂಭ್ರಮ ಎನ್ನುವುದು ಮನುಷ್ಯನ ಸ್ಥಾನಮಾನವನ್ನು ಸಮಾಜದಲ್ಲಿ ನಿರ್ಧಾರ ಮಾಡತಕ್ಕ ಲಕ್ಷಣ ಅಲ್ಲ. ಸಮಾಜದಲ್ಲಿ ಗಂಡು ಹೆಣ್ಣು ಹೊಸ ಬಾಳ್ವೆ ನಡೆಸುವ ದಿವ್ಯ ಕ್ಷಣ. ಸಮಾಜದಲ್ಲಿ ಎಷ್ಟು ಅದ್ದೂರಿಯಾಗಿ ಮದುವೆ ಮಾಡಿದ ಎಂಬುದು ಮುಖ್ಯವಲ್ಲ. ಸಮಾಜದಲ್ಲಿ ಮದುವೆಯನ್ನು ಅಷ್ಟೊಂದು ಅದ್ದೂರಿಯಾಗಿ ಮಾಡುವುದು ಮುಖ್ಯವಲ್ಲ ಎನ್ನುವಂತಹ ಕಾರಣಕ್ಕಾಗಿ ನಾವು ತಾಳಿ ಭಾಗ್ಯ ಯೋಜನೆಯನ್ನು ತಂದಿದ್ದೇವೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮದುವೆ ಹಾಗೂ ತಾಳಿ ಭಾಗ್ಯದ ಬಗ್ಗೆ ಏನೋ ಹೇಳುತ್ತಿದ್ದಾರೆ. ಪಾಪ ಹೇಳಲಿ. ಅದೇ ರೀತಿ ಸತ್ತವರ ಬಗ್ಗೆಯೂ ಮಾಡಬೇಕಲ್ಲ ಮಾಡಿ ಅದನ್ನು, ಅವೆರಡೂ ಬಹಳ ವಿಶೇಷವಾಗಿರತಕ್ಕಂತಹವು.

ಶ್ರೀ ಎಂ. ಪಿ. ಪ್ರಕಾಶ್.—ಮನುಷ್ಯ ಸತ್ತಾಗ ಕೂಡ ಹೆಚ್ಚು ಗೌರವವನ್ನು ತೋರಿಸ ಬೇಕಾಗುತ್ತದೆ. ಅದಕ್ಕಾಗಿ ಎಲ್ಲಾ ಕಡೆ ಎಲೆಕ್ಟ್ರಿಕ್ ಕ್ರಿಮೇಷನ್‌ಗಳನ್ನು ತೆರೆಯುವಂತಹದ್ದು ಮತ್ತಿತರ ಸೌಲಭ್ಯಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ರೂಢಿಸಬೇಕಾಗುತ್ತದೆ. ಅರಣ್ಯದಲ್ಲಿರತಕ್ಕ ಸಂಪನ್ಮೂಲ ಗಳು ಎಂದರೆ ಕಟ್ಟಿಗೆ. ಗಂಗಾ ಜಲಶುದ್ಧಿಯ ಬಗ್ಗೆ ಬಂದಿರತಕ್ಕಂತಹ ವರದಿಯನ್ನು ನೋಡಿದರೆ ವಾರಣಾಸಿ ಒಂದರಲ್ಲೇ ಸುಮಾರು ೨೪ ಚದರ ಮೈಲಿಗಳಲ್ಲಿರತಕ್ಕ ಕಾಡುಗಳನ್ನು ಒಂದು ವರ್ಷದಲ್ಲಿ ಕಡಿದು ಶವ ಸಂಸ್ಕಾರಕ್ಕಾಗಿ ಉಪಯೋಗಿಸಿದ್ದಾರೆ ಎನ್ನುವುದರ ಬಗ್ಗೆ ವರದಿ ಬಂದಿವೆ. ವಾರಣಾಸಿ ಒಂದರಲ್ಲೇ ಅಲ್ಲಿರತಕ್ಕ ಕಾಡುಗಳನ್ನು ಈ ರೀತಿಯ ಶವ ಸಂಸ್ಕಾರಗಳಿಗೆ ಉಪಯೋಗಿಸುವ ಕಟ್ಟಿಗೆ ಯನ್ನು ಲೆಕ್ಕಾಚಾರ ಮಾಡಿ ಹಾಕಿದ್ದಾರೆ. ಇಡೀ ಭಾರತದೇಶದಲ್ಲೇ ಕೃಷಿಗಾಗಿ ಉಪಯೋಗಿಸುವ ಕಟ್ಟಿಗೆಗಿಂತ ಹೆಚ್ಚಾಗಿ ಶವ ಸಂಸ್ಕಾರಗಳಿಗಾಗಿ ಉಪಯೋಗಿಸುವ ಕಟ್ಟಿಗೆಗಳು ಏನು ಇವೆ, ಇವು ಧಾರ್ಮಿಕ ಮೂಲದಿಂದ ಪ್ರೇರೇಪಿತವಾಗಿರುವುದರಿಂದ ಅವರನ್ನು ನಾನು ಕಟ್ಟಿಗೆಯಲ್ಲಿ ಸುಡುವುದರ ಮೂಲಕ ಅದರಲ್ಲೂ ಗಂಧದಕಟ್ಟಿಗೆಯ ಮೂಲಕ ಸುಡುವುದರಿಂದ ಅವರು ಸ್ವರ್ಗಸ್ಥರಾಗುತ್ತಾರೆನ್ನುವ ಮೂಢ ನಂಬಿಕೆ ಇದೆ. What is there for the fish if it is fried in margarine or ghee, ಎನ್ನುವಂತಹ ರೀತಿಯಲ್ಲಿ ಸುಡುವುದಕ್ಕೆ ಗಂಧದ ಕಟ್ಟಿಗೆಯಾದರೇನು ? ಅಥವಾ ವಿದ್ಯುಚ್ಛಕ್ತಿಯ ಶವಾಗಾರವಾದರೇನು, ಅಥವಾ ಸೀಮೆಎಣ್ಣೆಯಾದರೇನು, ಅಥವಾ ತುಪ್ಪದಿಂದ ಆದರೇನು, ಇವುಗಳೆಲ್ಲಾ ಧಾರ್ಮಿಕ ಮೂಲವಾಗಿರತಕ್ಕ ಮೂಢನಂಬಿಕೆಗಳು ಇನ್ನೂ ನಮ್ಮಲ್ಲಿ ಇಂಥ ಮೂಢನಂಬಿಕೆಗಳು ಇರುವುದರಿಂದ ಅನೇಕ ಸಂದರ್ಭಗಳಲ್ಲಿ ನಮ್ಮ ಸಂಪನ್ಮೂಲಗಳು ಹಾಳಾಗುತ್ತಿವೆ. ಈ ರೀತಿ ಹಾಳಾಗುತ್ತಿರುವ ಸಂಪನ್ಮೂಲಗಳನ್ನು ಉಳಿಸುವುದರ ಬಗ್ಗೆ ಶ್ರೀ ಟಿ. ಎಸ್. ಎಲಿಯಟ್ ರವರು ಬರೆದಿರತಕ್ಕಂತಹ ಸುಂದರವಾದ ಒಂದು ಪದ್ಯ ನನಗೆ ನೆನಪಿಗೆ ಬರುತ್ತಿದೆ.

(ಗೊಂದಲ)

" Where is life who have lost in living,
Where is wisdom who have lost in knowledge,
Where is knowledge who have lost in information. "

ಆದ್ದರಿಂದ ಮೌಲ್ಯಗಳನ್ನು ಕಳೆದುಕೊಂಡಿರತಕ್ಕ ಜನಾಂಗ ನಾವು ಆಗಿರುವುದರಿಂದ ಯಾವ ಮೌಲ್ಯಕ್ಕೆ ಕಟ್ಟುಬೀಳುತ್ತೇವೆ ಎನ್ನುವುದನ್ನು ಬಹಳ ಸುಂದರವಾಗಿ ಅವರು ಹೇಳಿದ್ದಾರೆ. ಅನೇಕ ಇಂತಹ ವಿಚಾರಗಳ ವಿವರಗಳಿಗೆ ಹೋಗಿ ನಮ್ಮ ವಿವೇಕವನ್ನು ನಾವು ಕಳೆದುಕೊಂಡಿದ್ದೇವೆ. ಬದುಕುವ ಕಾರಣಗಳಿಗಾಗಿ ನಮ್ಮ ನಾಲೆಡ್ಜ್‌ನ್ನು ಕಳೆದುಕೊಂಡಿದ್ದೇವೆ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಅದ್ದರಿಂದ ಇಲ್ಲಿ ಇಂತಹ ವಿವರಗಳಿಗೆ ನಾವು ಹೋಗಬೇಕಾದುದು ಮುಖ್ಯ ಅಲ್ಲ, ಆದರೆ ಆ ರೀತಿಯ ವಿವರಗಳಿಗೆ ಹೋಗುವುದರಿಂದ ಇಡೀ ಸಂಸ್ಥೆಯ ವಿವೇಕವನ್ನು ಕುಂಠಿತಗೊಳ್ಳತಕ್ಕಂತಹದ್ದು ಆಗ ಬಾರದು. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ತೆಗೆದುಕೊಂಡಿರತಕ್ಕಂತಹ ಕಾರ್ಯಕ್ರಮಗಳು ಮತ್ತೀಯ ಸೌಹಾರ್ದತೆಯನ್ನು ಕಳೆದುಕೊಂಡಿರತಕ್ಕ ಸಂದರ್ಭದಲ್ಲಿ ಯಾವುದೇ ಒಂದು ಸಮುದಾಯಕ್ಕೆ ಒಳಗಾಗಿರತಕ್ಕ ಯಾವುದೇ ಒಂದು ಕಾರಣಗಳಿಗಾಗಿ ಪ್ರೇರೇಪಿತರಾಗಿರತಕ್ಕ ಜನಗಳನ್ನು ಸಮಸ್ತ ವಿವೇಕದ ಮೂಲಕ ಒಂದು ಹತೋಟಿಯಲ್ಲಿಡತಕ್ಕ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಅದು ಬರೀ ಸರ್ಕಾರ ಒಂದೇ ಮಾಡತಕ್ಕಂತಹದ್ದಲ್ಲ. ಸಮಾಜದ ರೂಪರೇಖೆಯಲ್ಲಿ ಸರ್ಕಾರ ಒಂದು ಸಣ್ಣ ಅಂಗ. ಇಡೀ ಸಮಾಜದ ವ್ಯವಸ್ಥೆಯನ್ನು ಪ್ರತಿನಿಧಿಸತಕ್ಕ ಸರ್ಕಾರ ಇದು ಆಗಿರುವುದರಿಂದ ಅಲ್ಲಿ ಬರತಕ್ಕಂತಹವು

ಮೇಲುನೋಟಕ್ಕೆ ಆರ್ಥಿಕವಾದ ಕಾರಣಗಳು ಇರಬಹುದು, ಆದರೆ ಬೇರೆ ಬೇರೆ ನೈತಿಕವಾದ ಕಾರಣಗಳು ಇರುವುದರಿಂದ ನಮ್ಮಲ್ಲಿರತಕ್ಕ ಅನೇಕ ತಪ್ಪುಗಳಿಗೆ, ಲೋಪದೋಷಗಳಿಗೆ ಭ್ರಷ್ಟಾಚಾರಗಳಿಗೆ, ಅದಕ್ಷತೆಗಳಿಗೆ. ಅಪ್ರಮಾಣಿಕತೆಗೆ ಕೆಲವು ಮೂಲಭೂತವಾಗಿರತಕ್ಕ ಸಾಮಾಜಿಕ ಅಮಾಂತರಗಳಿಗೆ ಒಳಗಾಗಿರತಕ್ಕ ನಂಬಿಕೆಗಳು ಮತ್ತು ಘಟನೆಗಳು ಇದಕ್ಕೆ ಕಾರಣಿಭೂತವಾಗಿವೆ. ಆ ಕಾರಣದಿಂದ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮೊದಲನೆ ಪ್ರಸ್ತಾಪದಲ್ಲಿ ಕೃಷಿಯು ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಮುಂಗಾರಿ ಹಂಗಾಮಿ ನಾವು ನಿರೀಕ್ಷಿಸಿದಷ್ಟು ರೀತಿಯಲ್ಲಿ ಮಳೆ ಬರಲಿಲ್ಲ ಎನ್ನುವ ವಿಚಾರವನೂ ಪ್ರಸ್ತಾಪ ಮಾಡಿದ್ದಾರೆ, ಕಳೆದ ವರ್ಷದಲ್ಲೂ ಕೂಡ ಹೆಚ್ಚು ಮಳೆ ಬಂದರೂ ಕೂಡ ಮುಖ್ಯವಾಗಿ ನಂಬಿಕೊಂಡಿರತಕ್ಕಂತಹ ಕೆಲವು ತಿಂಗಳುಗಳಲ್ಲಿ ಮಳೆ ಬರಲಿಲ್ಲ, ಆ ಕಾರಣದಿಂದ ಬಹಳ ತೊಂದರೆಯಾಗಿದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕೃಷಿ ಇಲಾಖೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಆಹಾರೋತ್ಪಾದನೆಯು ಗುರಿಯನ್ನು ಸುಮಾರು ೮೮ ಲಕ್ಷ ಟನ್ನುಗಳಷ್ಟು ಇಟ್ಟುಕೊಂಡಿವೆ. ಆದರೆ ಮುಂಗಾರಿ ಹಂಗಾಮಿಯಿಂದ ೬೮.೧೯ ಮತ್ತು ಹಿಂಗಾರಿಯಲ್ಲಿ ೧೫.೧೯ ಅದೇ ರೀತಿ ಬೇಸಿಗೆ ಆಹಾರೋತ್ಪಾದನೆಗೆ ೪.೬೨ ಒಟ್ಟು ೮೮ ಲಕ್ಷ ಟನ್ನುಗಳಷ್ಟು ಆಹಾರಉತ್ಪಾದನೆಯ ಗುರಿಯನ್ನು ಇಟ್ಟು ಕೊಂಡಿದೆ ಆ ಆಹಾರಉತ್ಪಾದನೆಯ ಗುರಿಯನ್ನು ಮುಟ್ಟುವಂತಹ ಸಾಧ್ಯತೆಗಳೂ ಕೂಡ ಇವೆ. ಅದೇ ಸಂದರ್ಭದಲ್ಲಿ ೧೯೮೬-೮೭ನೇ ಸಾಲಿನಲ್ಲಿ ೨.೯೩ ಲಕ್ಷ ಕ್ವಿಂಟಾಲ್‌ನಷ್ಟು ಉತ್ತಮವಾಗಿರತಕ್ಕ ಸಂಕೀರ್ಣ ಬೀಜಗಳನ್ನು ಹೆಚ್ಚು ಉತ್ಪಾದನೆಯನ್ನು ಕೊಡತಕ್ಕಂತಹ ಬೀಜಗಳನ್ನು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಕೊಡುವಂತಹ ಕೆಲಸವನ್ನೂ ಕೂಡ ಮಾಡಿದ್ದಾರೆ.

೧೧-೦೦ ಎ. ಎಂ.

೩.೭೬ ಲಕ್ಷ ಟನ್‌ನಷ್ಟು ರಸಗೊಬ್ಬರ ಹಂಚತಕ್ಕ ಕಾರ್ಯಕ್ರಮವನ್ನು ಮಾಡಿದ್ದಾರೆ. ಕೃಷಿಯಲ್ಲಿ ಹಸಿರು ಕ್ರಾಂತಿಯನ್ನು ತರಬೇಕಾದರೆ. ಅದರಮೂಲ ಉದ್ದೇಶ ತಮಗೆ ಗೊತ್ತಿದೆ. ಬಹಳ ಉತ್ತಮವಾಗಿರತಕ್ಕ ಹೆಚ್ಚು ಉತ್ಪಾದನೆಯನ್ನು ಕೊಡತಕ್ಕ ಬೀಜಗಳನ್ನು ಒಳ್ಳೆಯ ರಸಗೊಬ್ಬರವನ್ನು ನೀರನ್ನು ಕೊಡುವುದರ ಮೂಲಕ ಹೆಚ್ಚು ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯತೆಯಾಗುತ್ತದೆ. ಆ ಕಾರಣದಿಂದ ಸುಮಾರು ೯೪೧೭ ಮಾರ್ಕೆಟ್ ಕೇಂದ್ರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತರುವುದರ ಮೂಲಕವಾಗಿ ೨.೯೩ ಲಕ್ಷ ಕ್ವಿಂಟಾಲ್ ಬೀಜಗಳನ್ನು ಹಂಚಿದ್ದಾರೆ. ೩.೭೬ ಲಕ್ಷಟನ್ ರಸಗೊಬ್ಬರವನ್ನು ಹಂಚುವುದರ ಮೂಲಕ ಹಸಿರು ಕ್ರಾಂತಿಗೆ ಭದ್ರಬುನಾದಿಯನ್ನು ನಮ್ಮ ಸರ್ಕಾರದವರು ಹಾಕಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿಶೇಷ ಘಟಕ ಯೋಜನೆಯ ಮುಖಾಂತರ ಪರಿಶಿಷ್ಟಜಾತಿ ಮತ್ತು ಜನಾಂಗಗಳವರಿಗೆ ಇಂತಹ ಕೃಷಿ ಉಪಕರಣ ಮತ್ತು ಬೀಜ, ಗೊಬ್ಬರದ ಚೀಲಗಳನ್ನು ಮೂಲಕ ವ್ಯಾಪಕವಾದ ಕಾರ್ಯಕ್ರಮವನ್ನು ಮಾಡಿದ್ದಾರೆ. ಎಣ್ಣೆ ಕಾಳುಗಳ ಬಗ್ಗೆ ಹೆಚ್ಚು ಯೋಚನೆ ಮಾಡಬೇಕಾಗಿದೆ. ನಮ್ಮ ದುರ್ದೈವ, ಎಣ್ಣೆಕಾಳುಗಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಾಕಿಕೊಳ್ಳಲಿಲ್ಲ. ಪಾಮೋಲಿನ್ ಎಣ್ಣೆಯನ್ನು ಊಟಕ್ಕೆ ಉಪಯೋಗಿಸಲಾಗುತ್ತಿದೆ. ಇಂತಹ ಖಾದ್ಯತೈಲವನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ ಆಮದು ಮಾಡಿಕೊಳ್ಳುತ್ತಿದ್ದೇವೆಂದರೆ ನಾವು ಹೆಚ್ಚು ಹಣವನ್ನು ಎಣ್ಣೆಕಾಳುಗಳಿಗಾಗಿ ಉಪಯೋಗ ಮಾಡುತ್ತಿಲ್ಲ. ನಮ್ಮ ಕೃಷಿ ರಂಗದಲ್ಲಿ ಹೆಚ್ಚು ವ್ಯಾಪಕವಾಗಿ ಖರ್ಚು ಮಾಡುವುದಕ್ಕೆ ಆಗಿಲ್ಲ. ನೀರಾವರಿ ಯೋಜನೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವುದರ ಮೂಲಕ ಇಂತಹ ವ್ಯಾಪಕವಾದ ಬದಲಾವಣೆಯನ್ನು ತರಬಹುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣ ಪ್ರಸ್ತಾಪ ಮಾಡುತ್ತಾ ಹೇಳಿದರು, ೧೦೫೦ ಕೋಟಿ ರೂಪಾಯಿಗಳ ಯೋಜನೆಯನ್ನು ಕೃಷ್ಣಾ ಮೇಲ್ದಂಡೆಗೆ ತಯಾರು ಮಾಡಲಾಗಿದ್ದು ಅದಕ್ಕೆ ಯೋಜನಾ ಆಯೋಗದವರು ತಮ್ಮ ಒಪ್ಪಿಗೆಯನ್ನು ಕೊಡುತ್ತಾರೆ. ಕೇಂದ್ರ ಸರ್ಕಾರದವರು ತಮ್ಮ ಒಪ್ಪಿಗೆಯನ್ನು ಕೊಡುತ್ತಾರೆ. ಇಂದು ಈ ವಿಚಾರವನ್ನು ಪತ್ರಿಕಾ ಹೇಳಿಕೆಯ ಮುಖಾಂತರ ಹೇಳುವುದರಿಂದ ಸದನದ ಗೌರವಕ್ಕೆ ಸದನದ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಹಿರಿಯರಾದ ಬೊಮ್ಮಾಯಿಯವರು ಅದರ ಬಗ್ಗೆ ವ್ಯಾಖ್ಯಾನವಾಗಿ ಆಡಳಿತಾತ್ಮಕವಾಗಿರತಕ್ಕ ಯಾವುದೇ ಉದ್ದೇಶದಿಂದ ಪ್ರಕಟಣೆ ಮಾಡಿಲ್ಲವೆನ್ನುವ ಮಾತನ್ನು ಹೇಳಿದರು. ಅದರ ಅರ್ಥ ಇಷ್ಟೆ, ೧೫-೨೦ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೦೫೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದಾಗ, ಕೆಂಪು ಮಣ್ಣಿನಲ್ಲಿ ಹೆಚ್ಚು ಎಣ್ಣೆಕಾಳುಗಳನ್ನು ಬೆಳೆಯುವುದಕ್ಕೆ ಸಾಧ್ಯತೆಯಿದೆ. ಮಾನ್ಯ ಕಾಂತಾರವರು ತೊಗರಿ ಬೆಳೆಗೆ ಸಂಬಧಪಟ್ಟಹಾಗೆ ಹೇಳಿದ್ದಾರೆ. ಸಾಂಬಾರ ಪದಾರ್ಥಗಳನ್ನು ನಾವು ಬೆಳೆಯಬೇಕಾಗಿದೆ. ನಾವು ಇವುಗಳ ಬಗ್ಗೆ ಮಂಡಲಿಗಳನ್ನು ತಯಾರು ಮಾಡತಕ್ಕದ್ದು ಬಹಳ ಮುಖ್ಯ. ಈಗ ಕಾಫಿ ಮಂಡಳಿ ಇದೆ. ಆ ರೀತಿಯಲ್ಲಿ ವಾಣಿಜ್ಯ ಬೆಳೆಗಳ ಮಂಡಳಿಗಳನ್ನು ಮಾಡಿದಾಗ ಅವುಗಳ ಬೆಲೆಗಳನ್ನು

ಹತೋಟಿಯಲ್ಲಿಟ್ಟು ಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಮೆಣಸಿನಕಾಯಿ, ಶುಂಠಿ, ಅರಿಸಿನ ಕೊತ್ತುಂಬರಿ, ಮೆಣಸು ಈ ಬೆಳೆಗಳಿಗೆ ಪ್ರತ್ಯೇಕವಾಗಿರತಕ್ಕ ಮಂಡಳಿಗಳನ್ನು ರಚಿಸುವುದರ ಮುಖಾಂತರ ಈ ಬೆಳೆಯನ್ನು ಬೆಳೆಯುತಕ್ಕ ಜನಗಳಿಗೆ ಹೆಚ್ಚು ಬೆಲೆಯನ್ನು ಕೊಡುವುದಕ್ಕೆ ಸಾಧ್ಯತೆಯಾಗುತ್ತದೆ. ೧೫೦ ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಜೋಳವನ್ನು ಖರೀದಿ ಮಾಡುತ್ತೇವೆಂದು ಪ್ರಕಟಣೆಯಾಗಿದ್ದರೂ ಕೂಡ ಮಾರ್ಕೆಟ್‌ನಲ್ಲಿ ೧೧೫ ರೂಪಾಯಿಗಳಿಗೆ ಒಂದು ಚೀಲ ಮಾರಾಟವಾಗುತ್ತಿದೆ. ನಾವು ಕೃಷಿಗೆ ಹೆಚ್ಚು ಬೆಲೆ ಕೊಡಬೇಕು. ಯೋಗ್ಯವಾಗಿರತಕ್ಕ ಬೆಲೆಯನ್ನು ನಾವು ಯಾವಾಗ ಕೊಡುವುದಿಲ್ಲವೋ ಬೆಳೆಯುತಕ್ಕ ರೈತರಿಗೆ ಹೆಚ್ಚು ಉತ್ತೇಜನವನ್ನು ಕೊಟ್ಟಂತಾಗುವುದಿಲ್ಲ. ಬೆಲೆಯನ್ನು ಜಾಸ್ತಿ ಕೊಡದೇ ಹೋದರೆ ಅವರು ಒಳ್ಳೆಯ ಜೀವನವನ್ನು ನಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಹಳ್ಳಿಯಲ್ಲಿರತಕ್ಕ ಜನರು ಒಳ್ಳೆಯ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗವುದಿಲ್ಲ. ಇಂತಹ ಮಂಡಳಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಒಂದೊಂದು ಬೆಳೆಗೂ ಒಂದೊಂದು ಮಂಡಳಿ ಅದಕೊಬ್ಬರು ಅಧ್ಯಕ್ಷರು, ಕೊತುಂಬರಿ ಮಂಡಳಿ ಅದಕ್ಕೊಬ್ಬರು ಅಧ್ಯಕ್ಷರು ಮೆಣಸಿನಕಾಯಿ ಮಂಡಳಿ ಅದಕ್ಕೊಬ್ಬರು, ಶುಂಠಿ ಮಂಡಳಿ ಅದಕ್ಕೊಬ್ಬರು, ಉಳ್ಳಾಗೆಡ್ಡೆ ಮಂಡಲಿ ಅದಕ್ಕೊಬ್ಬರು ಅಧ್ಯಕ್ಷರು ಈ ರೀತಿ ಮಾಡಿ ಪ್ರೈಸಸ್ ಜಾಸ್ತಿಮಾಡಬೇಕು ಎಂದು ಹೇಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮೆಣಸಿನಕಾಯಿ, ಶುಂಠಿ, ಅರಿಸಿನ, ಇವುಗಳಿಗೆಲ್ಲ ಮಂಡಳಿ ಮಾಡಿ ಅಧ್ಯಕ್ಷರನ್ನು ನೇಮಕ ಮಾಡುವುದು ಯೋಗ್ಯವಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಸಮಗ್ರವಾಗಿ ಕೃಷಿ ಕಾರ್ಮಿಕ ರಂಗದವರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸಂಘಟಿತರಾಗಿರತಕ್ಕ ಕಾರ್ಮಿಕರಿಗೆ ಹೆಚ್ಚು ಭತ್ಯವನ್ನು ಕೊಡಿಸುವುದನ್ನು ಬಿಟ್ಟು ಕಮ್ಯುನಿಸ್ಟರು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅಸಂಘಟಿತರಾಗಿರತಕ್ಕ ಕಾರ್ಮಿಕರನ್ನು ಸಂಘಟನೆ ಮಾಡಿದರೆ ಗ್ರಾಮಾಂತರ ಪ್ರದೇಶಗಳ ಜನರಿಗೆ ಹೆಚ್ಚು ವ್ಯಾಪಕವಾದ ಕೆಲಸ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಪ್ರಕಾಶ್‌ರವರು ಹೇಳುವ ಧಾಟಿಯಲ್ಲಿ ನ್ಯಾಯವಾದ ಬೆಲೆಯನ್ನು ಕೊಡಬೇಕೆನ್ನುವುದರಲ್ಲಿ ನಮ್ಮದು ಭಿನ್ನಾಭಿಪ್ರಾಯವಿಲ್ಲ. ಕಮ್ಯುನಿಸ್ಟರಿಗೆ ತಿಳಿಯದಿರುವ ವಿಷಯವನ್ನು ಹೇಳುತ್ತೀರಾ ? ತಿಳಿಯದಿರುವ ವಿಷಯ ಇದ್ದರೆ ಹೇಳಿ. ಕಮ್ಯುನಿಸ್ಟ್ ಪಕ್ಷದವರಿಗೆ ಕಾರ್ಮಿಕರ ಬಗ್ಗೆ ಕಾಳಜಿ ಇದೆ. ಪ್ರತಿಯೊಂದು ಬೆಳೆಗೂ ಮಂಡಳಿಯನ್ನು ಮಾಡಿ ಅದಕ್ಕೊಬ್ಬರು ಅಧ್ಯಕ್ಷರನ್ನು ನೇಮಕ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಕೃಷ್ಣನ್‌ರವರ ಕಳಕಳಿಯ ಬಗ್ಗೆ ನನ್ನ ಭಿನ್ನಾಬಿಪ್ರಾಯವಿಲ್ಲ. ಮೆಣಸಿನಕಾಯಿಗೆ ಒಬ್ಬರು ಅಧ್ಯಕ್ಷರು, ಶುಂಠಿಗೊಬ್ಬರು ಅಧ್ಯಕ್ಷರು, ಅರಿಶಿನಕ್ಕೊಬ್ಬರು ಅಧ್ಯಕ್ಷರು ನೇಮಕ ಮಾಡಿ ಎನ್ನು ಮಾತಿನ ವ್ಯಂಗ್ಯವನ್ನು ಅರ್ಥಮಾಡಿಕೊಂಡಾಗ, ಅಸಂಘಟಿತ ಕಾರ್ಮಿಕರ ಬಗ್ಗೆ ಕಮ್ಯುನಿಸ್ಟರು ಕೆಲಸ ಮಾಡಬೇಕೆಂದು ಹೇಳಿದ್ದೇನೆಯೇ ಹೊರತು, ನನಗೆ ನಿಮಗಿಂತ ಹೆಚ್ಚು ಕಮ್ಯುನಿಸಂ ಗೊತ್ತಿಲ್ಲ ವ್ಯಂಗ್ಯಕ್ಕೆ ವ್ಯಂಗ್ಯದ ಉತ್ತರವನ್ನು ನಿರೀಕ್ಷೆ ಮಾಡುವುದು ಸಹಜವಾದುದು. ಅದು ಪಾರ್ಲಿಮೆಂಟರಿಯಲ್ಲಿ ರಂಜನೆಯಾಗುತ್ತದೆ. ಮೆಣಸಿನಕಾಯಿಗೆ ಅಧ್ಯಕ್ಷರನ್ನು ನೇಮಿಸಿ ಹಾಗೆಯೇ ಎಲ್ಲದ್ದಕ್ಕೂ ಮಂಡಳಿಯನ್ನು ಮಾಡಿ ಅಧ್ಯಕ್ಷರುಗಳನ್ನು ನೇಮಕ ಮಾಡುವಾಗ ನಿರುದ್ಯೋಗಿಯಾಗಿರತಕ್ಕ ಶಾಸಕರಿಗೇ ಪಕ್ಷದವರಿಗೆ, ಪಕ್ಷದ ಕಾರ್ಯಕರ್ತರಿಗೆ ಅಧ್ಯಕ್ಷ ಪದವಿ ಇತ್ತು ಸಂಪನ್ಮೂಲವನ್ನು ಹಾಳುಮಾಡುತ್ತಿದ್ದೀರಿ ಎಂದು ವ್ಯಂಗ್ಯದ ಮಾತು ಹೇಳಿದ್ದಾರೆ. ಅಸಂಘಟಿತರಾಗಿರತಕ್ಕ ಕೃಷಿ ಕಾರ್ಮಿಕರ ಬಗ್ಗೆ ನೀವು ಕೆಲಸ ಮಾಡುತ್ತಿಲ್ಲ. ಬಿಇಎಂಎಲ್, ಐಟಿಐ ಗಳಲ್ಲಿ ಕೆಲಸ ಮಾಡತಕ್ಕ ಜನಗಳಿಗೆ ಹೆಚ್ಚು ಕೊಡಿಸಲಿಕ್ಕೆ ಹೋರಾಟ ಮಾಡುತ್ತಿದ್ದೀರಿ. ನೀವು ಕೂಡ ಸುಖಾಸೀನವಾಗಿರತಕ್ಕ ಬೌದ್ಧಿಕ ಜನಗಳಾಗಿದ್ದೀರಿ, ವಿನಹ ಹಳ್ಳಿಗಳಲ್ಲಿ ಬದುಕತಕ್ಕ ಅಸಂಘಟಿತರ ಪರವಾಗಿಲ್ಲವೆಂದು ನೀವು ಕೂಡ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಕೂಡ ಅಸಂಘಟಿತ ಕೃಷಿ ಕಾರ್ಮಿಕರ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ಅದನ್ನು ವಿರೋಧ ಮಾಡುತ್ತಿರುವ ಮಹಾನುಭಾವರು ಇದ್ದಾರೆ. ನಾವು ಲ್ಯಾಂಡ್‌-ಲಾರ್ಡ್‌ಗಳ ಬಗ್ಗೆ ಮಾತನಾಡಿದರೆ ಅವರ ಪ್ರತಿನಿಧಿಯಾಗಿ ಮಾನ್ಯ ಬೈರೇಗೌಡರು ಬರುತ್ತಾರೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರು ಏನೋ ಹೇಳಲಿಕ್ಕೆ ಹೊರಟಿದ್ದಾರೆ, ಅವರೇ ಹೇಳಲಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ವೆಂಕಟರಾಮಯ್ಯನವರ ತಾಲ್ಲೂಕಿನಲ್ಲಿ ಕೃಷಿ ಕಾರ್ಮಿಕರಿಗೆ ಮಿನಿಮಮ್ ವೇಜಸ್ ಕೊಡುವುದಕ್ಕೆ ತೊಂದರೆ ಮಾಡುತ್ತಿದ್ದರು, ಅವರಿಗೆ ಎಷ್ಟು ಕೊಡಬೇಕಾಗಿತ್ತೋ ಅಷ್ಟು ಕೊಡುತ್ತಿರಲಿಲ್ಲ. ಅದರ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಕೂಡ ಮಾತನಾಡಿರಲಿಲ್ಲ. ನಾನೇ ನೇರವಾಗಿ ಪ್ರತ್ಯಕ್ಷವಾಗಿ ಆ ಕೆಲಸ ಮಾಡಿದೆ, ನಾನೇ ಕೃಷಿ ಕಾರ್ಮಿಕರ ಹತ್ತಿರ ಹೋಗಿ ನಿಮಗೆ ಎಷ್ಟು ಕೂಲಿ ಬರುತ್ತದೆಂದು ಕೇಳಿ, ಖುದ್ದಾಗಿ ಅವರಿಗೆ ಎಷ್ಟು ಕೂಲಿ ಸಿಗಬೇಕೋ ಅಷ್ಟು ಕೂಲಿಯನ್ನು ಕೊಡಿಸತಕ್ಕ ಕೆಲಸವನ್ನು ಮಾಡಿದ್ದೇನೆ. ಆ ಕೆಲಸವನ್ನು ವೆಂಕಟರಾಮಯ್ಯನವರು ಮಾಡಲಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅವರಿಗಿಂತ ನಾನೂ ಜಾಸ್ತಿ ಮಾಡಿದ್ದೇನೆ. ಅವರು ಮಾಡಲಿಲ್ಲವೆಂದು ನಾನು ಹೇಳಲಿಲ್ಲ, ಅವರು ಮಾಡಿದ್ದಾರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಪ್ರಕಾಶ್‌ರವರು ಏನೂ ಮಾಡುತ್ತಿಲ್ಲವೆಂದು ಹೇಳುವುದು ಅದು ತಪ್ಪು.

ಅಧ್ಯಕ್ಷರು.—ಇಬ್ಬರೂ ಮಾಡಿದ್ದೀರಿ.

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಅಂಕಿಅಂಶಗಳಿವೆ. ಅದು ಕಾರ್ಯಗತವಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಪ್ರಕಾಶ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಕುಚೋದ್ಯ ಮಾಡುತ್ತಿದ್ದಾರೆ ಅದು ಏತಕ್ಕೋ ಗೊತ್ತಿಲ್ಲ. ಅಸಂಘಟಿತ ಕಾರ್ಮಿಕರನ್ನು ಸಂಘಟನೆ ಮಾಡುವ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇದೆಯೋ ನಮಗೂ ಅಷ್ಟೇ ಕಾಳಜಿ ಇದೆ, ಮಾಡುತ್ತಾ ಇದ್ದೇವೆ, ಮಾಡಿ ತೋರಿಸಿದ್ದೇವೆ. ಕಳೆದ ವರ್ಷ ಇದೇ ವಿಧಾನಸಭೆಯಲ್ಲಿ ರೈತರ ಬಗ್ಗೆ ಚರ್ಚೆಯಾಗಿದೆ. ನಮ್ಮ ಪಕ್ಷದ ಪರವಾಗಿ ಬಡ ರೈತರು, ಕೃಷಿ ಕಾರ್ಮಿಕರು ಬಂದಿದ್ದರು. ಸಿ.ಪಿ.ಎಂ.ನವರು ೩೦–೪೦ ಸಾವಿರ ಜನ ಬೆಂಗಳೂರಿಗೆ ಬಂದಿದ್ದರು. ಸಂಘಟನೆ ಮಾಡಿರುವುದರಿಂದ ಅವರನ್ನು ಕರೆದುಕೊಂಡು ಬಂದಿದ್ದೇವೆ. ಸಂಘಟನೆ ಮಾಡದಿದ್ದರೆ ಅವರನ್ನು ಕರೆದುಕೊಂಡು ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಚಿಕ್ಕಮಗಳೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ದೂರವಿರತಕ್ಕ ಜಿಲ್ಲೆಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಂಘಟನೆಯನ್ನು ಮಾಡುತ್ತಿದ್ದೇವೆ. ಮಾನ್ಯ ಯು. ಭೂಪತಿಯವರು, ಪಂಪಾಪತಿಯವರು, ಶಾಸಪ್ಪನವರು ರೈತರಿಂದ ಆರಿಸಿ ಬಂದಂತಹ ಜನ ಅಲ್ಲವೆ ? ರೈತರ ಓಟು ಹಾಕಿಸಿಕೊಂಡೇ ಅವರು ಆರಿಸಿ ಬಂದಿದ್ದಾರೆ. ರೈತರು, ಕೃಷಿ ಕಾರ್ಮಿಕರನ್ನು ಸಂಘಟನೆ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಪಿ. ಪ್ರಕಾಶ್.—ಇಲ್ಲಿರತಕ್ಕ ಪ್ರಶ್ನೆ ಇಷ್ಟೆ, ಈಗ ಅಸಂಘಟಿತ ಕಾರ್ಮಿಕರ ಬಗ್ಗೆ ಕಮ್ಯುನಿಸ್ಟರು ಕೆಲಸ ಮಾಡುತ್ತಿಲ್ಲ ಎನ್ನುವ ಮಾತಿಲ್ಲ. ಆದರೆ ಮಾಡುವಂತಹ ಕೆಲಸಗಳಲ್ಲಿ ಕಳೆದ ೪೦ ವರ್ಷಗಳಲ್ಲಿ ಯಾವ ರಾಜಕೀಯ ಪಕ್ಷವೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕೃಷಿ ಕಾರ್ಮಿಕರ ಬಗ್ಗೆ ಕೆಲಸ ಮಾಡಲಿಲ್ಲ. ಕೇರಳದಲ್ಲಿಯೂ ಕೂಡ ವಾಸ್ತವವಾಗಿ ಮಾಡಲಾಗಲಿಲ್ಲ. ಮೆಣಸಿನಕಾಯಿ ಮಂಡಳಿ ಅಧ್ಯಕ್ಷರು ಶುಂಠಿ ಅಧ್ಯಕ್ಷರು ಮಾಡುವುದರ ಬಗ್ಗೆ ವ್ಯಂಗ್ಯದ ಹಿನ್ನೆಲೆಯಲ್ಲಿ ಕಳಕಳಿ ವ್ಯಕ್ತಮಾಡುವುದಲ್ಲ. ಕಳಕಳಿ ಇರತಕ್ಕದ್ದು ನಿರುದ್ಯೋಗಿಗಳಾಗಿರತಕ್ಕವರಿಗೆ ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಿ ಅದರ ಮುಖಾಂತರ ಸಂಪನ್ಮೂಲವನ್ನು ವ್ಯಯ ಮಾಡುವುದು ಸರಿಯಲ್ಲ ಎನ್ನುವುದಕ್ಕೆ ನಾನು ಅನುಸಾಂಗಿಕವಾಗಿ ಮಾತನಾಡಿದ್ದೇನೆಯೇ ವಿನಹ, ನಮ್ಮ ಇತಿಮಿತಿಗಳ ಅರ್ಥವಾಗುತ್ತದೆ, ಅರ್ಥವಾಗಿಲ್ಲವೆಂದು ಹೇಳುವುದಿಲ್ಲ. ಕೇರಳದಲ್ಲಿ ರಾಜಕೀಯ ವ್ಯವಸ್ಥೆ ಮತ್ತು ಅಲ್ಲಿರುವ ನಾಯಕರುಗಳು ಇದ್ದರೂ ಕೂಡ ವೈಚಾರಿಕತೆ, ಸಾಕ್ಷರತೆಯಲ್ಲಿ ಕೇರಳ ಮುಂದೆ ಇದೆ. ಪಶ್ಚಿಮ ಬಂಗಾಳದಲ್ಲಿರತಕ್ಕ ವ್ಯವಸ್ಥೆ, ಕೇರಳದಲ್ಲಿರುವ ವ್ಯವಸ್ಥೆ ಎಷ್ಟೇ ಅನುಕೂಲಕರವಾಗಿದ್ದರೂ ಅಲ್ಲಿಯೂ ಕೂಡ ಕೊಡುವುದಕ್ಕೆ ಆಗುವುದಿಲ್ಲ. ಪಂಜಾಬ್ ವ್ಯವಸ್ಥೆಯ ನಿಲುವಿನ ಬಗ್ಗೆ ಸಂಪೂರ್ಣ ಪ್ರಸಂಶೆ ಇದೆ. ಯಾವ ರಾಜಕೀಯ ಪಕ್ಷವೂ ತಾಳದೇ ಇರತಕ್ಕ ನಿಲುವನ್ನು ಕಮ್ಯುನಿಸ್ಟ್ ಪಕ್ಷ ತಾಳಿದೆ. ಅಲ್ಲಿ ನಡೆಯುತಕ್ಕ ಹತ್ಯಾಕಾಂಡಕ್ಕೆ ಆ ಒಂದು ನಿಲುವನ್ನು ತಾಳಲಾಗಿದೆ. ಇಲ್ಲಿ ಬೇರೆ ಬೇರೆ ಮಂಡಳಿಗಳನ್ನು ಮಾಡಿ ನಮ್ಮ ಪಕ್ಷದವರಿಗೆ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಎನ್ನುವ ಅರ್ಥಕ್ಕೆ ಬರುತ್ತದೆ. ಬೆಳೆಗಳಿಗೆ ಯೋಗ್ಯವಾಗಿರತಕ್ಕ ಬೆಲೆಯನ್ನು ಕೊಟ್ಟಿಲ್ಲ. ಇದಕ್ಕೆ ಬೇರೆ ಮಾತಿಲ್ಲ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ಕೇನ್ಸ್‌ನ ವಾದವನ್ನು ಇವರು ಒಪ್ಪದೇ ಹೋಗಬಹುದು. ಮಾರ್ಕ್ಸ್‌ನ ರೀತಿಯಲ್ಲಿ ಕೇನ್ಸ್ ಯೋಚನೆ ಮಾಡದಿದ್ದರೂ ಕೂಡ ಒಂದು ಮೂಲಭೂತವಾಗಿರತಕ್ಕಂಥ ಮಾತನ್ನು ಹೇಳಿದ್ದಾನೆ.

"To Economics and Economists, who are the trustees, not of civilization, but of the possibility of civilization."

ಆದ್ದರಿಂದ ಆರ್ಥಿಕ ಸಮೀಕ್ಷೆಯನ್ನು ಮಾಡತಕ್ಕಂಥ ನಾವು ಎಲ್ಲರೂ ಕೂಡ ಇಂತಹ ಒಂದು ನಾಗರೀಕ, ಸಾಮಾಜಿಕ ವ್ಯವಸ್ಥೆಯ ಪರಿಕಲ್ಪನೆ ಮಾಡುವುದಕ್ಕೆ ಸಹಾಯವಾಗುತ್ತದೆ. ಕೇನ್ಸ್‌ನ್ನನ ಮಾತನ್ನು ಒಪ್ಪಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ, ಆದರೆ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೃಷಿರಂಗ ಎಲ್ಲಿಯ ವರೆಗೆ ಬಲಶಾಲಿಯಾಗಿ ಉಳಿಯುವುದಿಲ್ಲ, ಎಲ್ಲಿಯವರೆಗೆ ಬಾಯಾರಿರತಕ್ಕಂಥ ನೆಲಗಳಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಅಲ್ಲಿಯವರೆಗೆ ಅರ್ಥಪೂರ್ಣವಾಗಿರತಕ್ಕಂಥ ಭಾರತ ದೇಶದ ಬೆಳವಣಿಗೆಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣವೇನೆಂದು ಹೇಳಿದರೆ, ಸುಮಾರು ಇಪ್ಪತ್ತೊಂದು ಸಾವಿರದ ಎಂಟನೂರು ಚಿಲ್ಲರೆ ಹಳ್ಳಿಗಳು ಇರತಕ್ಕಂಥ ನಮ್ಮ ದೇಶದಲ್ಲಿ ಇಡೀ ನೀರಾವರಿಗೆ ಎಲ್ಲಾ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಭೂಗರ್ಭದಲ್ಲಿರ ತಕ್ಕಂಥ ನೀರು, ಹಳ್ಳಕೊಳ್ಳದಲ್ಲಿರತಕ್ಕಂಥ ನೀರು ಎಲ್ಲವನ್ನೂ ಉಪಯೋಗಿಸಿಕೊಂಡರೂ ಕೂಡ ಶೇಕಡ ೩೦–೩೫ರಷ್ಟು ಎಕರೆ ಪ್ರದೇಶಕ್ಕೆ ನಾವು ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವು ದಾದರೆ ಭಾರತ ದೇಶದಲ್ಲಿ ಅರೆ ಮರಳುಗಾಡು ಎನ್ನಿಸಿರತಕ್ಕಂಥ ರಾಜಸ್ಥಾನವನ್ನು ಬಿಟ್ಟರೆ ನಂತರ ಕರ್ನಾಟಕವೇ ಎಂದು ಇರತಕ್ಕಂಥ ಸಂದರ್ಭದಲ್ಲಿ ವ್ಯಾಪಕವಾಗಿರತಕ್ಕಂಥ ಕೆಲಸವನ್ನು ನಾವು ಅಭಿವೃದ್ಧಿ ಶೀಲವಾಗತಕ್ಕಂಥ ರೀತಿಯಲ್ಲಿ ಮಾಡುವುದಿದ್ದರೆ ನಮಗೆ ಬೇಕಾಗಿರತಕ್ಕಂಥದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢಿಕರಿಸುವುದು ಮಾನ್ಯ ಅಧ್ಯಕ್ಷರೇ, ಈ ವಾಸ್ತವ ಪರಿಸ್ಥಿತಿಯನ್ನು ಯೋಚನೆ ಮಾಡುವುದಾದರೆ, ಸುಮಾರು ೨೪ ಸಾವಿರ ಸೇವಾ ಸಹಕಾರ ಸಂಘಗಳು ಕರ್ನಾಟಕದಲ್ಲಿ ಇದ್ದಾಗ, ಕೇವಲ ೧೮ ಸಾವಿರ ಸಹಕಾರ ಸಂಘಗಳು ಮಾತ್ರ ಅರ್ಥಪೂರ್ಣವಾದ ಚಟು ವಟಿಕೆಯಲ್ಲಿ ನಿರತವಾಗಿವೆ ಎನ್ನುವುದು. ಈ ೧೮ ಸಾವಿರ ಸಹಕಾರ ಸಂಘಗಳಲ್ಲಿ ತೊಡಗಿಸಿರತಕ್ಕಂಥ, ಗ್ರಾಮಾಂತರ ಕೃಷಿರಂಗದಲ್ಲಿ ತೊಡಗಿಸಿರತಕ್ಕಂಥ, ಬಂಡವಾಳ. ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಗಿರಬಹುದು, ಬೇರೆ ವಾಣಿಜ್ಯ ಅಥವಾ ಸೇವಾ ಸಹಕಾರ ಸಂಘಗಳು ಆಗಿರಬಹುದು, ತೊಡಗಿಸಿರ ತಕ್ಕಂಥ ಹಣ ೪೩೦ ಕೋಟಿ ರೂಪಾಯಿಗಳು ಒಂದು ಲೆಕ್ಕಾಚಾರದ ಪ್ರಕಾರ ಕರ್ನಾಟಕ ರಾಜ್ಯ ಒಂದಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಇಷ್ಟು ಸಂಪನ್ಮೂಲಗಳನ್ನು ಕೊಟ್ಟರೆ, ಇಷ್ಟನ್ನು ಒದಗಿಸಿಕೊಳ್ಳುವುದರ ಮೂಲಕ ಅರ್ಥಪೂರ್ಣವಾದ ಕೆಲಸವನ್ನು ಮಾಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ ಇದನ್ನು ಹೇಳುವಾಗ ನಾನು ಮಾನ್ಯ ಶ್ರೀ ಜನಾರ್ಧನ ಪೂಜಾರಿಯವರ ಮಾತನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ಬೇರೆ ಬೇರೆ ಸಾಂಸ್ಥಿಕ ಸಂಸ್ಥೆಗಳಲ್ಲಿ ಇರುವಂಥ ಬಂಡವಾಳ ಒಂದು ಲಕ್ಷ ೨೦ ಸಾವಿರ ಕೋಟಿ ರೂಪಾಯಿಗಳೆಂದು ಹೇಳಿಕೆ ಯನ್ನು ಕೊಟ್ಟಿದ್ದಾರೆ. ೧ ಲಕ್ಷ ೨೦ ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಿರಬೇಕಾದಂಥ ಬಂಡವಾಳ ಇದ್ದಾಗ ಸಾಲಮೇಳದಲ್ಲಿ ಕೊಟ್ಟಿರುವಂಥಾದ್ದು ಐದುನೂರು ಚಿಲ್ಲರೆ ಕೋಟಿ ರೂಪಾಯಿ ಗಳು ಮಾತ್ರ. ಇಲ್ಲಿ ನಾವು ಸಾಲಮೇಳಗಳ ವಿರುದ್ಧವಾಗಿದ್ದೇವೆ ಎಂದು ಮಾತನಾಡುತ್ತಿದ್ದಾರೆ. ಸಾಲಮೇಳದ ವಿರುದ್ಧವಾಗಿ ಜನತಾ ಸರ್ಕಾರ ಹೇಳುವುದಿಲ್ಲ. ಬಡವರಿಗೆ ಯಾವ ದೃಷ್ಟಿಯಿಂದಾದರೂ ಸಾಲ ಸಿಗಬೇಕು ಎಂಬ ಅಭಿಪ್ರಾಯ ನಮ್ಮದೂ ಕೂಡ. ಆದರೆ ಎಲ್ಲಿಯವರೆಗೆ ನಮ್ಮ ಸಾಲದ ನೀತಿ ಭದ್ರತೆ ಆಧಾರದ ಮೇಲೆ ಆಗದೆ ಎಲ್ಲಿಯವರೆಗೆ ವಿಶ್ವಾಸ, ಅರ್ಹತೆ ಮೇಲೆ, ನಾಲಗೆಯ ಆಧಾರದ ಮೇಲೆ ಸಾಲವನ್ನು ಕೊಡುವುದನ್ನು ನಿರ್ಬಂಧ ಮಾಡದೇ ಹೋದರೆ ನಾವು ಮಾಡತಕ್ಕಂಥ ಎಲ್ಲಾ ಹೋರಾಟ ಕೂಡ ವ್ಯರ್ಥವಾಗಿ ಬಂಡವಾಳಶಾಯಿಗಳು, ಯಾರು ರೈತರ ಸ್ವತ್ತನ್ನು ಒತ್ತೆ ಇಟ್ಟು ಕೊಳ್ಳುತ್ತಾರೆ, ಅಂತಹ ವ್ಯಕ್ತಿಗಳಿಗೆ ಇದು ಸಿಗುತ್ತದೆಯೇ ಹೊರತು ಏನು ಲಕ್ಷ ಲಕ್ಷ ಕೋಟಿ ಕೋಟಿ ಜನ ೬ ಅಡಿ ೩ ಅಡಿ ಜಾಗಕ್ಕಾಗಿ ಯಾರು ಇದ್ದಾರೆ. ಅವರಿಗೆ ನಿಜವಾಗಿಯೂ ಸಾಲ ಕೊಡವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ನಮ್ಮ ಮುಖ್ಯಮಂತ್ರಿಗಳು ಸಾಲಮೇಳದ ವಿರುದ್ಧವಾಗಿ ಮಾತನ್ನು ಹೇಳುವುದಿಲ್ಲ. ಬಡವರಿಗೆ ಸಾಲ ಕೊಡಬಾರದು ಎಂದು ಅವರು ಹೇಳಿಲ್ಲ. ಏನು ನಮ್ಮ ಪ್ರಧಾನಮಂತ್ರಿಯವರು ೨೦ನೇ ಶತಮಾನದಿಂದ ೨೧ನೇ ಶತಮಾನಕ್ಕೆ ನಮ್ಮನ್ನು ಕರೆದುಕೊಂಡು ಹೋದಾಗ ಬಡತನದ ಸೀಮಾ ರೇಖೆಯಲ್ಲಿರತಕ್ಕಂಥ ಜನರ ಸಂಖ್ಯೆ ಶೇಕಡ ೧೮ ರಷ್ಟು ಆಗುತ್ತದೆ ಎಂದು ನಮ್ಮ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅಂದರೆ ಶೇಕಡ ೧೮ ರಷ್ಟು ಇರತಕ್ಕಂಥ ಈ ಜನಗಳಿಗೆ ಬದುಕುವ ಹಕ್ಕು ಇಲ್ಲವೇ ? ಘನತೆಯಿಂದ ಸ್ವಾಭಿಮಾನದಿಂದ ಅವರು ಮನುಷ್ಯರಂತೆ ಬದುಕುವ ಹಕ್ಕು ಇಲ್ಲವೇ ? ೨೦೦೦ನೇ ವರ್ಷಕ್ಕೆ ಎಲ್ಲರೂ ಮುಟ್ಟುತ್ತೇವೆ. ಮುಟ್ಟುವಂತಹ ಈ ಸಂದರ್ಭದಲ್ಲಿ ಮನುಷ್ಯರಾಗಿ ಬದುಕುವಂತಹ, ಸಮಾಜದ ಬದುಕಿನ ಕಲ್ಪನೆಯನ್ನು ನಾವು ಕಾಣ

ಬೇಕಾಗುತ್ತದೆ. ಸ್ವಾಭಿಮಾನದಿಂದ, ಆತ್ಮೀಯ ಗೌರವದಿಂದ ಬದುಕುವ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾದರೆ, ಈ ನಮ್ಮ ಬ್ಯಾಂಕ್‌ಗಳಲ್ಲಿರತಕ್ಕ ನೀತಿಯನ್ನು ಬದಲಾವಣೆ ಮಾಡುವುದರ ಮೂಲಕ ಶ್ರೀಮಾನ್ ಜನಾರ್ಧನ ಪೂಜಾರಿಯವರು ಇಟ್ಟಿರತಕ್ಕಂಥ ಒಂದು ಲಕ್ಷ ೨೦ ಸಾವಿರ ಕೋಟಿ ರೂಪಾಯಿಗಳು ತೊಡಗಿಸಿರತಕ್ಕಂಥ ಬಂಡವಾಳ ಏನಿದೆ, ಈ ಬಂಡವಾಳದ ಅಗತ್ಯಗಳನ್ನು ಕಂಡುಕೊಳ್ಳತಕ್ಕಂಥ ಕೃಷಿ ರಂಗದಲ್ಲಿ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಚಾಲಪ್ಪನವರ ನೇತೃತ್ವದಲ್ಲಿ ಒಂದು ಯೋಜನೆಯನ್ನು ನಾವು ಮಾಡಿದ್ದೇವೆ. ಇದು ಕಾಮಧೇನು ಕಲ್ಪವೃಕ್ಷ ಎನ್ನುವಂಥ ಯೋಜನೆ. ಒಣ ಬೇಸಾಯದ ಅಭಿವೃದ್ಧಿಯ ಬಗ್ಗೆ ಮತ್ತು ಎಲ್ಲರೂ ನಿರೀಕ್ಷಿಸಿರುವಂತಹ ಕುಟುಂಬಗಳಿಗೆ ಸಾಲದ ಯೋಜನೆ. ಇದು ಸಮಗ್ರ ಸಾಲದ ಯೋಜನೆ. Comprehensive Credit policy. ಇದನ್ನು ನಾವು ತಯಾರು ಮಾಡಿ. ೧೫ ವರ್ಷಗಳಲ್ಲಿ ಯಾವ ಯಾವ ಕುಟುಂಬಗಳಿಗೆ, ಯಾವ ಯಾವುದು ಅಗತ್ಯ ಇದೆ. ಅವರು ಉತ್ಪಾದನಾ ರಂಗದಲ್ಲಿ ಕೆಲಸವನ್ನು ಮಾಡಬೇಕಾದರೆ, ಯಾವುದಾದರೂ ಅನುತ್ಪಾದನೆಯ ಕೆಲಸದಲ್ಲಿ ತೊಡಗಿರುವಾಗ, ಉತ್ಪಾದನಾ ಸಾಮರ್ಥ್ಯ ಬೆಳೆಸಿಕೊಳ್ಳತಕ್ಕ ರೀತಿಯಲ್ಲಿ ಅವರ ಎಲ್ಲಾ ನೀತಿ, ನಡವಳಿಕೆ, ಉದ್ಯೋಗ. ಮತ್ತಿತರ ಎಲ್ಲಾ ಮಾಹಿತಿಯನ್ನು ಸಂಗ್ರಹ ಮಾಡುವುದರ ಮೂಲಕ ಸಮಗ್ರ ಸಾಲದ ಯೋಜನೆಯ ಪರಿಕಲ್ಪನೆಯನ್ನು ಮಾಡಿದ್ದೇವೆ. ಇದು ಇಡೀ ರಾಷ್ಟ್ರದಲ್ಲಿ ಪ್ರಶಂಸನೀಯವಾದುದು ಮತ್ತು ಪ್ರಥಮ ಬಾರಿಗೆ ಮಾಡಿರತಕ್ಕಂಥ ಪರಿಕಲ್ಪನೆ. ಈ ಕಾರಣದಿಂದ ಈ ಯೋಜನೆಯನ್ನು ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಈ ಯೋಜನೆಯನ್ನು ಸಂಪೂರ್ಣವಾಗಿ, ಭ್ರಷ್ಟಾಚಾರ ವಿಮುಕ್ತವಾಗಿ, ಅತ್ಯಂತ ಪ್ರಾಮಾಣಿಕವಾಗಿ ತರುವಂಥ ಪ್ರಯತ್ನ ಮಾಡುವುದಾದರೆ, ೨೧೦೦ನೇ ವರ್ಷಕ್ಕೆ ಪ್ರಧಾನ ಮಂತ್ರಿಯವರು ನಮ್ಮನ್ನೆಲ್ಲಾ ಕರೆದುಕೊಂಡು ಹೋಗುವಾಗ, ನಾವು ನಮ್ಮ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬಡತನದಿಂದ ವಿಮುಕ್ತವಾದ, ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರತಕ್ಕಂಥ ಗ್ರಾಮೀಣ ಪ್ರದೇಶದ ಜನ, ಅವರು ಆತ್ಮಗೌರವದಿಂದ, ಮನುಷ್ಯರಾಗಿ, ಬದುಕುವಂತಹ ವ್ಯವಸ್ಥೆಗೆ ಸಾಧ್ಯವಾಗುತ್ತದೆ. ಆಗ ಅವರು ಸಾಲಮೇಳಗಳಿಗೆ ಹೋಗುವುದಿಲ್ಲ. ಬ್ಯಾಂಕ್‌ಗಳಿಗೆ ಹೋಗುವುದಿಲ್ಲ, ಸಹಕಾರ ಸಂಘಗಳಿಗೆ ಹೋಗುವುದಿಲ್ಲ ಎನ್ನುವ ಮಾತನ್ನು ಎಲ್ಲರೂ ಹೇಳಬಹುದು. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡದೇ ಹೋದರೂ ಬಹಳ ಸಂಕೀರ್ಣವಾಗಿರತಕ್ಕಂಥ ಅರ್ಥಪೂರ್ಣವಾಗಿರತಕ್ಕಂಥ ಭಾಷಣವನ್ನು ಮಾಡಿದ್ದಾರೆ. ಇಡೀ ನಮ್ಮ ಸರ್ಕಾರ ಮಾಡಿರತಕ್ಕಂಥ ಕೆಲಸಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೇಲ್ನೋಟಕ್ಕೆ ಆರ್ಥಿಕವಾಗಿ ಕಂಡುಬರುವಂತಹ, ಅನಾರೋಗ್ಯಕರವಾದ ಲಕ್ಷಣಗಳು ಏನಿವೆ ಆ ಲಕ್ಷಣಗಳ ಮೂಲಭೂತವಾಗಿ ನಮ್ಮ ನೈತಿಕ ಅಗತ್ಯಗಳನ್ನು ಕಂಡುಕೊಳ್ಳಬಹುದಾದಂತಹದ್ದು ಬಹಳ ಮುಖ್ಯ. ಈ ಮಾತನ್ನು ನಾನು ಏಕೆ ಹೇಳುತ್ತೇನೆ ಎಂದರೆ, ಈ ಹಿಂದೆ ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿಯೂ ಕೂಡ ಪ್ರತಿಯೊಬ್ಬರೂ ಅಲ್ಲಿರತಕ್ಕಂಥ ವಿಚಾರಗಳ ಬಗ್ಗೆ ಬದ್ಧವಾಗಿರತಕ್ಕಂಥದ್ದು ಮತ್ತು ಕನಿಷ್ಟವಾದ ಲಕ್ಷ್ಮಣರೇಖೆಯನ್ನು ತನ್ನ ಬದುಕಿನ ಸುತ್ತ ಹಾಕಿಕೊಂಡಿರತಕ್ಕಂಥದ್ದು ಬಹು ಮುಖ್ಯ. ಈ ಸಂದರ್ಭದಲ್ಲಿ ನೆಪೋಲಿಯನ್ ಈ ರೀತಿ ಹೇಳಿದ್ದಾರೆ. When Napolien Bonaparte was alive every soldier was alive. ಗಾಂಧೀಜೀ ಬದುಕಿದ್ದಾಗ ಅವರ ಎಲ್ಲಾ ಹೋರಾಟಗಳಿಗೆ ಬೆಂಬಲ ಕೊಡಲು ನಮ್ಮ ಜನ ತಯಾರಾಗಿದ್ದರು. ಆದರೆ ಗಾಂಧೀಜಿ ಸತ್ತನಂತರ, ಅಲ್ಲಿರತಕ್ಕಂಥ ಜನ ತಮ್ಮ ಹೊಳಪನ್ನು ಕಳೆದುಕೊಂಡು ಸ್ವಾತಂತ್ರ್ಯ ಹೋರಾಟಗಾರರಾಗಿದರೂ ಕೂಡ, ಆ ಒಂದು ಅನೈತಿಕತೆಗೆ ಮತ್ತು ನೈತಿಕ ಅಧಃಪತನಕ್ಕೆ ಒಳಗಾಗಿರತಕ್ಕಂಥದ್ದು ಇದೆ. ಸಾಮಾಜಿಕ ಸಂಘರ್ಷದಲ್ಲಿ ಎಲ್ಲಾ ಸಾಮ್ರಾಜ್ಯಗಳೂ ಕೂಡ, ಎಷ್ಟೋ ಬಲಶಾಲಿಯಾದ ಸಾಮ್ರಾಜ್ಯಗಳೂ ಕೂಡ ನೈತಿಕ ಅಧಃಪತನವನ್ನು ಹೊಂದುತ್ತಿವಾಗ, ಇಂತಹ ಪರಿಸ್ಥಿತಿಗಳಿಗೆ ಒಳಗಾಗಿರುವುದು ಐತಿಹಾಸಿಕ ಸತ್ಯ. ಈ ಕಾರಣದಿಂದಲೇ ಇಲ್ಲಿ, ಲಾರ್ಡ್ ಹೆಲಿಷನ್ ಕೊಟ್ಟಿರತಕ್ಕಂಥ ಒಂದು ವಾಕ್ಯವನ್ನು ಹೇಳುತ್ತೇನೆ.

> "The Symtoms of our malice, may be economic and may show themselves in price rises, shortages and industrial disputes. But underlying symptoms is the disease which has destroyed democracies in the past and the causes of the diseases are not economic. They are moral political and Constitutional."

ಯಾವುದೇ ಕಾರಣದಿಂದ ನಾವು ಅಧಿಕಾರಕ್ಕೆ ಬರಬೇಕೆಂಬ ಕಲ್ಪನೆ ಇದ್ದರೆ, ಆ ಒಂದು ತವಕದ ಹಿನ್ನೆಲೆಯಲ್ಲಿರತಕ್ಕಂಥ ಅನೈತಿಕತೆಗೆ ಮತ್ತು ಇಡೀ ಸಾಮಾಜಿಕ ನೀತಿಯ ನೆಲೆಗಟ್ಟನ್ನು ನಾವು, ನಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸತಕ್ಕಂಥದ್ದು. ಮೊನ್ನೆ ಎರಡು ದಿವಸಗಳ ಕಾಲ ಪ್ರಸ್ತಾಪ ಮಾಡು

ವಾಗ, ಹೆಂಡದ ಹೊಳೆ ಹರಿಸಿದ್ದೀರಿ, ಭ್ರಷ್ಟಾಚಾರದ ಹೊಳೆ ಹರಿಸಿದ್ದೀರಿ ಎನ್ನುವ ಮಾತುಗಳು ಬಂದವು. ಜನತಾ ಪಕ್ಷದವರು ಮಾತ್ರ ಬಹಳ ಚೆನ್ನಾಗಿ ಮಾಡಿದ್ದಾರೆ, ಕಾಂಗ್ರೆಸ್‌ನವರು ಹೆಂಡದ ಹೊಳೆ ಹರಿಸಿದ್ದಾರೆ, ಎನ್ನುವ ಮಾತಲ್ಲ. ನಾವೆಲ್ಲರೂ ಈ ವಿಚಾರದಲ್ಲಿ ಆತ್ಮ ಪರಿಶೋಧನೆ ಮಾಡಿ ಕೊಳ್ಳಬೇಕು. ನಾವು ಪಕ್ಷಾತೀತವಾಗಿ ಯೋಚನೆ ಮಾಡುವ ಹಾಗಿದ್ದರೆ, ಇಲ್ಲಿಯವರೆಗೂ ಅನೇಕ ಚುನಾವಣೆಗಳಲ್ಲಿ ಭ್ರಷ್ಟಾಚಾರದ ವ್ಯಾಪಕ ಜಾಲವನ್ನೇ ತಂದಿದ್ದೇವೆ. ಇಲ್ಲಿ ಹಣ ಮತ್ತು ಜಾತಿ ಹೆಚ್ಚು ಪ್ರಭಾವಯುತವಾಗಿ ಕೆಲಸ ಮಾಡುತ್ತಿವೆ. ಇವುಗಳು ಇಷ್ಟು ಪ್ರಭಾವಯುತವಾಗಿ ಕೆಲಸ ಮಾಡತಕ್ಕಂಥಾದ್ದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಮ್ಮ ಮುಖ್ಯಮಂತ್ರಿಗಳು ಚುನಾವಣಾ ನೀತಿಗೆ ಒಂದು ದೊಡ್ಡ ಬದಲಾವಣೆಯನ್ನು ಕೇಂದ್ರ ತರಬೇಕೆಂದು ಹೇಳಿ ಎಲೆಕ್ಟೋರಲ್ ರಿಫಾರ್ಮ್ಸ್ ಅಂಡ್ ಲ್ಯಾಕ್ ಆಫ್ ಪೊಲಿಟಿಕಲ್ ವಿಲ್' ಎಂಬ ಪುಸ್ತಕವನ್ನೂ ಸಹ ಪ್ರಕಟಣೆ ಮಾಡಿದ್ದಾರೆ. ಚುನಾವಣಾ ಸುಧಾರಣೆ ಮಾಡದಿರುವುದು ಹಾಗೂ ರಾಜಕೀಯ ನಿರ್ಧಾರಗಳ ಅನಿಶ್ಚಿತೆ ನಮ್ಮ ಇಂತಹ ಭ್ರಷ್ಟಾಚಾರ ವ್ಯವಸ್ಥೆಗಳಿಗೆ ಕಾರಣೀಭೂತವಾಗಿದೆ. ಆದುದರಿಂದ ನಾವೆಲ್ಲರೂ ಕೂಡ ಪಕ್ಷಾತೀತರಾಗಿ ಇಡೀಯಾಗಿ ಸಾಮಾಜಿಕ ಚೌಕಟ್ಟಿನ ಭದ್ರವಾದ ತಳಹದಿಯ ಮೇಲೆ ನಿಲ್ಲಬೇಕಾಗಿದ್ದರೆ ಇಂತಹ ನೈತಿಕ ಅಧಃಪತನವನ್ನು ತಡೆಗಟ್ಟುವ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದನ್ನು ತಡೆಗಟ್ಟಬೇಕಾಗಿದ್ದರೆ, ಆರ್ಥಿಕ ಸ್ವಾತಂತ್ರ್ಯಗೆ, ಅದರ ಸಂಸ್ಕೃತಿಗೆ ಜನಸಾಮಾನ್ಯರನ್ನು ಒಳಗಾಗಿಸತಕ್ಕಂಥ, ಜಾತಿ ಭ್ರಷ್ಟತೆಗೆ ಒಳಗಾಗಿರತಕ್ಕಂಥ ಸಮಾಜವನ್ನು ಮೇಲೆ ಎತ್ತತಕ್ಕಂಥ ಪ್ರವೃತ್ತಿಯನ್ನು ತರಬೇಕು, ಈ ಪ್ರವೃತ್ತಿಯನ್ನು ತರಲು ಮೂರು ಕಡೆಗೆ ಮುಪ್ಪುರಿಗೊಂಡು ಇರತಕ್ಕ ಪ್ರಯತ್ನಗಳನ್ನು ಮಾಡಬೇಕು, ಈ ಪ್ರಯತ್ನಗಳನ್ನು ಮಾಡುವುದರ ಮೂಲಕ ಹೊಸನಾಡನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಗೆಳೆಯರಾದ ವೈ.ಕೆ. ರಾಮಯ್ಯನವರು ಇನ್ನೂ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡ ಬಹುದು, ಇಲ್ಲಿ ಪ್ರಶ್ನೆ ಇಷ್ಟೇ, ನಮ್ಮ ರಾಜ್ಯಪಾಲರು ಮಾಡಿರತಕ್ಕ ಭಾಷಣ ಬಹಳ ಸಂಕೀರ್ಣವಾಗಿದ್ದರೂ ಕೂಡ ಸಂಕ್ಷಿಪ್ತವಾಗಿದ್ದರೂ ಕೂಡ ಅತ್ಯಂತ ಚೆನ್ನಾಗಿದೆ. ನಮ್ಮ ಸರಕಾರ ಮಾಡಿರತಕ್ಕಂಥ ಕೆಲಸಗಳ ಬಗ್ಗೆ, ಮೂಲಭೂತವಾಗಿರತಕ್ಕಂಥ ಕೆಲಸಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಕೊನೆಯ ೭೪ನೇ ಪ್ಯಾರಾದಲ್ಲಿ ನಮ್ಮ ಮೂರನೆಯ ವೇತನ ಆಯೋಗದ ಶಿಫಾರಸ್ಸುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾದುದು ಇದೆ. ನಮ್ಮ ಸರಕಾರಿ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡಬೇಕಾಗಿರತಕ್ಕಂಥಾದ್ದು ಸವಲತ್ತುಗಳನ್ನು ಕೊಡಬೇಕಾದುದು ಮುಖ್ಯ ಎಂಬ ಮಾತನ್ನು ಒಪ್ಪುವುದಾದರೂ ಕೂಡಾ, ಕೇಂದ್ರ ಸರಕಾರದವರು ನಾಲ್ಕನೆಯ ವೇತನ ಆಯೋಗದ ಶಿಫಾರಸ್ಸುಗಳನ್ನು ಒಪ್ಪುವುದರ ಮೂಲಕ ಬೇರೆ ಬೇರೆ ರಾಜ್ಯಗಳ ಆರ್ಥಿಕ ನೀತಿಯ ಮೇಲೆ ಎಂತಹ ಒತ್ತಡಗಳನ್ನು ತರುತ್ತಾರೆ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಎಲ್ಲಾ ರಾಜ್ಯಗಳಲ್ಲಿ ೬೧ ಲಕ್ಷ ಜನ ಸರಕಾರಿ ನೌಕರರು ಕೆಲಸ ಮಾಡುತ್ತಿರಬಹುದು. ಕೇಂದ್ರ ಸರಕಾರವನ್ನು ಬಿಟ್ಟರೆ, ಭಾರತದೇಶದ ಎಲ್ಲಾ ರಾಜ್ಯಗಳಲ್ಲಿ ಇರತಕ್ಕ ರಾಜ್ಯ ಸರಕಾರಿ ನೌಕರರು ೬೧ ಲಕ್ಷ ಇರಬಹುದು. ಈ ಸರಕಾರಿ ನೌಕರರಿಗೆ ಹಾಗೂ ಕೇಂದ್ರ ಸರಕಾರದಲ್ಲಿರತಕ್ಕಂಥ ನೌಕರರಿಗೆ ನಾಲ್ಕನೇ ವೇತನ ಆಯೋಗ ಶಿಫಾರಸ್ಸು ಮಾಡಿರುವ ಪ್ರಕಾರ ನಾವು ೪೫೦೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿರತಕ್ಕಂಥ ಪ್ರಶ್ನೆ ಬರುತ್ತದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಹಣವನ್ನು ರೂಢಿಸಿ ಕೊಡಬೇಕಾಗುತ್ತದೆ. ಆದುದರಿಂದ ಈ ವಿಚಾರಗಳ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾವು ಸರಕಾರಿ ನೌಕರರಿಗೆ ಒಳ್ಳೆಯ ವೇತನ, ಹೆಚ್ಚು ವೇತನ ಕೊಡತಕ್ಕಂಥಾದ್ದರ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ. ಆದರೆ ಆಡಳಿತದಲ್ಲಿ ಕೆಲಸ ಮಾಡತಕ್ಕಂಥ ಜನ ಹೆಚ್ಚು ಜವಾಬ್ದಾರಿಯುತರಾಗಿ ಹೆಚ್ಚು ಕಳಕಳಿಯಿಂದ ಸಾಮಾಜಿಕ ಕಳಕಳಿಯಿಂದ ಕೆಲಸ ಮಾಡಬೇಕು. ಅವರಲ್ಲಿ, ಭ್ರಷ್ಟತೆಯನ್ನು ದೂರ ಇರತಕ್ಕಂಥ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದು ಮುಖ್ಯವಾಗಿರುವುದರಿಂದ, ನಮ್ಮ ಸರಕಾರ, ರಾಜ್ಯ ಸರಕಾರಿ ನೌಕರರ ಬಗ್ಗೆ ಹೆಚ್ಚು ಕಳಕಳಿ ಇರತಕ್ಕಂಥಾದ್ದು ಸರಿ. ಆದುದರಿಂದ ಸರಕಾರದಲ್ಲಿ ಕೆಲಸ ಮಾಡತಕ್ಕಂಥ, ಆಡಳಿತದಲ್ಲಿ ಕೆಲಸ ಮಾಡತಕ್ಕಂಥ ಜನಗಳಿಗೆ ತಮ್ಮ ಮೂಲಕ ಈ ಸದನದ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ, ನಿಮ್ಮ ವೇತನದ ಬಗ್ಗೆ, ತುಟ್ಟಿಭತ್ಯದ ಬಗ್ಗೆ, ಬಡ್ತಿಯ ಬಗ್ಗೆ, ಸರಕಾರ ಕಾಳಜಿ ವಹಿಸಿಕೊಳ್ಳುತ್ತದೆ, ನೀವು ಹೆಚ್ಚು ಜವಾಬ್ದಾರಿಯುತರಾಗಿ, ಹೆಚ್ಚು ಸಂಕೀರ್ಣವಾಗಿ ಕೆಲಸ ಮಾಡಬೇಕಿರತಕ್ಕದ್ದು ಮುಖ್ಯ, ಹೆಚ್ಚು ಜವಾಬ್ದಾರಿಯುತವಾಗಿ, ಹೆಚ್ಚು ಸಂಕೀರ್ಣವಾಗಿ, ಭ್ರಷ್ಟಾಚಾರ ವಿಮುಕ್ತವಾಗಿ, ದಕ್ಷತೆಯಿಂದ ಕೆಲಸವನ್ನು ತಾವು ಮಾಡುವುದರ ಮೂಲಕ ನೀವು ನಮ್ಮಲ್ಲಿರತಕ್ಕಂಥ ಎಲ್ಲಾ ಸರಕಾರಿ ಕಾರ್ಯಕ್ರಮಗಳನ್ನು ಕೊನೆಯ ಮನುಷ್ಯನಿಗೆ ಮುಟ್ಟಿಸುವುದಕ್ಕೆ ಸಹಾಯವಾಗುತ್ತದೆ ಎಂಬ ಮಾತನ್ನು ಹೇಳಿ, ರಾಜ್ಯಪಾಲರು ೨೭ನೇ ತಾರೀಖು ಮಾಡಿರತಕ್ಕಂಥ ಭಾಷಣಕ್ಕೆ ನನ್ನ ವಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕ್ಲಾರಿಫಿಕೇಷನ್ ತಾವು ಕೊಡಬೇಕಾಗಿದೆ, ತಮ್ಮ ಭಾಷಣ ಮುಕ್ತಾಯವಾಗುತ್ತದೆ ಆದುದರಿಂದ........

ಅಧ್ಯಕ್ಷರು.—ಕ್ಲಾರಿಫಿಕೇಷನ್ ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಕ್ಲಾರಿಫಿಕೇಷನ್ ಏನು ಎಂದರೆ, ಮಾನ್ಯ ಜಾಲಪ್ಪನವರು ಒಂದು ಪ್ರಾಜೆಕ್ಟ್ ಮಾಡಿದ್ದಾರೆ, ಅದರಲ್ಲಿ ಅಗ್ರಿಕಲ್ಚರಿಸ್ಟ್ಸ್‌ಗೆ, ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಸಹಾಯವಾಗುತ್ತದೆ ಎಂದು ಅವರು ಹೇಳಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯ ಮೇಲೆ ತಯಾರು ಮಾಡಿದ್ದಾರೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ದಿಲ್ಲಿಯಲ್ಲಿ ಹೋದಾಗ, ಇಲ್ಲಿ ಬಂದಾಗ ಅನೇಕ ಸಲ ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನು ಇಲ್ಲಿರುವುದಿಲ್ಲ, ಬೇಗ ಹೋಗುತ್ತೇನೆ, ನನ್ನ ಜಾಗಕ್ಕೆ ಬೇರೆಯವರು ಬರುತ್ತಿದ್ದಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮತ್ತೆ ತಾವು ಅವರನ್ನು ಡೀವಿಯೇಷನ್ ಮಾಡುವುದಕ್ಕೆ ಹೊರಟರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೋದರೆ ಗತಿ ಏನು ? ಮಾನ್ಯ ಜಾಲಪ್ಪನವರ ಯೋಜನೆಯ ಗತಿ ಏನು, ಯಾವ ರೀತಿ ಈ ಪರಿಕಲ್ಪನೆಯನ್ನು ಇಂಪ್ಲಿಮೆಂಟ್ ಮಾಡುತ್ತೀರಿ ? ಈ ವಿಚಾರ ಪೇಪರ್‌ನಲ್ಲಿ ಬಂದಿದೆ, ಸಂಜೆವಾಣಿಯಲ್ಲಿ ಬಂದಿದೆ, ಹೋಗಿಯೇ ಹೋಗುತ್ತೇನೆ, ದೇವೇಗೌಡರಿಗೆ ಕೊಟ್ಟು ಹೋಗುತ್ತೇನೆ ಎಂಬ ಧಾಟಿಯಲ್ಲಿ ಮಾತನಾಡಿದ್ದಾರೆ. ನಾಳೆ ದೇವೇಗೌಡರು ಬಂದರೆ ಇದು ಇಂಪ್ಲಿಮೆಂಟ್ ಆಗುತ್ತದೆಯೇ ? ನಿಮ್ಮ ಸರಕಾರ ಇದ್ದಾಗ ಇಂಪ್ಲಿಮೆಂಟ್ ಆಗುತ್ತದೆಯೇ ? ಇದು ಹೆಗಡೆಯವರ ಪರಿಕಲ್ಪನೆ ಇರಬಹುದು ಇವರು ಈ ರೀತಿಯಾಗಿ ಇಲ್ಲಿ ಹೇಳಿದ್ದಾರೆ, ಇದರಲ್ಲಿ ಸರಕಾರದ್ದು ಏನಿದೆ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಅಧ್ಯಕ್ಷರೇ ಇಲ್ಲಿ ನಾವು ಬಹಳ ಮುಖ್ಯವಾದ ವಿಷಯವನ್ನು ಯೋಚನೆ ಮಾಡಬೇಕಾಗಿದೆ. ಯಾರೇ ಆಗಲಿ ಯಾವುದಾದರೊಂದು ಯೋಜನೆಯನ್ನು ಸೃಷ್ಟಿ ಮಾಡಿದರೆ ಅಂತಹ ಯೋಜನೆಗಳು ನಮ್ಮ ಸಮಾಜದಲ್ಲಿ ವ್ಯವಸ್ಥಿತವಾಗಿ ನಿರ್ಮಾಣ ಗೊಳ್ಳುತ್ತವೆ. ಇಲ್ಲಿ ನಾವು ವ್ಯಕ್ತಿಯ ಯೋಜನೆಯನ್ನು ಗುರುತಿಟ್ಟುಕೊಂಡಿರುತ್ತೇವೆ. ಅದೇ ಒಂದು ದೃಷ್ಟಿಕೋನವನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಟ್ಟುಕೊಂಡಿರುವುದಾದರೆ ಅವರಲ್ಲಿ ಯಾವುದೇ ಬಿನ್ನಾಭಿಪ್ರಾಯಗಳು ಇದ್ದರೂ ಸಹ ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ ಅದೇನೆಂದರೆ ಶ್ರೀಮತಿ ಇಂದಿರಾಗಾಂಧಿಯವರ ಪರಿಕಲ್ಪನೆ ಅವರ ಆರ್ಥಿಕ ವ್ಯವಸ್ಥೆ ಅವರ ಸಾವಿನೊಡನೆ ಅಳಿಸಿ ಹೋಗುತ್ತವೆಯೇನು ? ಅವರು ಒಬ್ಬ ರಾಷ್ಟ್ರನಾಯಕಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಕಾಂಗ್ರೇಸ್ ಪಕ್ಷದ ನೀತಿ......

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಬ್ಬರೆ ಅಧಿಕಾರದಲ್ಲಿರಬೇಕೆನ್ನುವುದು. ಈ ಸಮಾಜದ ರಾಜಕೀಯ ತತ್ವವಲ್ಲ. ಅದು ಸರಿಯಾದುದೂ ಅಲ್ಲ. ಯಾರಾದರೂ ಅಧಿಕಾರದಲ್ಲಿದ್ದಾಗ ಯಾವುದಾದರೊಂದು ಯೋಜನೆ ಯಾವುದಾದರೊಂದು ನೀತಿಯನ್ನು ಮಾಡಿದರೆ ಆ ಯೋಜನೆ ಅನೇಕ ರಾಮಕೃಷ್ಣಹೆಗಡೆಯವರು ಅನೇಕ ಮಲ್ಲಿಕಾರ್ಜುನ ಖರ್ಗೆಯವರನ್ನು ಸೃಷ್ಟಿ ಮಾಡುತ್ತಾ. ಗ್ರಾಮಾಭಿವೃದ್ಧಿಯನ್ನು ಮಾಡತಕ್ಕಂಥ ಯೋಜನೆ ನಾವು ಅಧಿಕಾರದಲ್ಲಿ ಉಳಿಯ ಬೇಕೆನ್ನುವುದಿಲ್ಲ ಅಧಿಕಾರದಲ್ಲಿದ್ದಂತಹ ಕಾಲದಲ್ಲಿ ಯಾವ ನೀತಿಯನ್ನು ನಾವು ನಿರೂಪಣೆ ಮಾಡಿದ್ದೇವೆ. ಯಾವಪರಿಪಕ್ವವಾದ ಕೆಲಸವನ್ನು ಮಾಡಿದ್ದೇವೆ ಎನ್ನುವುದು ಮುಖ್ಯ. ಈಗ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ರಾಷ್ಟ್ರರಾಜಕಾರಣಕ್ಕೆ ಹೋಗಬಹುದು, ಅದನ್ನು ನಾವು ನೀವುಎಲ್ಲರೂ ಸ್ವಾಗತ ಮಾಡೋಣ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹ ಸ್ವಾಗತ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ ನಾನು ವೇತನ ಆಯೋಗದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಕೇಂದ್ರ ಸರ್ಕಾರದ ೪ನೇ ವೇತನ ಆಯೋಗದ ಶಿಫಾರಸ್ಸ್‌ಗಳ ಪ್ರಕಾರ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೪೫೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ತಮ್ಮ ಮೂಲಕ ನಾನು ನಮ್ಮ ನೌಕರಬಾಂದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಆಡಳಿತದಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ನಿಮಗೆ ಸಿಗುವಂತಹ ಸೌಲಭ್ಯಗಳಲ್ಲಿ ನೀವು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಅತಿ ಕೆಳಹಂತದಲ್ಲಿರುವ ಕೋಟಿ ಕೋಟಿ ಬಡಜನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವ ಬಡಜನತೆಯ ಉದ್ಧಾರಕ್ಕಾಗಿ ಶ್ರಮಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ರಾಜ್ಯಪಾಲರ ಭಾಷಣವನ್ನು ನಾನು ಅತ್ಯಂತ ಹೃದಯಪೂರ್ವಕವಾಗಿ ಸ್ವಾಗತ ಮಾತನಾಡಲು ಮಾಡಿ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್). ಸನ್ಮಾನ್ಯ ಅಧ್ಯಕ್ಷರೇ ನನ್ನ ಸ್ನೇಹಿತರಾದ ಶ್ರೀಮಾನ್ ಎಂ. ಪಿ. ಪ್ರಕಾಶ್‌ರವರು ಈ ಸದನದ ಮುಂದೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಅರ್ಪಿಸಿ ಮಾತನಾಡಿದಂಥ ಕಾಲದಲ್ಲಿ ಅದನ್ನು ನಾನು ಅನುಮೋದನೆ ಮಾಡಿ ಎರಡದ ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಇಲ್ಲಿ ಒಂದು ಸಮಸ್ಯೆ ಇದೆ. ಆ ಸಮಸ್ಯೆಯಿಂದ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತಿದೆ, ಅದೇನೆಂದರೆ ರೋಟರಿ ಕ್ಲಬ್ ಸದಸ್ಯರಾದ ಶ್ರೀ ಕೆ. ಎಸ್. ಮೆನನ್‌ರವರು ಮೂರು ಇಂಪಾಜಿಬಲ್ ಟೀಸ್ ಹೇಳಿದ್ದರು. ಅವು ಯಾವುವೆಂದು First impossibility is to climb a wall which is leaving towards us. The Second impossibility is to kiss a girl who is learning towards the other side. ಮೂರನೆಯದು ಯಾವುದೆಂದರೆ ಯಾವುದಾದರೊಂದು ವಿಷಯದ ಮೇಲೆ ಅವರು ತಿಳಿದುಕೊಂಡಿರತಕ್ಕಂಥ ವಿಷಯದ ಉದ್ದನೆಯ ಭಾಷಣ ಮಾಡಿದರೆ ಅದರ ಮೇಲೆ ಮತ್ತೆ ಮಾತನಾಡತಕ್ಕಂಥಾದ್ದು ಆ ಒಂದು ಪರಿಸ್ಥಿತಿಯಲ್ಲಿ ಈಗ ನಾನು ಇದ್ದೇನೆ. ನನ್ನ ಸ್ನೇಹಿತರಾದ ಶ್ರೀ ಎಂ. ಪಿ. ಪ್ರಕಾಶ್‌ರವರು ರಾಜ್ಯಪಾಲರ ಭಾಷಣದ ಮೇಲೆ ಸುದೀರ್ಘವಾಗಿ ಸವಿಸ್ತಾರವಾಗಿ ವಿಶ್ಲೇಷಣೆ ಮಾಡಿದ್ದಾರೆ. ಅದೇ ವಿಷಯದ ಮೇಲೆ ಈಗ ನಾನು ಬೇರೆ ದೃಷ್ಟಿಕೋನವನ್ನು ಇಟ್ಟುಕೊಂಡು, ನಾಲ್ಕು ಜನರನ್ನು ಕೂಡಿಸಿಕೊಂಡು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ರಾಜ್ಯಪಾಲರ ಭಾಷಣ ಒಂದು ವಾಡಿಕೆಗೋಸ್ಕರ, ಸೌಜನ್ಯಕ್ಕೋಸ್ಕರವೋ ನಡೆದುಕೊಂಡು ಬರುತ್ತಿದೆ. ಇದು ಅವಶ್ಯಕತೆ ಇದೆಯೋ ಎಂದು ನಾನು ಕೇಳುತ್ತೇನೆ. ಇದರ ಉದ್ದೇಶವಾದರೂ ಏನು ? ಸ್ವಾಮಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ೧೯೫೦ರಲ್ಲಿ ಗಣರಾಜ್ಯವಾಯಿತು. ಬಹುಶಃ ಆಗ ಮೈಸೂರಿನ ರಾಜಮಹಾರಾಜರು ಇದ್ದರು, ಅಗಿಂದ ಇಲ್ಲಿಯವರೆಗೂ ಈ ಒಂದು ಸಂಪ್ರದಾಯ ನಡೆದುಕೊಂಡು ಬಂದಿರುವ ಒಂದು ಸಾಧನವಾಗಿದೆ. ಇದರಿಂದ

೧೧-೩೦ ಎ. ಎಂ.

ಏನಾದರೂ ಸಾಧನೆಯಾಗಿದೆಯೋ ಎಂಬ ಬಗ್ಗೆ ನಾವು ಚಿಂತನೆ ಮಾಡುವ ಅವಶ್ಯಕತೆ ಇದೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ನಿನ್ನೆ ಒಂದು ಮಾತನ್ನು ಹೇಳುತ್ತಿದ್ದರು, ಚರ್ಚೆ ಪರಿಹಾರವನ್ನು ಸೂಚಿಸುವ ಸಾಧನವಾಗಬೇಕು. ಯಾವುದಾದರೂ ಒಂದು ವಿಷಯವನ್ನು ಕುರಿತು ಚರ್ಚೆ ಮಾಡುವುದು, ಅದು ಕೇವಲ ಚರ್ಚೆಗಾಗಿ ಚರ್ಚೆಯಾಗುವುದು ಬೇಡ. ಪರಿಹಾರವನ್ನು ಸೂಚಿಸುವ ಚರ್ಚೆಯಾಗಬೇಕೆಂದು ಹೇಳಿದ್ದಾರೆ. ಚರ್ಚೆ ಕೇವಲ ಪರಿಹಾರ ಸೂಚಿಸುವ ಸಾಧನ ಅಷ್ಟೇ ಅಲ್ಲ ಸಮಸ್ಯೆಗಳನ್ನು ಕಂಡುಹಿಡಿದು ಆ ಸಮಸ್ಯೆಗೆ ಸತ್ಯದ ಶೋಧನೆಯಾಗಬೇಕು. ಸತ್ಯದ ಶೋಧನೆಯ ಮೂಲ ಕಂಡು ಹಿಡಿದ ಮೇಲೆ ಅದಕ್ಕೆ ಪರಿಹಾರವನ್ನು ಸೂಚಿಸುವ ಚರ್ಚೆಯಾಗಬೇಕು. ಈಗ ರಾಜ್ಯಪಾಲರ ಭಾಷಣವನ್ನು ಕುರಿತು ಚರ್ಚೆ ಮಾಡಲಿಕ್ಕೆ ಹೊರಟಿದ್ದೇವೆ. ಇದು ಸಂಪ್ರದಾಯವೋ, ವಾಡಿಕೆಯೋ ನನಗೆ ಗೊತ್ತಿಲ್ಲ. ಇದರ ಅವಶ್ಯಕತೆ ಇರುವಬಗ್ಗೆ ನಿರ್ದಿಷ್ಟವಾದ ನಿಲುವನ್ನು ತಿಳಿಸುವುದಕ್ಕೆ ನಾನು ಸಿದ್ಧನಿಲ್ಲ. ರಾಜ್ಯಪಾಲರ ಹುದ್ದೆ ಅವಶ್ಯಕತೆ ಇದೆಯೋ ಎಂಬ ಬಗ್ಗೆ ಚರ್ಚೆಯೂ ಆಗಿ ಹೋಗಿದೆ. ಮಾನ್ಯ ಬಸವಲಿಂಗಪ್ಪನವರು ಈ ಸದನದಲ್ಲಿ ಒಂದು ವ್ಯಾಖ್ಯಾನ ಮಾಡಿದ್ದರು. ಕಳೆದ ವರ್ಷ ಸರ್ಕಾರ ಹಾಕಿಕೊಂಡಿದ್ದ ಕಾರ್ಯಕ್ರಮ ನಡೆಸಿದಂಥ ನಡವಳಿಕೆ, ನಡೆಸಿದಂಥ ಆಡಳಿತಾತ್ಮಕ ವೈಕರಿ ಬಗ್ಗೆ ವಿಶ್ಲೇಷಣೆ ನಡೆಸಿ, ಎರಡನೆಯದಾಗಿ ಮುಂದಿನ ವರ್ಷ ಈ ರಾಜ್ಯದಲ್ಲಿ ನಡೆಯಬೇಕಾಗಿರತಕ್ಕಂಥ ಕಾರ್ಯಕ್ರಮ, ಈ ರಾಜ್ಯ ಸರ್ಕಾರದ ತತ್ವ ಹಾಗೂ ಸಿದ್ಧಾಂತಗಳ ವಿಚಾರ ನಡೆಸಿದರು. ಈ ಎರಡನ್ನು ಚರ್ಚೆ ಮಾಡುವಂಥ ಅವಕಾಶ ರಾಜ್ಯಪಾಲರ ಭಾಷಣದಿಂದ ಬಂದಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಬಹುಶಃ ರಾಜ, ರಾಣಿಯರ ಕಾಲದಿಂದ ಪಡೆದುಕೊಂಡಿರತಕ್ಕ ಅನೇಕ ಸಂಪ್ರದಾಯಗಳಲ್ಲಿ ರಾಜ್ಯಪಾಲರ ಭಾಷಣವೂ ಒಂದು ನಾನು ಭಾವಿಸಿಕೊಂಡಿದ್ದೇನೆ. ಸನ್ಮಾನ್ಯಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸನ್ಮಾನ್ಯ ಜವಹರಲಾಲ್ ನೆಹರೂರವರಿಂದ ಸನ್ಮಾನ್ಯ ರಾಜೀವ ಗಾಂಧೀಯವರೆಗೂ ೪-೬ (ನಾಲ್ಕಾರು) ಜನ ಪ್ರಧಾನಿಗಳು ಬಂದು ಹೋದರು. ಸನ್ಮಾನ್ಯ ಕೆ. ಸಿ. ರೆಡ್ಡಿಯವರಿಂದ ಹಿಡಿದು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರೆವರೆಗೆ ಹತ್ತಾರು ಜನ ಮುಖ್ಯ ಮಂತ್ರಿಗಳು ಬಂದು ಹೋದರು. ನನ್ನನ್ನೂ ಹಾಗೂ ನನ್ನ ಸ್ನೇಹಿತರನ್ನು ಸೇರಿಸಿಕೊಂಡು ಸಾವಿರಾರು ಜನ ಮಂತ್ರಿಮಹೋದಯರು ಆಡಳಿತ ಮಾಡಿ ಹೋಗಿದ್ದಾರೆ. ಒಂದಲ್ಲ, ಎರಡು, ಏಳು ಪಂಚವಾರ್ಷಿಕ ಯೋಜನೆಗಳನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೂಪಿಸಿ ಕಾರ್ಯಗತ ಮಾಡಿದಂಥ ಹೆಮ್ಮೆ ಈ ರಾಷ್ಟ್ರದ್ದು. ಹತ್ತಾರು ಅಲ್ಲ, ಸಾವಿರಾರು ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಗಳಿಗೆ ತೊಡಗಿಸಿದಂಥ ಪ್ರತಿಷ್ಠೆಯ ಜಂಭ ನಮ್ಮದು. ಹತ್ತಾರು ವಿಶ್ವವಿದ್ಯಾನಿಲಯಗಳನ್ನು ಕಟ್ಟಿದ್ದೇವೆ. ಸಾವಿರಾರು ಉಪಾಧ್ಯಾಯರನ್ನು ಅಪಾಯಿಂಟ್ ಮಾಡಿದ್ದೇವೆ. ಅನೇಕ ಯೋಜನೆಯನ್ನು ರೂಪಿಸಿದ್ದೇವೆ ಹಾಗೂ ಅವುಗಳನ್ನು ಕಾರ್ಯಗತಗೊಳಿಸಿದ್ದೇವೆ. ಇಷ್ಟೆಲ್ಲಾ ಆಗುವುದಕ್ಕೆ ಕಾರಣ ಏನು ? ಇಷ್ಟೆಲ್ಲಾ ಯೋಜನೆಗಳನ್ನು ನಿರೂಪಿಸಿದ ಮೇಲೆ ಇಷ್ಟೊಂದು ಆಡಳಿತವನ್ನು ದೊಡ್ಡದು ಮಾಡಿಕೊಂಡ ಮೇಲೆ ಜನರಿಗೆ ಅನುಕೂಲವಾಗಬೇಕಾಗುತ್ತದೆ. ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಾಗ ಬಡವರು ಎಷ್ಟು ಜನರಿದ್ದರೋ ಅವಕ್ಕಿಂಥ ಹೆಚ್ಚು ಸಂಖ್ಯೆಯ ಬಡವರು ಈಗ ಇದ್ದಾರೆ. ಇಷ್ಟೊಂದು ಹಣವನ್ನು ಖರ್ಚುಮಾಡಿ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಇಷ್ಟೊಂದು ಮಂತ್ರಿ ಮಹೋದಯರು ಬಂದು, ಇನ್ನೂ ಬಡವರ ಸಂಖ್ಯೆ ಕಡಿಮೆಯಾಗಲಿಲ್ಲ. ಜಾಸ್ತಿಯಾಗಿದೆ. ಮೂಲಭೂತವಾಗಿ ಹೇಳುವುದಾದರೆ ಈ ಪ್ರಶ್ನೆಯನ್ನು ಜನಸಾಮಾನ್ಯರು ಕೇಳಿ ಉತ್ತರ ಕೊಡಿ ಎಂದು ನಮ್ಮ ಕೊರಳ ಪಟ್ಟಿಯನ್ನು ಹಿಡಿದು ಕೇಳುತ್ತಾರೆ ಇನ್ನು ಮುಂದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾಗಿದ್ದರೂ ಬಡತನವನ್ನು ಹೋಗಲಾಡಿಸಿಲ್ಲ. ಯಾವುದೇ ಪಕ್ಷ ಇದುವರೆಗೆ ರಾಷ್ಟ್ರವನ್ನು ಆಳಿರಬಹುದು, ಎಲ್ಲರ ಪಕ್ಷದವರನ್ನು ಸೇರಿಸಿ ನಾನು ಹೇಳುತ್ತಿದ್ದೇನೆ. ಕಾಂಗ್ರೆಸ್ (ಐ) ನವರು ಆಳಿದ್ದಾರೆ ಕಮ್ಯೂನಿಸ್ಟ್ ನವರು ಕೆಲವು ರಾಜ್ಯದಲ್ಲಿ ಆಡಳಿತ ಮಾಡುತ್ತಿದ್ದಾರೆ, ಜನತಾ ಪಕ್ಷದವರು ರಾಷ್ಟ್ರವನ್ನು ಆಳಿದ್ದಾರೆ. ನಾನು ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಇಷ್ಟು ವರ್ಷ ಆಡಳಿತ ಮಾಡಿದ ಮೇಲೆ ಇಷ್ಟೊಂದು ಹಣವನ್ನು ವೆಚ್ಚ ಮಾಡಿದ ಮೇಲೆ ಈ ರಾಷ್ಟ್ರದಲ್ಲಿ ಏನು ಆಗಬೇಕಾಗಿತ್ತೋ, ಸಾಮಾಜಿಕ ಪರಿವರ್ತನೆ ಆಗಬೇಕಾಗಿತ್ತೋ ಜನ ಸಾಮಾನ್ಯರ ಬಾಳು ಹಸನಾಗಬೇಕಾಗಿತ್ತೋ ಅದು ಆಗಿಲ್ಲ. ಅದು ಏಕಾಗಲಿಲ್ಲ? ಇವೊತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಂತೆ ಲೋಕಸಭೆಯಲ್ಲೂ ಯಾವುದಾದರೂ ಒಂದು ವಿಷಯದ ಮೇಲೆ ಚರ್ಚೆಯಾಗುತ್ತದೆ. ಈ ಚರ್ಚೆಯು ಬಡವರ ಪರಿವರ್ತನೆಯ ಬಗ್ಗೆ ಮುಂದುವರಿಯಬೇಕು. ಅದಕ್ಕೆ ಒಂದು ಪರಿಹಾರವನ್ನು ಸೂಚಿಸಲಿಕ್ಕೆ ಸೂಚನೆಗಳು ಬರಬೇಕಾಗಿದೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ನಾನು ಎರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಅಧ್ಯಕ್ಷರೆ ಈ ರಾಷ್ಟ್ರದಲ್ಲಿ ಒಂದು ದುರಂತ ನಡೆದಿದೆ ಎಂದು ಬಸವಲಿಂಗಪ್ಪನವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಾವುದೆಂದರೆ ಈ ರಾಷ್ಟ್ರದ ಜನರ ದುಃಖದುಮ್ಮಾನಗಳನ್ನು ಕಷ್ಟಕಾರ್ಪಣ್ಯಗಳನ್ನು ಯಾವರೀತಿಯಲ್ಲೂ ಅರಿಯದವರ ಕೈಗೆ ನಾವು ಅಧಿಕಾರವನ್ನು ಕೊಟ್ಟಿರುವುದು. ಕೂಳಿಗೂಡಿನ ಅರಿವಿಲ್ಲ, ನೇಗಿಲು–ಮೇಣಿ ಎಂದರೆ ಗೊತ್ತಿಲ್ಲ ರಾಗಿ, ಮರವೋ ಗಿಡವೋ ತಿಳಿದಿಲ್ಲ, ದನ ಹೇಗೆ ಕಟ್ಟಬೇಕು ಗೊತ್ತಿಲ್ಲ. ಇಂಥವರ ಕೈಗೆ ೯೯ರಷ್ಟು ಜನ ಅಧಿಕಾರ ಕೊಟ್ಟು ಕೈಚಾಚಿ ಕುಳಿತಿದ್ದಾರೆ. ಇವರಿಗೆ ಸಮಸ್ಯೆಯ ಅರಿವಿಲ್ಲ, ಯೋಜನೆಯ ತಿಳಿವೂ ಇಲ್ಲ. ಇದು ನಾನು ಹೇಳಿದ್ದಲ್ಲ. ಬ್ರಿಟಿಷರಲ್ಲಿ ಕೇಂಬ್ರಿಜ್ ಎಂಬ ವಿಶ್ವವಿದ್ಯಾಲಯದಲ್ಲಿ ಅತಿ ಹೆಚ್ಚಿನ ಪದವಿ ಪಡೆದ ವಾರಿಯರ್ ಅರ್ವಿನ್ ಎಂಬ ವ್ಯಕ್ತಿ ಈ ರಾಷ್ಟ್ರಕ್ಕೆ ಬಂದು ಇಲ್ಲಿನ ಪ್ರಜೆಯಾಗಿ, ಇಲ್ಲಿನ ಗಿರಿಜನರ ಜೊತೆ ಬದುಕಿದ. ಆತ ೧೯೫೨ರಲ್ಲೇಯೋ ಏನೋ ಇರಬಹುದು, ಪಂಡಿತ ನೆಹರೂ ಅವರಿಗೆ ಪತ್ರ ಬರೆಯುತ್ತಾನೆ. ಸರ್ಕಾರ ನಿರೂಪಿಸುವ ಯೋಜನೆಗಳು ಯಾವ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಅವರ ಕುಂದುಕೊರತೆಗಳ ನಿವಾರಣೆ ಮಾಡುವಂತಿರಬೇಕು. ಆದರೆ ಈ ದೇಶದ ಯೋಜನೆಗಳು ಜನಗಳ ಬದುಕಿಗೆ ಕಾಂಟ್ರಿಬ್ಯೂಟ್ ಮಾಡುವ ಬದಲು ಅವರ ಬದುಕಿನಲ್ಲಿರುವುದನ್ನೇ ನಾಶ ಮಾಡುತ್ತಿವೆ. ಅವನು ಮುಂದುವರಿದು ಹೇಳುತ್ತಾನೆ, ಉದಾಹರಣೆಗೆ ಗೊಂಡಾ ಎನ್ನುವ ಜನಗಳು ಬಟ್ಟೆ ಹಾಕುತ್ತಿರಲಿಲ್ಲ, ಹಿಂದಿನಂತೆ ಮರಗಳ ಎಲೆಗಳಿಂದ ಮೈಮುಚ್ಚಿಕೊಂಡಿರುತ್ತಿದ್ದರು. ಆಗ ಸರ್ಕಾರ ಅವರಿಗಾಗಿ ಒಂದು ಯೋಜನೆ ತಂದು ಉಚಿತವಾಗಿ ಬಟ್ಟೆ ಹಂಚಿದರು. ಅವರು ಇವರು ಕೊಟ್ಟ ಬಟ್ಟೆ ಧರಿಸಿ ಎಲೆಗಳನ್ನು ಬಿಟ್ಟರು. ಸ್ವಾಭಾವಿಕವಾಗಿ ನೆಮ್ಮದಿಯಾಗಿದ್ದ ಜನರು ಮತ್ತೆ ಬಟ್ಟೆ ಕೊಡುತ್ತಾರೆಂದು ಕೇಳಿದರು. ಅಷ್ಟರಲ್ಲಿ ಇವರ ಯೋಜನೆ ಹೋಗಿತ್ತು. ಬಟ್ಟೆಗಳನ್ನು ಕೊಡಲಿಲ್ಲ. ಹೀಗಾಗಿ ಆ ಜನ ಮಾನಸಿಕವಾಗಿ ಮತ್ತು ದೈಹಿಕವಾಗಿ ಕೀಳಾಗಿಸಲ್ಪಟ್ಟು ಶೋಷಿತರಾಗಬೇಕಾಯಿತು. ಇದನ್ನು ಉದಾಹರಿಸುತ್ತ ಡಾ: ಅರ್ವಿನ್ ಹೇಳುತ್ತಾನೆ. ನಾವು ರೂಪಿಸುವ ಯೋಜನೆಗಳು ಹಾಲಿ ನಮ್ಮಲ್ಲಿರುವುದನ್ನು ಕಿತ್ತುಕೊಳ್ಳುವಂತಿರಬಾರದು ಎಂದು. ಇದಕ್ಕೆ ಒಟ್ಟಾರೆ ಹೇಳಬೇಕೆಂದರೆ ಈ ರಾಷ್ಟ್ರದ ಬಡವರ ಬಡತನವನ್ನು ಕಡಿಮೆ ಮಾಡಿಸುವಲ್ಲಿ ಆಗಿರುವ ವೈಫಲ್ಯಕ್ಕೆ ಮುಖ್ಯ ಕಾರಣಗಳೆಂದರೆ ಸಮಸ್ಯೆಗಳ ಅರಿವಿಲ್ಲದ ಜನರ ಕೈಗೆ ಅಧಿಕಾರ ಕೊಟ್ಟಿದ್ದು. ಎರಡನೆಯದು ಎಂದರೆ, ಇದರ ಬಗ್ಗೆ ನನ್ನ ಮಿತ್ರ ಪ್ರಕಾಶರು ಅವರದೇ ಆದ ಧಾಟಿಯಲ್ಲಿ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸಿದ್ಧಗಂಗೆ ಸ್ವಾಮಿಗಳಿದ್ದಾರೆ. ಅವರು ಒಂದು ಕಥೆ ಹೇಳಿದರು. ಕೆರೆಯಿಂದ ಹೊರಟ ನೀರು ಗದ್ದೆ ತುಂಬಲು ಕಾಲುವೆ ಮೂಲಕ ಹೋಗಬೇಕು. ನಾವು ಆ ನೀರನ್ನು ತೆಂಗಿನಗಿಡಕ್ಕೋ

ಉದ್ದೇಶಕ್ಕಾಗಿ ಖರ್ಚಾಗುವುದು ಕೇವಲ ೪೦ರಷ್ಟು ಮಾತ್ರ. ಇನ್ನರವತ್ತು ಭಾಗ ಮಧ್ಯದಲ್ಲೆಲ್ಲೋ ಏನೋ ಯಾರೋ ಕೈಸೇರಿರುತ್ತದೆ. ಸ್ವಾಮೀಜಿಯವರಷ್ಟೇ ಅಲ್ಲ, ಕಡಿದಾಳ್ ಮಂಜಪ್ಪನವರೂ ಇದನ್ನೇ ಹೇಳಿದರು. ಅಂದರೆ ಯೋಜನೆಗಳಿಗೆಂದು ಇಟ್ಟ ಸಂಪೂರ್ಣ ಹಣ ಯೋಜನೆಗಳಿಗಾಗಿ ಖರ್ಚಾಗದೇ ಹೋದದ್ದು ಎರಡನೆಯ ದುರಂತ ಈ ದೇಶದಲ್ಲಿ. ಮೂರನೆಯ ಕಾರಣ ಪ್ರಕಾಶರು ಹೇಳಿದಂತೆ ಈ ದೇಶದಲ್ಲಿ ಗುಲಾಮರಾಗಿ ಬದುಕುವುದಕ್ಕೆ ಸಂಬಳ ಪಡೆಯುವ ನಾವು ಪ್ರಭುಗಳಂತೆ ನಡೆದುಕೊಳ್ಳುವುದು. ಸರ್ಕಾರೀ ಹಣ ನನ್ನ ಶರ್ಟಿನ ನೂಲನ್ನು ತಂತು, ನನ್ನ ಹೆಂಡತಿಯ ಮಾನ ಗದ್ದೆಗೋ ಹಾಯಿಸಬೇಕೆಂದಿರುತ್ತೇವೆ. ಆದರೆ ಆ ನೀರಿನ ಪೈಕಿ ಅರ್ಧದಷ್ಟು ಕಾಲುವೆಯಲ್ಲೇ ನೆಲದೊಳಕ್ಕೆ ಹಿಂಗಿರುತ್ತದೆ. ರಾತ್ರಿಯೆಲ್ಲ ಕಂಬ್ಳಿ ಹೊದ್ದುಕೊಂಡು ನೀರು ಯಾವಾಗ ಬರುತ್ತದೆಯೋ ಎಂದು ನಾವು ಕಾದಿದ್ದರೆ ಕಳ್ಳ ಬಂದವನು ಮಧ್ಯದಲ್ಲೇ ಕಾಲುವೆಯನ್ನು ಬೇರೆ ಕಡೆಗೆ ತಿರುಗಿಸಿರುತ್ತಾನೆ. ಹೀಗೆ ನಾವು ಯೋಜನೆಗಳಿಗೆಂದು ಗೊತ್ತುಪಡಿಸಿದ ಹಣದ ಪೈಕಿ ನಿಜಕ್ಕೂ ಉದ್ದೇಶಿತ ಮುಚ್ಚುವ ಸೀರೆಯನ್ನು ಕೊಂಡುಕೊಟ್ಟಿತು. ಆ ಹಣ ಈ ದೇಶದ ಬಡರೈತ ಕೊಟ್ಟ ತೆರಿಗೆಯಿಂದ ಬಂದದ್ದು ಎನ್ನುವುದನ್ನು ತಿಳಿದುಕೊಳ್ಳದೇ ಇರುವುದೇ ಒಂದು ದುರಂತ. ಶ್ರದ್ಧಾಹೀನರಾದ ಸರ್ಕಾರಿ ನೌಕರಿ ಮಾಡುವ ನಮ್ಮ ಪ್ರವೃತ್ತಿ ಯೋಜನೆಗಳ ವೈಫಲ್ಯತೆಗೆ ಮುಖ್ಯ ಕಾರಣ. ೩೦ ದಿವಸಗಳ ಸಂಬಳ ತೆಗೆದುಕೊಂಡು ಒಂದು ದಿವಸವೂ ಕಚೇರಿಗೆ ಹೋಗದ ಅಧಿಕಾರಿಗಳಿದ್ದಾರೆ. ಚುನಾವಣೆ ಮೂಲಕ ಆರಿಸಿಬಂದ ನಂತರ ಮುಂದಿನ ಐದು ವರ್ಷಗಳಲ್ಲಿ ಒಂದು ದಿವಸಕ್ಕೂ ತನ್ನ ಕ್ಷೇತ್ರಕ್ಕೆ ಕಾಲಿಡದ ನಾವು ಇದ್ದೇವೆ. ಯಾವ ಜನರಿಗೆ ಗುಲಾಮರಾಗಿ ಸೇವೆ ಸಲ್ಲಿಸಬೇಕೋ, ಯಾವ ಜನರ ಅನ್ನದ ಋಣದಿಂದ ಬದುಕುತ್ತಿದ್ದೇವೋ ಅವರ ಅರಿವಿಲ್ಲದೆ ಶ್ರದ್ಧಾಹೀನರಾಗಿ ಆ ಜನಗಳ ಬಾಡಕ್ಕೇ ತಂದಿಡುವ ಯೋಜನೆಗಳ ರೂಪಕರಾದದ್ದು ಮೂಲಭೂತ ಕಾರಣ. ಇಷ್ಟೆಲ್ಲಾ ಕಾರಣಗಳೆಂದರೆ ಈಗ ನನ್ನ ಸ್ನೇಹಿತರು ಕೇಳುತ್ತಾರೆ. ಇಷ್ಟೆಲ್ಲಾ ನೀವು ಕಂಡುಹಿಡಿದ ಮೇಲೆ ಹೇಗೂ ನಿಮ್ಮ ಪಕ್ಷವೇ ಅಧಿಕಾರಕ್ಕೆ ಬಂದಿದೆ, ಅದರ ಬಲದಿಂದ ಈ ಸಮಸ್ಯೆಗಳನ್ನೆಲ್ಲ ನಿವಾರಿಸುವುದಕ್ಕೆ ಎಲ್ಲಾ ವಿಫಲತೆಗಳನ್ನೂ ಇಲ್ಲವಾಗಿಸುವುದಕ್ಕೆ ಏನಾದರೂ ಮಾಡಬಹುದಲ್ಲ ಎಂದು. ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ೨೨೪ ಜನ ಶಾಸಕರಿದ್ದಾರೆ. ಹಿಂದೆಯೂ ಅಷ್ಟೇ ಇದ್ದರು. ಈಗ ಮಂತ್ರಿಗಳಿದ್ದಾರೆ, ಆಗಲೂ ಮಂತ್ರಿಗಳಿದ್ದರು. ಅಂದರೆ ಈ ವಿಫಲತೆಗಳನ್ನೆಲ್ಲಾ ಪತ್ತೆಹಚ್ಚುವುದಕ್ಕೆ, ಸಮಸ್ಯೆಗಳ ನಿವಾರಣೋಪಾಯಗಳನ್ನು ಕಂಡುಹಿಡಿಯುವುದಕ್ಕೆ, ರೈತನ ಋಣ ತೀರಿಸುವುದಕ್ಕೆ ಏನು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ ? ಎಂದು ಅವರು ಪ್ರಶ್ನೆ ಕೇಳುತ್ತಾರೆ. ಚಿಂತನೆಯೇನೋ ಸರಿ. ಚಿಂದ ಅವರ ಅವನ್ನು ಕಾರ್ಯಗತಗೊಳಿಸುವುದಕ್ಕೆ ಕಷ್ಟವಾಗುತ್ತದೆ. ಅವರ ಅರಿವು ಆಡಳಿತ ಮಾಡಿದ ಎಲ್ಲ ಸ್ನೇಹಿತರಿಗೆ ಗೊತ್ತಿದೆ. ಒಂದು ಮಾತಿನಲ್ಲಿ ಈ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಮಾಣಿಕವಾಗಿ ಈ ಸರ್ಕಾರ ಜನ ಸಾಮಾನ್ಯರ ಕಷ್ಟಗಳಿಗೆ ಸಮಸ್ಯೆಗಳಿಗೆ ಸ್ಪಂದಿಸುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಎರಡನೆಯದಾಗಿ ಅವರ ದುಃಖದುಮ್ಮಾನಗಳನ್ನು ಸ್ವಲ್ಪವಾದರೂ ಅರಿತುಕೊಂಡು ನಡೆದುಕೊಂಡಿದ್ದೇವೆ, ಎಲ್ಲವನ್ನೂ ಸರಿಯಾಗಿ ಮಾಡಿದ್ದೇವೆಂಬ ಹೆಮ್ಮೆ ನನಗಿಲ್ಲ, ಸರಿಯಾಗಬೇಕೆನ್ನುವ ಪ್ರಾಮಾಣಿಕ ಪ್ರಯತ್ನ ಮಾತ್ರ ನಮ್ಮದು. ನಾಲ್ಕು ವರ್ಷಗಳಿಂದ ನೀವು ಕಡಿದುಹಾಕಿದ್ದೇನು ಎಂಬ ಪ್ರಶ್ನೆಗೆ ನನ್ನ ಉತ್ತರ ಇಷ್ಟೇ. ಎಲ್ಲಾ ನಾವು ಮಾಡಿಬಿಟ್ಟಿದ್ದೇವೆ ಎಂಬ ಹುಂಬತನ ಹುಚ್ಚುತನ ನನಗಿಲ್ಲ. ಇನ್ನೂ ಇಂಥಿಂಥದ್ದನ್ನು ಮಾಡಬೇಕೆಂಬ ಪ್ರಾಮಾಣಿಕ ಪ್ರಯತ್ನ ಇದೆ. ಏನೇನು ಮಾಡಿದ್ದೇವೆಂದರೆ, ಮೊಟ್ಟಮೊದಲಿಗೆ, ಈ ರಾಷ್ಟ್ರದ ರೋಗಗಳಿಗೆ ಪರಿಹಾರವಾಗಿ ಏನು ಮಾಡಬೇಕು ? ನಾನು ಆಗಲೇ ಹೇಳಿದಂತೆ ಕೇವಲ ಕಾರಣಗಳನ್ನು ಕಂಡುಹಿಡಿಯುವುದರಲ್ಲಿ ವಿಫಲತೆಯನ್ನೆಲ್ಲಾ ಹೋಗಲಾಡಿಸಿದಂತಲ್ಲ. ಯಾವುದೇ ವ್ಯಕ್ತಿಯ ಅಥವಾ ಸರ್ಕಾರದ ಕರ್ತವ್ಯ ಅಷ್ಟೇ ಅಲ್ಲ. we have only succeeded in identifying our problems but we have failed to find out remedies. ಅದಕ್ಕಾಗಿ ಈ ಸರ್ಕಾರ ಏನು ಪರಿಹಾರವನ್ನು ನಿರೂಪಿಸಲಿಕ್ಕೆ ಪ್ರಯತ್ನಿಸಿದೆ ಎಂದರೆ ಬಡತನವನ್ನು ಕಡಿಮೆ ಮಾಡುವಂಥ ಕ್ರಮ. ಇದನ್ನು ಎಲ್ಲಾ ಪಕ್ಷಗಳೂ, ಎಲ್ಲಾ ಸರ್ಕಾರಗಳೂ ನಾವೂ ನೀವೂ ಎಲ್ಲರೂ ಹೇಳುತ್ತಲೇ, ಬಂದಿರುವಂಥದದ್ದು. ಈ ರಾಷ್ಟ್ರದ ರಾಷ್ಟ್ರಪತಿಗಳು ಹೇಳಿದ್ದಾರೆ ಇದನ್ನು, ಪ್ರಧಾನಿಗಳು ಹೇಳಿದ್ದಾರೆ, ಮಂತ್ರಿಮಹೋದಯರು ಹೇಳಿದ್ದಾರೆ. ಆದರೆ ಬಡತನವನ್ನು ನಿವಾರಣೆ ಮಾಡುವುದು ಹೇಗೆ ? ನಾವು ಹಸಿರು ಕಾರ್ಡ ಕೊಡುವ ಮುಖಾಂತರ ಆಹಾರಧಾನ್ಯ ಮತ್ತು ಬಟ್ಟೆಗಳನ್ನು ವಿತರಣೆ ಮಾಡುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ರೈತರಿಗೆ ಸಾಲ ಮರುಪಾತಿ ಮಾಡಲು ಅಸಮರ್ಥರಾದವರಿಗೆ ಅದನ್ನು ಮುಫತ್ತು ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ರೈತನ ಹೊಲದಲ್ಲಿ ಬಾವಿ ತೋಡಿದಾಗ ಅಲ್ಲಿ ನೀರು ಬರದಿದ್ದರೆ ಅದನ್ನು ಮುಫತ್ತು ಮಾಡುವ ಕಾರ್ಯಕ್ರಮವಿದೆ ...ರ ಜೊತೆಗೆ ತಾಳೀಭಾಗ್ಯ, ಹಿರಿಯರಿಗೆ ಮಾಶಾಸನ ಗರ್ಭಿಣಿಯರಿಗೆ ಮಾಶಾಸನಗಳನ್ನು ಕೊಡುವ

ಕಾರ್ಯಕ್ರಮಗಳಿವೆ. ಮುದುಕರಿಗೆ ಮತ್ತು ಮಕ್ಕಳಿಗೆ ಪುಕ್ಕಟೆಯಾಗಿ ಮತ್ತು ಅರ್ಧ ದರದಲ್ಲಿ ವಾಹನ ಸೌಲಭ್ಯ ಕೊಟ್ಟಿದ್ದೇವೆ. ಇನ್ನೂ ರಾಷ್ಟ್ರೀಯ ಕಾರ್ಯಕ್ರಮವಾದ ೨೦ ಅಂಶಗಳ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ೫ನೇ ಸ್ಥಾನದಲ್ಲಿದೆ. ಇದು ಸಾಧನೆ ಅಲ್ಲವೇ ? ಇದರ ಜೊತೆಯಲ್ಲಿ ಕನಿಷ್ಟ ಮಜೂರಿ ಬಗ್ಗೆ ಹೇಳಿದರೆ ನನ್ನ ಸ್ನೇಹಿತರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. ಯಾವತ್ತೂ ಇಲ್ಲದೇ ಇರತಕ್ಕಂತಹ ಮಟ್ಟದಲ್ಲಿ ಕನಿಷ್ಟ ಮಜೂರಿಯನ್ನು ಒಂದು ಸಾರಿ ಎರಡು ಸಾರಿ ರಿವೈಸ್ ಮಾಡಿದ್ದೇವೆ ಹೀಗೆ ಬಡತನ ನಿರ್ಮೂಲನ ಮಾಡುತ್ತಿರತಕ್ಕಂತಹ ಕಾರ್ಯಕ್ರಮಗಳ ಬಗ್ಗೆ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ ಅವರು ನಮ್ಮ ಸ್ನೇಹಿತರು. ಅವರ ಬುದ್ಧಿಯನ್ನು ಸ್ವಲ್ಪ ಚುರುಕು ಮಾಡಿದರೆ ಇನ್ನೂ ಚೆನ್ನಾಗಿ ಮಾತನಾಡುತ್ತಾರೆ. ಹಸಿರು ಕಾರ್ಡಿನಿಂದ ಹಿಡಿದು ಎಲ್ಲವನ್ನೂ ಹೇಳಿದ್ದಾರೆ. ಇದರಿಂದ ಬಡತನ ನಿವಾರಣೆಯಾಗಿದೆಯೆ ? ಇದರಿಂದ ಬಡವರು ಉದ್ಧಾರವಾಗುತ್ತಾರೆಯೇ ? ಯಾರು ಬಡವರಿದ್ದಾರೆ ಗ್ರಾಮಗಳಲ್ಲಾಗಲೀ ಇಲ್ಲವೇ ಬೇರೆ ಕಡೆಗಡೆಗಳಲ್ಲಾಗಲೀ ಅವರು ಸ್ವತಃ ಸಂಪಾದನೆ ಮಾಡಲಿಕ್ಕೆ ಯಾವ ವಿಧಾನವನ್ನು ನಿಮ್ಮ ಸರ್ಕಾರ ಕಲ್ಪಿಸಿಕೊಟ್ಟಿದೆ ಎಂಬ ಬಗ್ಗೆ ತಾವು ಹೇಳಬೇಕು.

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ನಾನು ನನ್ನ ಭಾಷಣವನ್ನು ಇಲ್ಲಿಗೇ ಮುಗಿಸುತ್ತಿಲ್ಲ ಅವರು ಏನು ಸಮಸ್ಯೆಯನ್ನು ಹೇಳಿದರು ಅಲ್ಲಿಗೇ ಬರುತ್ತಿದ್ದೇನೆ ದಯವಿಟ್ಟು ಕೇಳಿ. ಪಂಜಾಬಿನಲ್ಲಿ ಗೋಧಿ ಬೆಳೆದು ಗುಪ್ಪೆ ಹಾಕಿದ್ದಾರೆ ಅದು ಕೊಳೆತು ಹೋಗುತ್ತಿದೆ ಬೆಂಗಳೂರಿನಲ್ಲಿ ಅನ್ನವಿಲ್ಲದೆ ಸಾವಿರಾರು ಜನರು ಸಾಯುತ್ತಿದ್ದಾರೆ. ಬಡವನಿಗೆ ಕೊಂಡುಕೊಳ್ಳುವಂತಹ ಶಕ್ತಿ ತುಂಬಲಿಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಪ್ರಶ್ನೆ ಕೇಳುತ್ತಿದ್ದೀರಿ. ಪಂಜಾಬಿನಲ್ಲಿ ಗೋಧಿ ಬೆಳೆದು ಅದನ್ನು ತುಂಬಲು ಗೋಡೌನ್‌ಗಳು ಇಲ್ಲದೇ ಬಿಸಾಕಿದ್ದಾರೆ ಬೆಂಗಳೂರಿನಲ್ಲಿ ಬಡವ ಕುಕ್ಕರುಗಾಲು ಹಾಕಿಕೊಂಡು ಬಿದಿದ್ದಾನೆ ಅವನಿಗೆ ಕೊಳ್ಳುವಂತಹ ಶಕ್ತಿ ಇಲ್ಲ. ಜನತಾ ಪಕ್ಷದ ಸರಕಾರ ಬಡವರಿಗಾಗಿ ಹಾಕಿಕೊಂಡ ಕಾರ್ಯಕ್ರಮದ ಬಗ್ಗೆ ನನ್ನ ಅನೇಕ ಜನ ಮಿತ್ರರು ವ್ಯಂಗ್ಯವಾಗಿ ಮಾತನಾಡಿದ್ದಾರೆ ಒಂದೊಂದು ಸಾರಿ ಬಹಳ ನೋವಾಗುವ ತರಹ ನಡೆದುಕೊಂಡಿದ್ದಾರೆ. ಕಳೆದ ವರ್ಷ ನಾನು ಈ ಸದನದಲ್ಲಿ ಕುಳಿತಿದ್ದಾಗ ಮಾನ್ಯ ಪಾಟೀಲ್‌ರವರು ಒಂದು ಮಾತನ್ನು ಹೇಳಿದರು ಮದುವೆಗೆ ಸಾಮಾನು ಕೊಡುವುದನ್ನು ಬಿಟ್ಟು ಎಲ್ಲಾ ಕೊಟ್ಟಿದ್ದೀರಿ, ಈ ದೇಶದ ಜನತೆಗೆ ಮಾಡಿದ್ದೀರಿ ಎಂದು ವ್ಯಂಗ್ಯವಾಗಿ ತಮಾಷೆಯಾಗಿ ಹೇಳಿದರು ಅದು ತರವಲ್ಲ. ಬಡವನ ಬಗ್ಗೆ ವ್ಯಂಗ್ಯ ಮಾಡುವುದಾಗಲೀ ಬಡವರ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಉಡಾಫೆ ಮಾಡುವುದಾಗಲೀ ತರವಲ್ಲ. ತಮ್ಮಲ್ಲಿ ಕೈಮುಗಿದು, ಕೈ ಜೋಡಿಸಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಬಡತನದ ಬಗ್ಗೆ ಡೆಫಿನೇಷನ್ ಕೇಳಿದರೆ ಹಸಿದು ಮಲಗಿದವ ಮಾತ್ರ ಬಡತನದ ಬಗ್ಗೆ ಬರೆಯಬಲ್ಲವನೇ, ಇಲ್ಲವೇ ಒಂದೇ ಒಂದು ಪ್ಯಾಂಟ್ ಇಟ್ಟುಕೊಂಡು ಪರೀಕ್ಷೆಗೆ ಹೋದಾಗ ಅದು ಹರಿದು ಹೋಗಿ ಮುಂದಿನ ದಿವಸ ಪರೀಕ್ಷೆಗೆ ಹೋಗಲು ಏನು ಪರಿಸ್ಥಿತಿ ಉದ್ಭವಿಸುತ್ತದೆ. ಆ ಪರಿಸ್ಥಿತಿ ಅರ್ಥವಾಗಿದ್ದರೆ ಆಗ ಆ ವ್ಯಂಗ್ಯದ ಮಾತು ಬರುತ್ತಿರಲಿಲ್ಲ. ಎದೆ ಕಾಣುವ ಹಾಗೆ ಬಟ್ಟೆ ತೊಟ್ಟ ಹೆಣ್ಣು ಮಕ್ಕಳನ್ನು ನೋಡಿದರೆ ಆ ಮಾತನ್ನು ಆಡುತ್ತಿರಲಿಲ್ಲ, ಹೊಟ್ಟೆ ಹಸಿದು ಬೆನ್ನಿಗೆ ಹೊಟ್ಟೆ ಕಚ್ಚಿಕೊಂಡಿರುವ ಬಡವನನ್ನು ನೋಡಿದ್ದರೆ ಆ ಮಾತನ್ನು ಅವರು ಆಡುತ್ತಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಸಮರ್ಥಿಸಿಕೊಳ್ಳಲು ಮಾನ್ಯ ಸದಸ್ಯರು ಇಲ್ಲಿ ಇಲ್ಲ ಅವರು ಬಂದ ಮೇಲೆ ತಾವು ಹೇಳಬಹುದು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ವೈ. ಕೆ. ರಾಮಯ್ಯ.—ನಾನು ಅಪವಾದ ಮಾಡುತ್ತಿಲ್ಲ. ನಮ್ಮ ಊರ ಶೆಟ್ಟರ ಅಂಗಡಿಯಲ್ಲಿ ೪ ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಕೊಡುತ್ತಾರೆ, ರಾಮಕೃಷ್ಣ ಹೆಗಡೆಯವರು ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತಾರೆ, ಇದು ದೇಶದ ಜನತೆಗೆ ಮಾಡಿದ ದ್ರೋಹ ಏನು ? ಮೈ ತೋರುವಂತಹ ಬಟ್ಟೆ ಹಾಕಿಕೊಳ್ಳುವಂತಹ ಒಂದು ಸಂಸ್ಕೃತಿ ಇವತ್ತು ನಮ್ಮಲ್ಲಿ ಬಂದಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯಾಲೋಪ.

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ನೀವು ಏನು ಹೇಳುತ್ತೀರಿ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಹೇಳಿರತಕ್ಕಂಥ ಮಾತಿಗೆ ನಾನು ಹೇಳುವುದು ಇಷ್ಟೆ. ಈ ರಾಷ್ಟ್ರದ ಸಂಪತ್ತು ಯಾರದೂ ಅಲ್ಲ. ಖಜಾನೆಯಿಂದ ಬರುವಂಥ ಯಾವ ನೋಟಿಗೂ ರಾಮಕೃಷ್ಣ ಹೆಗಡೆಯವರ ನೋಟು, ವೈ.ಕೆ. ರಾಮಯ್ಯನ ನೋಟು, ರಾಜೀವ್ ಗಾಂಧಿಯವರ ನೋಟು ಎಂದು ಒತ್ತಿಲ್ಲ. ಪ್ರತಿಯೊಂದು ಪೈಸೆಯೂ ಕೂಡಾ ರಾಷ್ಟ್ರದ ಸಾಮಾನ್ಯ ಜನರ ಪಾಲಿನದು. ಅದರ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳಲಿಕ್ಕೆ ಹೋಗುವುದಿಲ್ಲ. ಸರ್ಕಾರ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ, ಶೆಟ್ಟರ ಅಂಗಡಿಯಲ್ಲಿ ನಾಲ್ಕು ರೂಪಾಯಿಗೆ ಕೊಡುತ್ತಾರೆ. ಇದನ್ನು ಜನಕ್ಕೆ ಮಾಡತಕ್ಕಂಥದ್ದು ಅನ್ಯಾಯವೇ ? ಎರಡನೆಯದಾಗಿ ಹೆಣ್ಣು ಮಕ್ಕಳು ಉಡತಕ್ಕಂಥ ಸೀರೆ ಮತ್ತು ಹೆಣ್ಣು ಮಕ್ಕಳು ಮಾನವನ್ನು ಮುಚ್ಚಬೇಕಾದರೆ ಪಡತಕ್ಕಂಥ ಕಷ್ಟ ಏನು ಇದೆ, ೪೦ ರೂಪಾಯಿಗಳ ಸೀರೆಯನ್ನು ೧೫ ರೂಪಾಯಿಗೆ ಕೊಟ್ಟರೆ ಅದರ ಬಗ್ಗೆ ಗೇಲಿ ಮಾಡಿದ್ದಾರೆ. ಈ ದೇಶದ ಜನರು ಬಡವರು. ಬಡವರ ಬಗ್ಗೆ ಗೇಲಿ ಮಾಡಿದರೆ, ವ್ಯಂಗ್ಯವಾಗಿ ಮಾತನಾಡಿದರೆ, ಏನಾದರೂ ಅದರ ಬಗ್ಗೆ ನಾವು ಲಘುವಾಗಿ ಕಂಡರೂ ಅವರು ಯಾವುದೇ ಪಕ್ಷವಾಗಿರಲಿಯಾವುದೇ ಶಾಸಕರಾಗಿರಲಿ, ಬಡತನದ ಬೇಗೆಯಲ್ಲಿ ಬೇಯತಕ್ಕಂಥ ಜನ ದಂಗೆ ಏಳ್ದಾರು. ಮಾಡಿ ಆ ವಿಷಯದಲ್ಲಿ ಗೇಲಿ ಮಾಡುವುದನ್ನು ಬಿಟ್ಟು ಬಿಡಿ. ಇನ್ನು ಗರ್ಭಿಣಿ ಸ್ತ್ರೀಯರಿಗೆ ಮಾಶಾಸನ ಕೊಡುವ ಬಗ್ಗೆ ಗೇಲಿ ಮಾಡಿದ್ದಾರೆ. ನಾನು ಕಣ್ಣಾರೆ ನೋಡಿದ್ದೇನೆ. ಬೆಳ್ಳಿಗ್ಗೆಯಿಂದ ಸಂಜೆಯವರೆಗೂ ಹೊಲದಲ್ಲಿ ದುಡಿದು ಜೋಳದ ಹೊರೆಯನ್ನು ಹೊತ್ತುಕೊಂಡು ಬಂದು ಮನೆಯಲ್ಲಿ ಹೋಗಿ ರಾತ್ರಿಯಲ್ಲಿ ಹೆರಿಗೆ ಆಗಿರುವಂಥ ಹೆಣ್ಣು ಮಕ್ಕಳನ್ನು ನಾವೂ ನೋಡಿದ್ದೇವೆ, ನೀವು ನೋಡಿದ್ದೀರಿ. ಹೆರಿಗೆ ಇನ್ನು ಒಂದು ತಿಂಗಳು ಇದೆ ಎನ್ನುವಾಗಲೇ ಆಸ್ಪತ್ರೆಗೆ ಸೇರಿಸತಕ್ಕಂಥ ನಮ್ಮಂಥವರಿಗೆ ಅದರ ಕಷ್ಟ ಗೊತ್ತಿಲ್ಲ. ಆ ಕಷ್ಟ ಅವರಿಗೇ ಗೊತ್ತು ೧೫ ದಿವಸ, ಇನ್ನು ಒಂದು ತಿಂಗಳು ಇದೆ ಎನ್ನುವಾಗಲೇ ನಾಲ್ಕು ಜನರ ವೈದ್ಯರ ಕೈಯಲ್ಲಿ ಪರೀಕ್ಷೆ ಮಾಡಿಸತಕ್ಕಂಥ ಸಂಸ್ಕೃತಿಯೇ ಮಟ್ಟಕ್ಕೆ ಬೆಳೆದುಕೊಂಡು ಬಂದಿರತಕ್ಕಂಥ ನಮಗೇನು ಗೊತ್ತು ಅವರ ಕಷ್ಟ. ಇವತ್ತು ಆ ಹೆಣ್ಣುಮಕ್ಕಳಿಗೆ ೫೦ ರೂಪಾಯಿಗಳನ್ನು ಕೊಟ್ಟರೆ ಇದು ಅನ್ಯಾಯವೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಹೆಣ್ಣು ಮಕ್ಕಳ ಕಳಕಳಿಯ ವಿಚಾರವನ್ನು ಹೇಳುತ್ತಿದ್ದಾರೆ. ಅವರು ಬಹಳ ಎಮೋಷನ್‌ನಿಂದ ಹೇಳುತ್ತಿದ್ದಾರೆ. ಆದರೆ ಅದು ಯಾರಿಗೆ ತಲುಪುತ್ತದೆ ? ಅವಳ ಗಂಡ ಕುಡಿದು ಬಂದು ಮತ್ತೆ ಅದೇ ಹೊರೆಯನ್ನು ಹೊರಿಸುತ್ತಾನೆ. ನಿಮಗೆ ಇದು ಅರ್ಥ ಆಗುತ್ತಿಲ್ಲ. ನನಗೂ ದುಃಖವಾಗುತ್ತದೆ. ಆದರೆ ಅದು ತಲುಪುವುದು ಅವಳ ಗಂಡನಿಗೆ. Every vice has got something.

ಅಧ್ಯಕ್ಷರು.—ಮೊದಲು ಅವರು ಹೇಳುತ್ತಿದ್ದರು, ನೀರು ಗದ್ದೆಗೆ ಹೋಗಬೇಕಾದರೆ ೬೦ ಪರ್‌ಸೆಂಟ್ ನೀರನ್ನು ಕಾಲುವೆಯೇ ತೆಗೆದುಕೊಳ್ಳುತ್ತದೆ ಎಂದು.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳಿದಂಥ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಂಡು ಈ ಸರ್ವ ಕಾರ್ಯಕ್ರಮಗಳ ವಿಫಲತೆಗೆ ಪ್ರಮುಖ ಕಾರಣದಲ್ಲಿ ಅದೂ ಒಂದು ಎನ್ನುವ ವಿಷಯವನ್ನು ಆಗಲೀ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಯೋಜನೆಯಲ್ಲಿ ಲಭಿಸುವ ಕಾರ್ಯಕ್ರಮಗಳು ತಲುಪುವವರಿಗೆ ತಲುಪುತ್ತಿಲ್ಲ ಎನ್ನುವ ಮಾತನ್ನು ನಾವು ಒಪ್ಪಿಕೊಂಡಿದ್ದೇವೆ. ಇದಕ್ಕೆ ಕಾರಣಕರ್ತರು ಯಾರು ಎಂದು ಹೇಳುವಾಗ ನನಗೆ ಸ್ವಲ್ಪ ಕಷ್ಟವಾಗುತ್ತದೆ. Who are all contributing for all these systems ? ನನ್ನ ಕ್ಷೇತ್ರದಲ್ಲಿ ಕೂಡ ಇದರ ಬಗ್ಗೆ ದೂರು ಬಂದಿದೆ. ಪೋಸ್ಟ್ ಮ್ಯಾನ್ ಎಂ. ಓ. ತೆಗೆದುಕೊಂಡು ಹೋದಾಗ ಐದು ರೂಪಾಯಿ ಕೇಳುತ್ತಾನೆಂದು ದೂರು ಇದೆ. ಈ ವ್ಯವಸ್ಥೆ ಏನು ಇದೆ, ಇದು ದರಿದ್ರದ ವ್ಯವಸ್ಥೆ ಎಂದು ನಾವು ಕರೆಯಬೇಕಾಗುತ್ತದೆ. ೧೦೬ ವರ್ಷಗಳಿಂದಲೂ ನಾವು ಶೋಷಣೆಗೆ ಒಳಗಾಗಿ ಬಂದಿದ್ದೇವೆ, ಶೋಷಿತರಾಗಿದ್ದೇವೆ. ಇದನ್ನು ನಿರ್ಮೂಲನ ಮಾಡಲಿಕ್ಕೆ ಸಂಪೂರ್ಣವಾಗಿ ಸಫಲರಾಗಿದ್ದೇವೆ ಎಂದು ಹೇಳಿ ನಾನು ಧರ್ಮದಲ್ಲಿ ಬೀಳಲಿಕ್ಕೆ ಸಿದ್ಧನಾಗಿಲ್ಲ. ಈಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ, ನಮ್ಮ ಹಳ್ಳಿಯಲ್ಲಿ ಒಬ್ಬ ಗೃಹಿಣಿ ಅಡಿಗೆ ತಯಾರು ಮಾಡಿ ಇಟ್ಟಿದ್ದಳು, ಭೋಜನಕ್ಕೆ ಆಕೆ ಪತಿ ಬರುವ ಮೊದಲೇ ಇವಳೇ ಆ ಭೋಜನವನ್ನು ತಿಂದು ಬಿಟ್ಟಿದ್ದಳು, ಆಮೇಲೆ ಇದನ್ನು ನೋಡಿ ಅವನು ಇನ್ನೊಬ್ಬಳನ್ನು ಮದುವೆ ಮಾಡಿಕೊಂಡು ಅವಳು ಮಡಕೆಯನ್ನೇ ತಿಂದುಬಿಟ್ಟಳು ಇದು ಒಂದು ತಾತ್ವಿಕವಾದ ಪ್ರಶ್ನೆಯಾದ್ದರಿಂದ ನಾನು ಈ ಮಾತನ್ನು ಪ್ರಸ್ತಾಪ ಮಾಡಿದೆ ಅಷ್ಟೆ. ಕೆಲವರ ಮಾತನಾಡುವಾಗ ಬಡತನ ನಿವಾರಣೆಯ ಕಾರ್ಯಕ್ರಮದ ಬಗ್ಗೆ ಏನು ಹೇಳಿದ್ದಾರೆ ಎಂದರೆ. ಓಟಿನ ಬೇಟೆಗಾಗಿ ಇದನ್ನು ಸೃಷ್ಟಿಸಿದ್ದಾರೆ ಎಂದು ಆದರೆ ಇದರ ಬಗ್ಗೆ ನಾನು ಹೇಳುವುದು ಏನೆಂದರೆ ಈ ಶಾಶ್ವತವಾದ ಉತ್ಪಾದನಾ ಯೋಜನ ಕಾರ್ಯಕ್ರಮ

ಗಳು ಏನು ಇವೆ ಇವು ಹಣದ ಕೊರತೆಯಿಂದ ಕುಂಠಿತವಾಗಿವೆ ಎಂದು ನಾನು ಅನೇಕ ಕಡೆಗಳಲ್ಲಿ ಕೇಳಿದ್ದೇನೆ. ಆದುದರಿಂದ ನಾವು ಇವೊತ್ತಿನ ದಿವಸ ಈ ಹೇಮಾವತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಕೇಳಿದ್ದೇವೆ. ಅದು ಕಾರ್ಯರೂಪಕ್ಕೆ ಬಂದರೆ ಯಾರಿಗೆ ಬರುತ್ತದೆ ಸ್ವಾಮಿ ? ಆ ನೀರು ನನಗೆ ಬರುತ್ತದೆಯೇ ಕೃಷ್ಣಾರೆಡ್ಡಿಯವರಿಗೆ ಬರುತ್ತದೆ, ಶಿವನಂಜಪ್ಪನವರಿಗೆ ಬರುತ್ತದೆ, ೧೦೦ಕ್ಕೆ ೩೦ರಷ್ಟು ಜನಕ್ಕೆ ಅವರು ಸತ್ತರೆ ಹೂಳುವುದಕ್ಕೆ ಜಾಗ ಇಲ್ಲದಂತಾಗುತ್ತದೆ, ಇಂಥಾ ಯೋಜನೆಗಳನ್ನು ನಾವು ಸೃಷ್ಟಿ ಮಾಡಿದ್ದೇವೆ. ನಮಗೆ ರಸ್ತೆಗಳಾಗಬೇಕು ಸೇತುವೆಗಳಾಗಬೇಕು, ನೀರಾವರಿ ಕಾಮಗಾರಿಗಳಾಗಬೇಕು ಎಂದು ಈ ೨೦ ಜನರ ಕ್ಷೇಮವನ್ನು ನಾವು ನೋಡಿಕೊಳ್ಳುವುದಾದರೆ ಅದರಲ್ಲೂ ನಿಮ್ಮ ವರ್ಗದ ಜನರಿಗೆ ಜಮೀನು ಇಲ್ಲದೇ ಇದ್ದವರು ಏನು ಇದ್ದಾರೆ ಅವರು ಏನು ಮಾಡಬೇಕು ಹೇಳಿ. ಅವರಿಗೂ ಸಹ ನಾವು ಅವಕಾಶವನ್ನು ಕಲ್ಪಿಸಿಕೊಡಬೇಕು. ರಸ್ತೆ ಮಾಡಿದರೆ, ಅದಕ್ಕೆ ಟಾರ್ ಕೆಲಸ ಮಾಡಿಸಿ ಕೊಟ್ಟರೆ ಯಾರಿಗೆ ಅದು ಅನುಕೂಲ ನನಗೆ ಅನುಕೂಲ ಆದರೆ ನೇಗಿಲು ಹಿಡಿದಿರುವ ರೈತನಿಗೆ ಮಣ್ಣಿನ ರಸ್ತೆಯಾದರೇನು ಜಲ್ಲಿ ರಸ್ತೆಯಾದರೇನು. ಟಾರ್ ರಸ್ತೆಯಾದರೇನು ಅವನಿಗೂ ಅವೆಲ್ಲವೂ ಒಂದೇ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ದೇಶದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೆಗೆದುಕೊಂಡದನ್ನು ಬಡತನ ನಿವಾರಣೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕಂತ ಸರ್ಕಾರದ ಧೋರಣೆ ಏನು ಇದೆ ಅದು ಸಾಧ್ಯಇದೆ ಎನ್ನುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ಇದರಲ್ಲಿ ಈಗ ಬಂದಿರುವುದು ಈ ತಾತ್ವಿಕವಾದ ಪ್ರಶ್ನೆ ಏನು ಇದೆ ಎಂದರೆ ರಾಜ್ಯದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ತೊಡಗಿಸುವಂಥಾ ಹಣದ ಬಗ್ಗೆ ಮತ್ತು ಬಡತನ ನಿರ್ಮೂಲನ ಮಾಡುವುದಕ್ಕೆ ಹೊರಟಾಗ ಇವರುಗಳು ಓಟಿನ ಬೇಟೆಗಾಗಿ ಇಂತಹ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇವನ್ನು ನಾನು ಮಾಡುವುದಿಲ್ಲ ಎಂದು ಇಟ್ಟುಕೊಳ್ಳಿ. ಈ ರೀತಿಜನ ಹೇಳುವುದು ನಾನು ಕೇಳಿದ್ದೇನೆ. ಇನ್ನು ಕೆಲವರು ಅದು ಇಲ್ಲ ಎಂದು ಹೇಳುತ್ತಾರೆ. ಅದಕ್ಕೆ ನಾನೇನೂ ಮಾಡಾವುದ ಕ್ಕಾಗುವುದಿಲ್ಲ. ಈ ಬಗ್ಗೆ ನನ್ನ ಒಂದು ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ನೀವು ರಸ್ತೆಯನ್ನಾದರೂ ಮಾಡಿಸಿರಿ, ಸೇತುವೆಗಳನ್ನಾದರೂ ನಿರ್ಮಾಣ ಮಾಡಿರಿ, ರಸ್ತೆಯನ್ನಾದರೂ ಮಾಡಿರಿ, ಟಾರ್‌ನ್ನಾದರೂ ಹಾಕಿಸಿರಿ, ಇದರಿಂದ ಯಾರಿಗೆ ಪ್ರಯೋಜನ ಕಾರ್‌ನಲ್ಲಿ ಹೋಗುವವರಿಗೆ, ಮೋಟಾರ್ ಸೈಕಲ್‌ನಲ್ಲಿ ಹೋಗುವವರಿಗೆ ಅನುಕೂಲ ಇನ್ನಾರಿಗೂ ಅಲ್ಲ. ನನಗೆ ಏನು ಅನ್ನಿಸುತ್ತದೆ ಎಂದರೆ ನಾನು ಮೊದಲೇ ಹೇಳಿದ ಹಾಗೆ ಯಾರಾದರೂ ಸತ್ತರೆ ೧೦೦ಕ್ಕೆ ೩೦ ಪರ್ಸೆಂಟ್ ಜನಕ್ಕೆ ಅವರನ್ನು ಹೂಳುವುದಕ್ಕೆ ಜಾಗ ಇಲ್ಲ ಎಂದು ಅವರ ಹಿತರಕ್ಷಣೆ ಮಾಡುವುದಕ್ಕೆ ಸ್ವಲ್ಪ ಕುಂಠಿತವಾದರೂ ಸಹ ೧೦೦ಕ್ಕೆ ೨೦ ರಷ್ಟು ಬಡವರು ಏನು ಇದ್ದಾರೆ ಅವರ ಹಿತರಕ್ಷಣೆ ಮಾಡು ವುದಕ್ಕೋಸ್ಕರ ನಾವು ಸ್ವಲ್ಪವಾದರೂ ಕೆಲಸ ಮೊದಲೇ ಬೇಕಾಗುತ್ತದೆ.

೧೨-೦೦ ಅಪರಾಹ್ನ

ನಾನು ಈಗಾಗಲೇ ಹೇಳಿದಂತೆ ಹೊಲಗಳಿಗೆ ಹೋಗಿ ಕೂಲಿ ಕೆಲಸ ಮಾಡುವವರಿಗೆ ೮-೧೦ ರೂಪಾಯಿಗಳ ಕೂಲಿ ಸಿಗುತ್ತದೆ. ಆಗ ಅಕ್ಕಿಯ ಬೆಲೆ ಕೆ. ಜಿ.ಗೆ ೪ ರೂಪಾಯಿಗಳಿಗಿಂತ ಜಾಸ್ತಿ ಇದೆ. ಇವರು ಬಂದ ಕೂಲಿಯಲ್ಲಿ ಎರಡು ಕೆ.ಜಿ. ಅಕ್ಕಿ ಕೊಂಡರೆ, ಉಪ್ಪು. ಬೇಳೆ ಮುಂತಾದ ಇತರೇ ಅಡಿಗೆ ಸಾಮಾನುಗಳನ್ನು ಯಾವ ರೀತಿ ಕೊಳ್ಳಬೇಕು ? ಬಟ್ಟೆಯನ್ನು ಯಾವ ರೀತಿ ಕೊಳ್ಳಬೇಕು ? ತನ್ನ ಮಕ್ಕಳಿಗೆ ಬೇಕಾದ ಪುಸ್ತಕ. ಪೆನ್ಸಿಲ್‌ನ್ನು ಯಾವ ರೀತಿ ಕೊಳ್ಳಬೇಕು ? ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರ ಇಂತಹ ಬಡವರಿಗೆ ಕಡಿಮೆ ದರದಲ್ಲಿ ಬಟ್ಟೆ ಮತ್ತು ಅಕ್ಕಿಯನ್ನು ಸರಬರಾಜು ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇಂತಹ ಬಡತನ ನಿರ್ಮೂಲನ ಕಾರ್ಯಕ್ರಮಗಳು ನಮ್ಮ ಅಭಿವೃದ್ಧಿ ಯೋಜನೆಗಳನ್ನು ಕುಂಠಿತಗೊಳಿಸುತ್ತವೆ ಎಂದು ಯಾರಾದರೂ ಘೋಷಣೆ ಮಾಡಿದರೆ ಅಂತಹವರು ಈ ದೇಶದ ಬಡಜನರ ಆಕ್ರೋಶಕ್ಕೆ ಕಾರಣರಾಗಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಬಡತನ ನಿವಾರಣಾ ಕಾರ್ಯಕ್ರಮಗಳು ಏನಿವೆ. ಈ ಕಾರ್ಯ ಈ ಕಾರ್ಯಕ್ರಮಗಳನ್ನು ಮಾನ್ಯ ಜೆ.ಹೆಚ್. ಪಟೇಲರ ಭಾಷೆಯಲ್ಲಿಯೇ ಹೇಳುವುದಾದರೆ ಇವು ಬಡತನದ ಕಾವನ್ನು ಕಡಿಮೆ ಮಾಡುವಂತಹ ಕಾರ್ಯಕ್ರಮಗಳಾಗಿವೆ, ಆದ್ದರಿಂದ ಈ ಕಾರ್ಯಕ್ರಮಗಳು ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಯಲ್ಲಿಯೇ ಇರಬೇಕು ಎಂಬ ಮಾತನ್ನು ನೀವು ಮೊದಲು ಸೃಷ್ಟಿ ಮಾಡಿದ್ದಲ್ಲ. ಈ ರೀತಿಯ ಯೋಜನೆಗಳನ್ನು ಈ ದೇಶದಲ್ಲಿ ಪ್ರಪ್ರಥಮವಾಗಿ ಜಾರಿಗೆ ತಂದವರು ಎಂದರೆ, ದಿವಂಗತ ಶ್ರೀಮತಿ ಇಂಧಿರಾಗಾಂಧಿ ಅವರು. ಅವರು ಗರೀಭೀಹಠಾವೋ ಕಾರ್ಯಕ್ರಮವನ್ನು ಈ ದೇಶದ ಮುಂದೆ ತಂದಾಗ ಅದನ್ನು ಗೇಲಿಮಾಡಿದುದು ನೀವು. ಈ ದೇಶದ ಬಡತನವನ್ನು ಒಂದೇ ದಿವಸದಲ್ಲಿ ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿದುಕೊಂಡು

ಇಲ್ಲವೇ ಭ್ರಮಿಸಿಕೊಂಡು ಅವರು ಇದನ್ನು ಜಾರಿಗೆ ತರಲಿಲ್ಲ. ಆದರೆ ಬಡತನವನ್ನು ಕಡಿಮೆ ಮಾಡಬಹುದೆಂದುಕೊಂಡು ಅವರು ಇದನ್ನು ಜಾರಿಗೆ ತಂದರು. ಅದೇ ರೀತಿ ಈ ಸರ್ಕಾರದವರು ಜಾರಿಗೆ ತಂದಿರುವ ಈ ಕಾರ್ಯಕ್ರಮಗಳನ್ನು ನಾವು ಯಾರು ಗೇಲಿ ಮಾಡಿಲ್ಲ. ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವುದು ಅಪರಾಧ ಎಂದು ನಾನು ಯಾವ ಸಾರ್ವಜನಿಕ ಸಭೆಯಲ್ಲಿಯೂ ಹೇಳಿಲ್ಲ. ಇದು ಮಾನ್ಯ ಜೆ.ಹೆಚ್. ಪಟೇಲ್ ಅವರಿಗೂ ಗೊತ್ತು, ಆದರೆ ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಮೊದಲು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇಂತಹ ಕಾರ್ಯಕ್ರಮಗಳನ್ನು ಅಲ್ಲೊಂದು ಇಲ್ಲೊಂದು ಸಮಾರಂಭಗಳನ್ನು ನಡೆಸುದರ ಮೂಲಕ ಜಾರಿಗೆ ಕೊಡುವುದಕ್ಕೆ ಬದಲು ಎಲ್ಲಾ ಕಡೆಯೂ ಸಮರ್ಪಕವಾಗಿ ಜಾರಿಗೆ ತರುವುದು ಒಳ್ಳೆಯದು. ಈ ಬಡತನವನ್ನು ಹೋಗಲಾಡಿಸುವ ಕಾರ್ಯಕ್ರಮಗಳ ಪೈಕಿ ಶ್ರೀ ಜನಾರ್ದನಪೂಜಾರಿ ಅವರ ಸಾಲ ಮೇಳವೂ ಒಂದು ಭಾಗವಾಗಿದೆ, ಆದರೆ ಈ ಸಾಲಮೇಳದನ್ನು ನೀವು ಗೇಲಿ ಮಾಡುತ್ತಿದ್ದೀರಿ. ನಿಮ್ಮ ಸರ್ಕಾರದವರು ಈ ಸಾಲ ಮೇಳ ಕಾರ್ಯಕ್ರಮಕ್ಕೆ ಬಹಿಷ್ಕಾರ ಹಾಕಿರುವುದು ಏತಕ್ಕೆ ?

ಶ್ರೀ ಬಿ. ಎ. ಜೀವಿಜಯ.—ಆ ಸಾಲಮೇಳ ಕಾರ್ಯಕ್ರಮಕ್ಕೆ ಶಾಸಕರನ್ನು ಕರೆಯುವಂತಹ ಸೌಜನ್ಯವೂ ಸಹ ಅವರಿಗೆ ಇಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ನೀವು ಸೀರೆ ಮತ್ತು ಪಂಚೆ ಹಂಚುವ ಕಾರ್ಯಕ್ರಮಕ್ಕೆ ನಮ್ಮನ್ನು ಕರೆಯಬೇಕೆಂದು ನಾವು ನಿಮ್ಮನ್ನು ಕೇಳುವುದಿಲ್ಲ. ನಾವೇ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಾಲಮೇಳ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಭಾಗವಹಿಸಬಾರದೆಂದು ಎಲ್ಲಾ ಅಧಿಕಾರಿಗಳಿಗೂ ಸರ್ಕಾರದಿಂದ ಆದೇಶ ಹೋಗಿದೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀನಿವಾಸ್ ಅವರು ಯಾವ ದೃಷ್ಟಿಯಿಂದ ನಮ್ಮ ಈ ಕಾರ್ಯಕ್ರಮಗಳನ್ನು ಒಪ್ಪುತ್ತಾರೋ ಅದೇ ದೃಷ್ಟಿಯಿಂದ ಶ್ರೀ ಜನಾರ್ಧನ ಪೂಜಾರಿ ಅವರ ಸಾಲಮೇಳವನ್ನು ನಾವು ಒಪ್ಪಿದ್ದೇವೆ. ನಾವು ಅದನ್ನು ಗೇಲಿ ಮಾಡಿಲ್ಲ. ಅವರು ಬಡವರಿಗೆ ಸಹಾಯ ಮಾಡಬೇಕೆಂದು ಏನು ಸಾಲ ಕೊಡುತ್ತಿದ್ದಾರೋ, ಅದರಲ್ಲಿ ಒಂದು ಭಾಗ ಸಬ್ಸಿಡಿ ಎಂದು ಮತ್ತೊಂದು ಭಾಗವನ್ನು ಸಾಲ ಎಂದು ಮಾಡಿದರೆ ಇನ್ನೂ ಒಳ್ಳೆಯದು. ಈ ಸಾಲ ಕೊಡುವುದರಲ್ಲಿ ಒಂದು ಒಳ್ಳೆಯ ಉದ್ದೇಶ ಇರಬೇಕು. ಈಗ ಕೊಡುತ್ತಿರುವ ಸಾಲದಿಂದ ಬಡತನ ತಕ್ಷಣ ನಿವಾರಣೆಯಾಗುವುದಿಲ್ಲ. ಈಗ ಕೊಡುತ್ತಿರುವ ಸಾಲವನ್ನು ದುಡಿಮೆಗೆ ಉಪಯೋಗಿಸಿಕೊಂಡು ಆ ಮೂಲಕ ಹಣ ಸಂಪಾದನೆ ಮಾಡಲು ಸಹಾಯಕವಾದರೆ ಈ ಜನರು ತಮ್ಮ ಬಡತನವನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಈಗ ಕೊಡುತ್ತಿರುವ ಸಾಲ ಈ ಜನರು ದುಡಿಮೆ ಮಾಡಲು ಸಹಾಯಕವಾಗದಿದ್ದರೆ, ಈ ಹಣವನ್ನು ದಾನ ಕೊಟ್ಟಂತೆ ಆಗುತ್ತದೆ. ಆದ್ದರಿಂದ ಈ ಒಂದು ಕ್ರಮ ಸರಿಯಲ್ಲವೆಂದು ನಾವು ಹೇಳುತ್ತಿರುವುದು. ನೀವು ಸಾಲವಾಗಿ ಕೊಡುವ ಹಣದಿಂದ ಉತ್ಪತ್ತಿಗೆ ದಾರಿಯಾಗಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಅಭಿಪ್ರಾಯವನ್ನು ಅವರಿಗೆ ಬರೆದು ತಿಳಿಸಬೇಕೇ ಹೊರತು ಸಾಲಮೇಳವನ್ನು ನೀವು ಬಾಯ್‌ಕಾಟ್ ಮಾಡುವುದು ಸರಿಯೇ ?

ಶ್ರೀ ಜೆ. ಹೆಚ್. ಪಟೇಲ್.—ಅವರ ಸಾಲಮೇಳವನ್ನು ನಾವು ಬಾಯ್‌ಕಾಟ್ ಮಾಡಿಲ್ಲ, ಅವರ ವರ್ತನೆ ಬಗ್ಗೆ ನಾವು ಬಾಯ್‌ಕಾಟ್ ಮಾಡಿದ್ದುದು. ಒಟ್ಟಿನಲ್ಲಿ ಅವರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಸಾಲಮೇಳವನ್ನು ಬಾಯ್‌ಕಾಟ್ ಮಾಡಿಲ್ಲವೆಂದು ನೀವು ಹೇಳುತ್ತಿದ್ದೀರಿ, ಆದರೆ ನಿಮ್ಮ ಮುಖ್ಯಮಂತ್ರಿಗಳ ಅಭಿಪ್ರಾಯವೇ ಈ ಬಗ್ಗೆ ಬೇರೆಯಾಗಿದೆ, ನಾನು ಈ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಯಾವ ರೀತಿ ಉತ್ತರ ಕೊಟ್ಟಿದ್ದಾರೆಂಬುದನ್ನು ಸ್ವಲ್ಪ ಓದಿ ಹೇಳುತ್ತೇನೆ :—

"ಕೇಂದ್ರ ಸರ್ಕಾರದ ರಾಜ್ಯ ಮಂತ್ರಿಗಳಾದ ಶ್ರೀ ಜನಾರ್ಧನ ಪೂಜಾರಿ ಅವರು ಕರ್ನಾಟಕ ರಾಜ್ಯದಲ್ಲಿ ನಡೆಸುವ ಸಾಲಮೇಳಗಳಿಗೆ ಸಹಕಾರ ನೀಡದಂತೆ ರಾಜ್ಯದ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆಯೇ, ಹೌದು, ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ? ಸ್ಥಳೀಯ ಚುನಾಯಿತ ಸದಸ್ಯರನ್ನು ಮತ್ತು ಮಂತ್ರಿಗಳನ್ನು ಸಾಲಮೇಳದಲ್ಲಿ ಭಾಗವಹಿಸಲು ಅವಕಾಶ ನೀಡದೇ ಇರುವುದರಿಂದ ಅಂತಹ ಆದೇಶ ನೀಡಿದ್ದುದು ನಿಜವಾದಲ್ಲಿ ಸರ್ಕಾರ ಸದರಿ ಆದೇಶವನ್ನು ವಾಪಸ್ ಪಡೆಯುವ ವಿಚಾರವನ್ನು ಪರಿಶೀಲಿಸುತ್ತದೆಯೋ ಎಂದು ಹೇಳಿದರೆ 'ಇಲ್ಲ' ಎಂದು ಹೇಳಿದೆ. ಈ ರೀತಿ ಇದ್ದರೆ ಪರಿಶೀಲಿಸುತ್ತದೆ ಎಂದು ಹೇಳಬಹುದಾಗಿತ್ತು."

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ವೈಯುಕ್ತಿಕವಾಗಿ ಮೆಚ್ಚಿಕೊಂಡಿರುವುದಕ್ಕಾಗಿ ಸನ್ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರನ್ನು ನಾನು ಅಭಿನಂದಿಸುತ್ತೇನೆ. ಮೊಟ್ಟಮೊದಲನೆಯದಾಗಿ ಕುಣಿಗಲ್‌ನಲ್ಲಿ ನಮ್ಮ ರಾಜ್ಯದವರೇ ಆದಂಥ ಕೇಂದ್ರ ಹಣಕಾಸಿನ ಸಚಿವರು ಸಾಲಮೇಳವನ್ನು ಮಾಡಿಕೊಂಡು ಹೋದರು. ನನ್ನನ್ನು ಕರೆಯುವಷ್ಟು ಕರುಣೆ ತೋರಲಿಲ್ಲ, ಅದಕ್ಕೆ ನನ್ನ ಅಭ್ಯಂತರವಿಲ್ಲ, ನಾನು ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ ಪುಣ್ಯಾತ್ಮರು ಯಾರೇ ಬಂದು ೫ ಪೈಸೆಯ ಉತ್ತಮ ಕೆಲಸ ಮಾಡುವುದಾದರೆ ನಾನು ಅವರಿಗೆ ಅಡ್ಡ ಸಲಾಮು ಹೊಡೆಯುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ನನ್ನ ಕ್ಷೇತ್ರದಲ್ಲೂ ಸಾಲಮೇಳ ಮಾಡಿದರು, ಒಬ್ಬರಿಗೂ ಕೊಟ್ಟಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಮಟ್ಟಿಗೆ ಹೇಳುವುದಾದರೆ, ಸನ್ಮಾನ್ಯ ಮಂತ್ರಿಗಳಾದ ಪೂಜಾರಿಯವರನ್ನು ಒಂದು ಸಾರಿ ಅಲ್ಲ, ನೂರಕ್ಕೆ ಒಂದು ಸಾರಿ ಬಂದು ನನ್ನ ಕ್ಷೇತ್ರಕ್ಕೆ ಭೇಟಿಕೊಟ್ಟು ಸಾಲಮೇಳ ಮಾಡಬೇಕು ಎಂದು ನಾನು ಸ್ವಾಗತಿಸುತ್ತೇನೆ. ಕಾರಣ ಇಷ್ಟೆ. ಬಡ ಜನರಿಗೆ, ೫-೧೦-೫೦-೧೦೦ ಜನರಿಗೆ ಸಾಲ ಸಿಕ್ಕಿ ಅವರ ಬಾಳು ಉತ್ತಮವಾಗುವುದಾದರೆ ಸಂತೋಷ. ನನ್ನನ್ನು ಕರೆಯದೇ ಹೋದರೂ ಪರವಾಗಿಲ್ಲ. ಮಾನ್ಯ ಪೂಜಾರಿಯವರು ಒಬ್ಬರೇ ಅಲ್ಲ. ಯಾರೇ ಬಂದರೂ, ಕೆಲಸ ಮಾಡುವುದಾದರೆ ಸಂತೋಷ. ಆದರೆ ಆರಿಸಿ ಬಂದಂಥ ಸದಸ್ಯರನ್ನು ಆ ಸಮಾರಂಭಕ್ಕೆ ಕರೆಯಬಾರದು ಎನ್ನುವುದು ತಾತ್ವಿಕವಾಗಿ ಎಷ್ಟು ತಪ್ಪೋ ಅದೇ ರೀತಿ ಮಂತ್ರಿಯಾಗಿರತಕ್ಕವರು ಬಂದಾಗ ನಾವೇನಾದರೂ ಅಧಿಕಾರಿಯನ್ನು ಹೋಗಬಾರದು ಎನ್ನುವುದು ಅಷ್ಟೇ ತಾತ್ವಿಕವಾಗಿ ತಪ್ಪಾಗುತ್ತದೆ. ವೈಯುಕ್ತಿಕವಾಗಿ ಒಪ್ಪುವುದಕ್ಕೆ ನಾನು ಸಿದ್ಧನಿದ್ದೇನೆ. ಈ ವಿಷಯವನ್ನು ಇಷ್ಟಕ್ಕೆ ಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಮ್ಮ ರಾಷ್ಟ್ರದ ಯೋಜನೆಗಳು ವಿಫಲವಾಗಲಿಕ್ಕೆ ಅಥವಾ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಫಲ ಕೊಡದೇ ಇರಲಿಕ್ಕೆ ಬಂದಂಥ ಎಡರುತೊಡರುಗಳನ್ನು, ಕಾರಣಗಳನ್ನು ವಿಶ್ಲೇಷಣೆ ಮಾಡುವಾಗ ಎರಡು ಪ್ರಮುಖವಾದ ಕಾರಣಗಳನ್ನು ಕೊಟ್ಟಿದ್ದೇನೆ. ಯೋಜನೆಗಳನ್ನು ನಿರೂಪಿಸುವಾಗ ಜನತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಯೋಜನೆಯನ್ನು ನಿರೂಪಿಸದೇ ಹೋದದ್ದು ಒಂದನೆಯ ಕಾರಣ. ಯೋಜನೆಗೆ ತೊಡಗಿಸಿದಂಥ ಹಣ ಯೋಜಿತ ಉದ್ದೇಶಕ್ಕಾಗಿ ಸಂಪೂರ್ಣವಾಗಿ ತಲುಪದೇ ಹೋದದ್ದು ಎರಡನೇ ಕಾರಣ. ಮತ್ತು ಯೋಜನೆಯನ್ನು ಕಾರ್ಯರೂಪಕ್ಕೆ ತರುವಂಥ ಯಾವ ನಮ್ಮ ಅಧಿಕಾರಶಾಹಿ, ನೌಕರಶಾಹಿ, ಆಡಳಿತಶಾಹಿ ಇದೆಯೋ ಅವರು ತಮ್ಮ ಶ್ರದ್ಧಾಪೂರ್ವಕವಾಗಿ ಕೆಲಸ ಮಾಡದೇ ಹೋದದ್ದು ಮೂರನೇ ಕಾರಣ. ಈ ಮೂರು ಮುಖ್ಯ ಕಾರಣಗಳು. ನಾಲ್ಕನೆಯ ಕಾರಣ ಏನೆಂದರೆ, ಈ ರಾಷ್ಟ್ರದಲ್ಲಿ ನಾವು ಮಾಡಿದಂಥ ಅಭಿವೃದ್ಧಿ ಕೆಲಸಗಳ ಫಲ ಅಥವಾ ಅಭಿವೃದ್ಧಿ ಕೆಲಸಗಳ ವೇಗ ಆಮೆಯ ವೇಗದ್ದಾದರೆ ಈ ರಾಷ್ಟ್ರದ ಜನಸಂಖ್ಯೆಯ ಹೆಚ್ಚಳ ಕುದುರೆಯ ವೇಗದಲ್ಲಿ, ನಾಗಾಲೋಟದಲ್ಲಿ ಹೋಯಿತು. ಇದು ಒಂದು ಪ್ರಮುಖವಾದಂಥ ಕಾರಣ. ಆದುದರಿಂದ ಇದು ಕೇವಲ ರಾಜ್ಯಕ್ಕೆ ಅಲ್ಲ, ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಹಾಗೆ ನಾವು ಈ ವೈಫಲ್ಯಗಳನ್ನು ಗುರುತಿಸಿ, ಈ ವೈಫಲ್ಯಗಳಿಗೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಅಂದರೆ ಮೂರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅತಿ ಜರೂರಾಗಿ, ಅತಿ ಸೀರಿಯಸ್ಸಾಗಿ ಹಮ್ಮಿಕೊಳ್ಳಬೇಕಾಗುತ್ತದೆ. ಮೊಟ್ಟಮೊದನೆಯದಾಗಿ, ಕುಟುಂಬ ಕಲ್ಯಾಣ ಯೋಜನೆಯಲ್ಲಿ ನಾವು ಇವತ್ತು ಏನು ಕೆಲಸ ಮಾಡುತ್ತಿದ್ದೇವೋ ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬೇಕಾಗುತ್ತದೆ. ೧೯೭೭-೭೮ರಲ್ಲಿ ಕರ್ನಾಟಕ ಸರ್ಕಾರದ ಸಾಧನೆ ಈ ಒಂದು ಕುಟುಂಬ ಕಲ್ಯಾಣ ಕ್ಷೇತ್ರದಲ್ಲಿ ಗುರಿ ಮೀರಿದ ಸಾಧನೆಯಾಗಿದೆ. ಮಾನ್ಯ ತಿಮ್ಮೇಗೌಡರು ತೂಕಡಿಸುತ್ತಾ ಇದ್ದಾರೋ, ಎಚ್ಚರವಿದ್ದಾರೋ ಗೊತ್ತಿಲ್ಲ. ಅವರನ್ನು ನಾನು ಅಭಿನಂದಿಸುತ್ತೇನೆ. ೧೯೭೭-೭೮ರಲ್ಲಿ ಕುಟುಂಬ ಕಲ್ಯಾಣ ಯೋಜನಾ ಕ್ಷೇತ್ರದಲ್ಲಿ

ಗುರಿ ಮೀರಿ ಸಾಧಿಸಿ ಒಂದು ಕೋಟಿ ರೂಪಾಯಿಗಳ ಬಹುಮಾನವನ್ನು ತಂದು ಕೊಟ್ಟಂಥ ಕೆಲಸವನ್ನು ಅವರು ಮಾಡಿದ್ದಾರೆ. ಅದರ ಕೀರ್ತಿ ಅವರಿಗೆ ಸಲ್ಲತಕ್ಕದ್ದು, ಸರ್ಕಾರಕ್ಕೂ ಸಲ್ಲತಕ್ಕದ್ದು, ಜೊತೆಗೆ ಬೆಂಬಲ ಕೊಟ್ಟಂಥ ನಮ್ಮ ಎಲ್ಲಾ ಶಾಸಕ ಮಿತ್ರರಿಗೂ ಕೂಡ ಸಲ್ಲತಕ್ಕದ್ದು. ಇನ್ನು ಮುಂದೆ ಕೂಡ ಸರ್ಕಾರ ರಾಷ್ಟ್ರಮಟ್ಟದಲ್ಲಿ ಕುಟುಂಬ ಕಲ್ಯಾಣ ಯೋಜನೆಯನ್ನು ತ್ವರಿತಗತಿಯಲ್ಲಿ ರೂಪಿಸಬೇಕು ಎಂದು ನಾನು ಭಾವಿಸುತ್ತೇನೆ. ಇನ್ನು ಎರಡನೆಯದು ವಿದ್ಯಾಭ್ಯಾಸ, ರಾಷ್ಟ್ರೀಯ ಕಾರ್ಯಕ್ರಮದ ವಿದ್ಯಾಭ್ಯಾಸದ ಬಗ್ಗೆ ಸರ್ಕಾರ ಪಠ್ಯಪುಸ್ತಕಗಳನ್ನು, ಬಟ್ಟೆ ಹಂಚುವಂಥ ಕಾರ್ಯಕ್ರಮವನ್ನು ಅಳವಡಿಸಿಕೊಂಡಿತ್ತು. ನನ್ನ ಸ್ನೇಹಿತರು ಕೆಲವರು ಹೇಳಿದರು. ನಿಮಗೆ ಪುಸ್ತಕ, ಬಟ್ಟೆ ಯಾರು ಕೇಳಿದರು, ಇವೆಲ್ಲಾ ಕೊಡುವಂಥ ಅವಶ್ಯಕತೆ ಇತ್ತೇ ಎಂದು, ಈ ರಾಷ್ಟ್ರೀಯ ವಿದ್ಯಾಭ್ಯಾಸದ ಬಗ್ಗೆ ವಿಶ್ಲೇಷಣೆ ಮಾಡಿದಾಗ ಈ ದೇಶದ ಜನಸಾಮಾನ್ಯರಿಗೆ ತನ್ನ ಮಗನನ್ನು ಶಾಲೆಗೆ ಕಳುಹಿಸಬೇಕೆಂಬ ಸಾಮಾಜಿಕ ಪ್ರಜ್ಞೆ ಮೂಡಿದ್ದರೂ ಸಹ ಆರ್ಥಿಕ ಶಕ್ತಿ ಬಂದಿಲ್ಲ. ಅವನಿಗೆ ತನ್ನ ಮಗನನ್ನು ಡಿ.ಸಿ. ಮಾಡಬೇಕು. ಎಂ.ಎಲ್.ಎ. ಮಾಡಬೇಕು, ಎಂ.ಪಿ. ಮಾಡಬೇಕು, ಮಂತ್ರಿ ಮಾಡಬೇಕೆಂದು ಆತನಲ್ಲಿ ಮನಸ್ಸಿದ್ದರೂ ಸಾಮಾಜಿಕ ಪ್ರಜ್ಞೆ ಇದ್ದರೂ ಸಹ ಅದನ್ನು ಕಾರ್ಯರೂಪಕ್ಕೆ ತರತಕ್ಕ ಶಕ್ತಿ ಅವನಲ್ಲಿ ಇಲ್ಲ. ನಾವು ವೇದಿಕೆಯ ಮೇಲೆ ನಿಂತು ಭಾಷಣ ಮಾಡುತ್ತೇವೆ. ತಮ್ಮ ಮಕ್ಕಳಿಗೆಲ್ಲಾ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳುತ್ತೇವೆ. ಆದರೆ ಅವರಲ್ಲಿ ಇದಕ್ಕೆ ಆರ್ಥಿಕ ಶಕ್ತಿ ಇರುವುದಿಲ್ಲ. ಹಳ್ಳಿಯಲ್ಲಿ ಬಡ ಜನತೆಯ ಸಂಸಾರ ಯಾವ ರೀತಿ ಇರುತ್ತದೆ ಎನ್ನುವುದು ನಮಗೆಲ್ಲಾ ಗೊತ್ತಿದೆ. ಒಂದು ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು ಇದ್ದರೆ, ಗಂಡ ಒಂದು ಕಡೆ ಕೆಲಸಕ್ಕೆ ಹೋದರೆ, ಅವನ ಮಕ್ಕಳು ಎಮ್ಮೆ ಕಾಯಲಿಕ್ಕೆ ಹೋಗಬೇಕಾಗುತ್ತದೆ, ಅವನ ಹೆಂಡತಿ ತನ್ನ ಚಿಕ್ಕಮಗುವನ್ನು ಕಂಕಳಲ್ಲಿ ಹಾಕಿಕೊಂಡು ಕೆಲಸಕ್ಕೆ ಹೋಗಬೇಕಾಗಿರುತ್ತದೆ. ಇನ್ನು ಅವರು ಸ್ಕೂಲಿಗೆ ಹೋಗಲಿಕ್ಕೆ ಎಲ್ಲಿ ಆಗುತ್ತದೆ? ಈ ಸಂದರ್ಭದಲ್ಲಿ ಒಂದು ಕಥೆ ಹೇಳಬೇಕೆಂದರೆ ಒಂದು ವರ್ಷ, ಎರಡು ವರ್ಷಗಳ ಹಿಂದೆ ಸುಧಾ ಪತ್ರಿಕೆಯಲ್ಲಿ ಒಂದು ಕಥೆ ಬಂದಿತ್ತು. ಆ ಕಥೆಯನ್ನು ಓದಿದಮೇಲೆ ನನಗನಿಸಿತು, ಅದು ಕಥೆ ಅಲ್ಲವೇ ಅಲ್ಲ ಎಂದು. ಅದು ಹಳ್ಳಿಗಾಡಿನ ನಿತ್ಯ ಸತ್ಯ ಕಥೆ ಅಷ್ಟೆ, ಒಬ್ಬ ಹುಡುಗ ಇರುತ್ತಾನೆ, ಆತ ರಾತ್ರಿ ಮೂರು ಗಂಟೆಯಲ್ಲಿ ಎದ್ದು ಓದಬೇಕೆಂದು ತನ್ನ ತಂದೆಯನ್ನು ದೀಪ ಹಚ್ಚಲಿಕ್ಕೆ ಒಂದು ಬೆಂಕಿಕಡ್ಡಿಯನ್ನು ಕೇಳುತ್ತಾನೆ. ಅವನು ಹೊಲದಲ್ಲಿಯೋ, ತೋಟದಲ್ಲಿಯೋ ಬೇಸಾಯ ಮಾಡಿಕೊಂಡು ಬಂದು ಸಾಕಾಗಿ ಬಿದ್ದುಕೊಂಡಿದ್ದರಿಂದ, ಆತ ತನ್ನ ಮಗನಿಗೆ ಹೇಳುತ್ತಾನೆ, ನೀನು ಈಗ ಎದ್ದು ಓದಿಕೊಳ್ಳದೇ ಹೋದರೆ ಕಂಚಿ ಗೋಪುರವನ್ನು ಹದ್ದು ಹೊತ್ತುಕೊಂಡು ಹೋಗುವುದಿಲ್ಲ ಬಿದ್ದುಕೊಳ್ಳಲೇ ಎಂದು ಹೇಳುತ್ತಾನೆ. ಆ ಹುಡುಗನಿಗೆ ತಾನು ಓದಬೇಕೆಂಬ ಆಕಾಂಕ್ಷೆ ಏನಿತ್ತು ಅದು ಕಡಿಮೆಯಾಗಲಿಲ್ಲ, ಆಗ ಅವನು ತನ್ನ ತಾಯಿ ಹತ್ತಿರ ಹೋಗಿ ನಾನು ಈ ರೀತಿ ಓದಬೇಕಾಗಿದೆ ದೀಪ ಹಚ್ಚಿಕೊಳ್ಳಲಿಕ್ಕೆ ಬೆಂಕಿ ಬೇಕಾಗಿದೆ, ಆದ್ದರಿಂದ ಒಲೆಯಲ್ಲಿ ಬೆಂಕಿಯ ಕಾವು ಏನಾದರೂ ಇದ್ದರೆ ಅದಕ್ಕೆ ಪುಳ್ಳೆ ಹಾಕಿ ಬೆಂಕಿ ಹೊತ್ತಿಸಿಕೊಡು ಎಂದು ಕೇಳುತ್ತಾನೆ,. ಆಗ ತಾಯಿ ಅವನಿಗೆ ಬಯ್ಯುವುದಿಲ್ಲ. ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾಳೆ. ಏಕೆಂದರೆ ತಾಯಿ ಯಾವಾಗಲೂ ತಂದೆಗಿಂತಲೂ ಮೃದು ಸ್ವಭಾವ ಜಾಸ್ತಿ ಇರುತ್ತದೆ. ನಿಮಗೆಲ್ಲಾ ಗೊತ್ತಿರುವಂತೆ. ಸಾಹುಕಾರರ ಮನೆಯಲ್ಲಿ ಸೌದೆ ಉಪಯೋಗ ಮಾಡುವುದರಿಂದ ಅವರ ಮನೆಯ ಒಲೆಯಲ್ಲಿ ಸಾಮಾನ್ಯವಾಗಿ ಬೆಂಕಿ ಇರುತ್ತದೆ. ಇವರು ಬಡವರಾದ್ದರಿಂದ ಪುಳ್ಳೆ ಇಟ್ಟು ಮಾಡುವುದರಿಂದ ಅದರಲ್ಲಿ ಬೆಂಕಿ ಇರುವುದಿಲ್ಲ, ಅದರಿಂದಾಗಿ ಅವರು ಬೆಂಕಿ ಹಚ್ಚಿಕೊಳ್ಳಲಿಕ್ಕೆ ಆಗುವುದಿಲ್ಲ. ಆದರೂ ಸಹ ಆ ಹುಡುಗ ತಾನು ಓದಬೇಕು ಎನ್ನುವ ಆಕಾಂಕ್ಷೆಯಿಂದ, ಆ ಊರಿನ ಗೌಡನ ಹತ್ತಿರ ಹೋಗಿ ಒಂದು ಬೆಂಕಿ ಕಡ್ಡಿ ಕೊಡಿ ಎಂದು ಕೇಳುತ್ತಾನೆ, ಆಗ ಆತ ನೀನು ಚೋಟುದ್ದ ಇಲ್ಲ, ಬೀಡಿ ಸೇದಬೇಕೇನು ಎಂದು ಹೇಳುತ್ತಾನೆ. ಆಗ ಆ ಹುಡುಗ ಹೇಳುತ್ತಾನೆ, ನಾನು ಈ ರೀತಿ ಓದಲಿಕ್ಕೋಸ್ಕರ ನಮ್ಮ ಅಪ್ಪನಿಗೆ ಬೆಂಕಿಕಡ್ಡಿ ಕೇಳಿದೆ ಸಿಕ್ಕಲಿಲ್ಲ, ನಮ್ಮ ತಾಯಿಗೆ ಕೇಳಿದರೂ ಸಿಕ್ಕಲಿಲ್ಲ, ಆದ್ದರಿಂದ ತಮ್ಮನ್ನು ಕೇಳುತ್ತಿದ್ದೇನೆಂದು ಹೇಳುತ್ತಾನೆ, ಅನಂತರ ಆತ ಬೆಂಕಿಕಡ್ಡಿ ತಂದು ದೀಪ ಹಚ್ಚಿಕೊಂಡು ಓದುತ್ತಾನೆ. ಈ ಒಂದು ಘಟನೆ ನಮ್ಮ ಮನಸ್ಸಿಗೆ ಬಂದಾಗ ನನಗೆ ಅನ್ನಿಸಿತು, ಇದು ಕಥೆ ಅಲ್ಲ. ಇವೊತ್ತು ಜೀವನದಲ್ಲಿ ಅನೇಕ ಜನ ದೊಡ್ಡ ಮನುಷ್ಯರು ಆಗಿದ್ದಾರೆ. ಇದು ನಮ್ಮ ನಿತ್ಯ ಸತ್ಯ ಕಥೆ ಎಂದು ಭಾವಿಸುತ್ತೇನೆ. ನಾನು ಇದನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ಹುಡುಗರಿಗೆ ಪುಸ್ತಕ, ಬಟ್ಟೆ ಕೊಡು ಎಂದು ಯಾರು ಕೇಳಿದರು ಎಂದು ನನ್ನ ಹತ್ತಿರ ಜನರು ಪ್ರಸ್ತಾಪ ಮಾಡಿದ್ದಕ್ಕೆ ಹೇಳಬೇಕಾಗಿ ಬಂತು. ಇವೊತ್ತು ನಮ್ಮ ಹಳ್ಳಿಯಲ್ಲಿ ದೀಪ ಇದ್ದರೆ ಬತ್ತಿ ಇಲ್ಲದ ಪರಿಸ್ಥಿತಿ, ದೀಪ, ಬತ್ತಿ ಇದ್ದರೆ ಎಣ್ಣೆ ಇಲ್ಲದ ಪರಿಸ್ಥಿತಿ, ದೀಪ, ಬತ್ತಿ, ಎಣ್ಣೆ ಇದ್ದಾಗ ಗೀರಿ ಹಚ್ಚಲಿಕ್ಕೆ ಬೆಂಕಿಕಡ್ಡಿ ಗತಿ ಇಲ್ಲದ ಪರಿಸ್ಥಿತಿ ಅವೊತ್ತು ಇತ್ತು, ಇವೊತ್ತು ಇದೆ. ನಾನು ಒಂದು ಮಾತನ್ನು ಒತ್ತಿ ಹೇಳಿದ್ದೇನೆ. ಜನತೆಗೆ ನಮ್ಮ

ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆನ್ನುವ ಸಾಮಾಜಿಕ ಪ್ರಜ್ಞೆ ಬಂದಿದ್ದರೂ ಸಹ ಅವರಲ್ಲಿ ಆರ್ಥಿಕ ಶಕ್ತಿ ಬಂದಿಲ್ಲ. ಇದನ್ನು ಅರಿತುಕೊಂಡು ಜನತಾ ಸರ್ಕಾರ ಮಕ್ಕಳಿಗೆ ಬಟ್ಟೆ, ಪುಸ್ತಕಗಳನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ನಿರೂಪಿಸಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದ ವಿದ್ಯಾಭ್ಯಾಸದ ಬಗ್ಗೆ ಒಂದು ಮಾತನ್ನು ನಾನು ಹೇಳಬೇಕಾದದ್ದು ಎಂದರೆ, ಈ ರಾಷ್ಟ್ರದ ಜನತೆಗೆ, ಬಟ್ಟೆಯನ್ನು ಕೊಡದಿದ್ದರೂ ಪರವಾಗಿಲ್ಲ, ಅನ್ನವನ್ನು ಕೊಡದಿದ್ದರೂ ಪರವಾಗಿಲ್ಲ, ಆದರೆ ವಿದ್ಯೆಯನ್ನು ಕೊಡದಿದ್ದರೆ ಅದು ಕಾಂಗ್ರೆಸ್ ಸರ್ಕಾರವೇ ಆಗಲಿ, ಜನತಾ ಸರ್ಕಾರವೇ ಆಗಲಿ, ಅಥವಾ ಬೇರೆ ಯಾವುದೇ ಸರ್ಕಾರ ಆಗಿರಲಿ ಅದು ಆ ಜನತೆಗೆ ಮಾಡಿದಂಥ ಘೋರ ಅಪರಾಧವಾಗುತ್ತದೆ. ಸ್ವಾಮಿ, ತಾವೂ ವಕೀಲರಾಗಿದ್ದೀರಿ. ನಾನೂ ವಕೀಲನಾಗಿದ್ದೇನೆ. ನನ್ನ ಗಮನಕ್ಕೆ ಬಂದಿರುವ ಒಂದು ವಿಚಾರವನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ದೊಡ್ಡ ಕಳಲೆ ಎಂಬ ಒಂದು ಗ್ರಾಮ ಇದೆ. ಅಲ್ಲಿ ಬೋರಣ್ಣ ಎಂಬ ಒಬ್ಬ ರೈತ ಈಗಲೂ ಇದ್ದಾನೆ. ಆತನು ಸುಮಾರು ೨೦ ವರ್ಷಗಳ ಹಿಂದೆ ತಿಮ್ಮಕ್ಕ ಎಂಬುವವಳನ್ನು ಮದುವೆಯಾದ. ಅವನಿಗೆ ಈಕೆ ಎರಡನೆಯ ಹೆಂಡತಿ. ಇಬ್ಬರು ಮಕ್ಕಳೂ ಇದ್ದಾರೆ, ಮತ್ತು ಮೊದಲನೇ ಹೆಂಡತಿಯೂ ಇದ್ದಳು. ಒಂದುಸಾರಿ ಅವರ ಮನೆಯಲ್ಲಿ ಜಗಳ ಬಂದು ನ್ಯಾಯಕ್ಕೆ ಕುಳಿತಾಗ ಅಕ್ಕಪಕ್ಕದ ಊರಿನ ಜನರು ಬಂದು ತಿಮ್ಮಕ್ಕನಿಗೆ ೧೦ ಗುಂಟೆ ಹೊಲ, ೨ ಗುಂಟೆ ಗದ್ದೆ, ಮಡಸ್ಸು ಹಾಕಿಕೊಳ್ಳುವುದಕ್ಕೆ ಸ್ವಲ್ಪ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿದರು. ಅದರ ಪ್ರಕಾರ ಇಂಥಿಂಥ ಜಮೀನು ಬೋರಯ್ಯನ ೨ನೇ ಹೆಂಡತಿ ತಿಮ್ಮಕ್ಕನಿಗೆ ಎಂದು ಪತ್ರವನ್ನು ಬರೆದಿದ್ದಾಯಿತು ನಂತರ ಅದು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ರಿಜಿಸ್ಟರ್ ಕೂಡ ಆಯಿತು. ಈ ವಿಚಾರ ಎಂಥಾದ್ದು ಎಂಬುದು ತಮಗೂ ಗೊತ್ತಿದೆ. ಮೊದಲನೇ ಹೆಂಡತಿ ಬದುಕಿರುವಾಗಲೇ ಎರಡನೇ ಹೆಂಡತಿಗೆ ಯಾವುದೇ ಹಕ್ಕು ಬರುವುದಿಲ್ಲ. ಪತ್ರ ರಿಜಿಸ್ಟರ್ ಆದಮೇಲೆ ತಿಮ್ಮಕ್ಕ ಬಹಳ ಸಂತೋಷದಿಂದ ಮನೆಗೆ ಹೋಗಿ. ಆ ಪತ್ರವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಮನೆ ದೇವರ ಮುಂದೆ ಅದನ್ನಿಟ್ಟು ಊದುಬತ್ತಿಯನ್ನೂ ಹಚ್ಚಿದಳು. ಆಕೆ ಸಂತೋಷದಿಂದ ಇರುವಾಗ ಮುಂಗಾರು ಪ್ರಾರಂಭವಾಗಿ ಮಳೆಯೂ ಬಂತು. ಆಗ ತಿಮ್ಮಕ್ಕ ತನಗೆ ಬೋರಯ್ಯ ಕೊಟ್ಟಿದ್ದ ಜಮೀನನ್ನು ಉಳುಮೆ ಮಾಡುವುದಕ್ಕೆ ಹೋದಾಗ ಇವಳಿಗಿಂತ ಮುಂಚೆಯೇ ಬೋರಯ್ಯ ಹೋಗಿ ಆ ಜಮೀನನ್ನು ಉಳುಮೆ ಮಾಡುತ್ತಿದ್ದ. ಆಗ ತಿಮ್ಮಕ್ಕ ಊರಿನ ಜನರನ್ನೆಲ್ಲಾ ಕರೆದುಕೊಂಡುಬಂದು ವಾಸ್ತವಾಂಶವನ್ನು ಅವರಿಗೆ ಹೇಳಿದಳು. ಆಗ ಆತ ಏನು ಹೇಳಿದ ಎಂದರೆ, ನಾನು ಆಕೆಗೆ ಪತ್ರವನ್ನೇ ಬರೆದು ಕೊಟ್ಟಿಲ್ಲ, ನಾನು ಬರೆದು ಕೊಟ್ಟಿರುವ ಪತ್ರ ಯಾವುದಾದರೂ ಇದ್ದರೆ ತನ್ನಿ ನೋಡೋಣ ಎಂದ. ಆ ಪತ್ರದಲ್ಲಿ ಏನಿದೆ ಎಂದರೆ ''ನೀನು'' ಎನ್ನುವ ಕಡೆ ''ನಾನು''. ''ನಾನು'' ಎನ್ನುವ ಕಡೆ ''ನೀನು'' ಎಂದು ಇದೆ. ಅಂದರೆ ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಿಂದ ಆ ಪತ್ರ ರಿಜಿಸ್ಟರ್ ಆಗಿ ಹೊರಗೆ ಬರುವಾಗ ತಿಮ್ಮಕ್ಕನು ಬೋರಯ್ಯನಿಗೆ ಜಮೀನು ಬರೆದುಕೊಟ್ಟಿರತಕ್ಕ ಪತ್ರ ಎಂದು ಪರಿವರ್ತನೆಯಾಗಿದೆ ಅಂದರೆ ತಿಮ್ಮಕ್ಕನಿಗೆ ಅವಳ ಅಪ್ಪ–ಅಮ್ಮನವರು ಸ್ವಲ್ಪಮಟ್ಟಿಗಾದರೂ ವಿದ್ಯಾಭ್ಯಾಸವನ್ನು ಕಲಿಸಿದ್ದಿದ್ದರೆ ಇವತ್ತು ಅವಳಿಗೆ ಈ ಗತಿ ಬರುತ್ತಿರಲಿಲ್ಲ. ಬೇರೆ ಯಾರಾದರೂ ಆಗಿದ್ದರೆ ನಮ್ಮ ಹಳ್ಳಿಯ ಭಾಷೆಯಲ್ಲಿ ಹೇಳುವುದಾದರೆ ''ಎಕ್ಕಡವನ್ನು ಕೈಗೆ ತೆಗೆದುಕೊಂಡು ಬಾರಿಸುತ್ತಿದ್ದರು''. ಚಪ್ಪಲಿ ಇಲ್ಲದಿದ್ದರೆ ಹೊಂಗೆ ಕಡ್ಡಿಯಿಂದ ಹೊಡೆಯುತ್ತಿದ್ದರು. ಆ ತಿಮ್ಮಕ್ಕ ಒಂದೆರಡು ಅಕ್ಷರಗಳನ್ನು ಕಲಿಯದೇ ಹೋಗಿದ್ದರಿಂದ ಇಂಥ ಕಷ್ಟವನ್ನು ಆಕೆ ಅನುಭವಿಸಬೇಕಾಯಿತು. ಆಕೆ ಆ ಪತ್ರವನ್ನು ನನ್ನ ಹತ್ತಿರಕ್ಕೆ ತೆಗೆದುಕೊಂಡು ಬಂದಳು. ನಾನು ಅದನ್ನು ನೋಡಿ ನನಗೆ ಕಣ್ಣಲ್ಲಿ ನೀರು ಬಂತು. ಆ ಪತ್ರ ರಿಜಿಸ್ಟರ್ ಆಗುವಾಗ ಯಾರಾದರೂ ಓದಿ ಹೇಳಿದ್ದಿದ್ದರೆ ಅವಳು ಬದುಕಿಕೊಳ್ಳುತ್ತಿದ್ದಳು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮ ಮಕ್ಕಳಿಗೆ, ಅಥವಾ ನಮ್ಮ ರಾಜ್ಯದ ಮಕ್ಕಳಿಗೆ ನಾವು ಸರಿಯಾದ ಶಿಕ್ಷಣವನ್ನು ಕೊಡದೇ ಹೋದರೆ ಮಹಾ ಘೋರ ಪಾಪಕ್ಕೆ ನಾವೆಲ್ಲರೂ ಹೋಗಬೇಕಾಗುತ್ತದೆ. ಅವರ ಘೋರ ಶಾಪಕ್ಕೆ ನಾವೆಲ್ಲರೂ ಗುರಿಯಾಗಬೇಕಾಗುತ್ತದೆ. ಇನ್ನು ಮೂರನೆಯದಾಗಿ ರಾಷ್ಟ್ರೀಯ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಅದು ಯಾವುದೆಂದರೆ ಅರಣ್ಯಗಳನ್ನು ಬೆಳೆಸುವುದು, ಗಿಡ ಮರಗಳನ್ನು ಬೆಳೆಸುವುದು. ಇದಕ್ಕೆ ಏತಕ್ಕೆ ಇಷ್ಟೊಂದು ಪ್ರಾಮುಖ್ಯತೆಯನ್ನು ಕೊಡಬೇಕೆನ್ನುವುದು ಬಹಳ ಮುಖ್ಯ. ಮಾನ್ಯ ಅಧ್ಯಕ್ಷರೇ ಸಾಮಾನ್ಯವಾಗಿ ಪ್ರಪಂಚದಲ್ಲಿ ಮಾಲಿನ್ಯವೆಂಬುದು ಸರ್ವಸಾಮಾನ್ಯವಾಗಿ ಎಲ್ಲಾ ಕಡೆ ಇದೆ. ಇದರಲ್ಲಿ ಮೂರು ವಿಧ ಇರುತ್ತದೆ. ಜಲಮಾಲಿನ್ಯ, ವಾಯು ಮಾಲಿನ್ಯ, ಸಮಾಜ ಮಾಲಿನ್ಯವೆಂದು ಈ ಮೂರರಲ್ಲಿ ಮೂರನೆಯದನ್ನು ಮಾತನಾಡದೆ ಇರುವುದು ಉತ್ತಮವೆಂದು ನಾನು ಭಾವಿಸುತ್ತೇನೆ.

ಇವರಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಹೋಗಿ ಬಿಟ್ಟಿರುತ್ತದೆ, ಆದ್ದರಿಂದ ಅದನ್ನು ಜಾಸ್ತಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ ಜಲಮಾಲಿನ್ಯವೆಂದು ನಾನು ಏನು ಹೇಳಿದೆ ಇದು ವಾಯು ಮಾಲಿನ್ಯಕ್ಕೆ ಹೊಂದಿಕೊಂಡಿರುತ್ತದೆ. ಯತೇಚ್ಛವಾಗಿ ನಾವು ಅರಣ್ಯವನ್ನು ಬೆಳಸದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ ನಮ್ಮದೇ ಕ್ಷೇತ್ರದಲ್ಲಿ ಒಂದು ಊರು ಇದೆ, ಮಾನ್ಯ ಪ್ರಕಾಶ್‌ರವರು ಯಾವು ಯಾವುದೇ ಊರುಗಳನ್ನು ಹೋಲಿಸಿದರು. ಅದು ಯಾವುದು ನನಗೆ ಗೊತ್ತಿಲ್ಲ. ನನ್ನದೇ ಕ್ಷೇತ್ರದಲ್ಲಿ ಒಂದು ಉತ್ತರದುರ್ಗ ವೆಂದು ಒಂದು ಹಳ್ಳಿ ಇರುತ್ತದೆ. ಇಡೀ ಊರ ಪೂರ್ತಿ ವಾಸ ಮಾಡತಕ್ಕಂಥಜನರು ಬಂಡೆಗಳಮೇಲೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ನಾನು ಒಂದುಸಾರಿ ಹೋದಾಗ ಒಬ್ಬ ವಯಸ್ಸಾದ ಅಜ್ಜನನ್ನು ಕೇಳಿದೆ ಇಷ್ಟೊಂದು ಪಕ್ಕದಲ್ಲಿಯೇ ಮೈದಾನವಿರುತ್ತದೆ, ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳದೆ ಕಲ್ಲು ಬಂಡೆಯಮೇಲೆ ಏತಕ್ಕೆ ಮನೆಗಳನ್ನು ಕಟ್ಟಿಕೊಂಡಿರುತ್ತೀರಿ ಎಂದು. ಅಧ್ಯಕ್ಷರೇ ಆತ ಉತ್ತರವನ್ನು ಕೊಟ್ಟಿದ್ದನ್ನು ಕೇಳಿ ನನಗೆ ನಾಚಿಕೆಯಾಯಿತು. ಆಗ ನಾವು ಚಿಕ್ಕ ಹುಡುಗರಾಗಿದ್ದಾಗ ಶೀತ ಜಾಸ್ತಿ ಯಾಗಿ ಮನೆಗಳು ಕುಸಿದು ಬೀಳುತ್ತಿದ್ದವು ಆದ್ದರಿಂದ ಮನೆಗಳನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಿ ಕೊಂಡಿರುತ್ತೇವೆಂದು ಹೇಳಿದ. ೬೦ ವರ್ಷಗಳ ಹಿಂದೆ ನಮ್ಮ ಊರಲ್ಲಿ ಶೀತ ಜಾಸ್ತಿಯಾಗಿ ಮನೆಗಳು ಕುಸಿದುಬಿದ್ದು ಹೋಗತಕ್ಕಂಥ ಪರಿಸ್ಥಿತಿ ಇತ್ತು. ಇವೊತ್ತು ಏನಾಗಿದೆ ಎಂದರೆ ಇನ್ನೂರು ಅಡಿ ನೆಲವನ್ನು ಕೊರೆದುಕೊಂಡುಹೋದರೂ ನೀರೇಬೀಳುತ್ತಿಲ್ಲ. ಇಂಥ ಒಂದು ಪರಿಸ್ಥಿತಿ ಈಗ ಉಂಟಾಗಿದೆ. ಇನ್ನುಮುಂದೆ ಪರಿಸ್ಥಿತಿ ಏನಾಗುತ್ತದೆಯೋ ಎನ್ನುವುದನ್ನು ಯೋಚನೆಮಾಡಬೇಕಾಗಿದೆ. ೬೦ ವರ್ಷಗಳಲ್ಲಿ ಇಂಥ ಒಂದು ಪರಿಸರವನ್ನು ಸೃಷ್ಟಿ ಮಾಡಿದಂಥ ಪಾಪದ ಜನಾಂಗಕ್ಕೆ ಸೇರಿದವ ರಾಗಿದ್ದೇವೆ. ಹೀಗೆಯೇ ಇಂಥ ಒಂದು ಪರಿಸ್ಥಿತಿ ಮುಂದುವರೆದರೆ ಕಡೆಗೆ ನೀರೇ ಇಲ್ಲದಂಥ ಪರಿಸ್ಥಿತಿ ಯನ್ನು ಸೃಷ್ಟಿ ಮಾಡಿದಂಥ ಪಾಪದ ಜನಾಂಗಕ್ಕೆ ನಾವು ಹೋಗುತ್ತೇವೆ. ಆದ್ದರಿಂದ ವನ್ಯ ಕಾಡನ್ನು ನಾವು ಅಭಿವೃದ್ಧಿ ಮಾಡದೇಹೋದರೆ ಮಳೆಯೇ ಬರುವುದಿಲ್ಲ. ಮಂತ್ರ ಹೇಳಿದರೆ ಮಳೆಬರುವುದಿಲ್ಲ ವೆಂದು ಅತ್ತಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರು ಹೇಳಿದರು. ತಪಸ್ಸು, ಪೂಜೆಯನ್ನು ಮಾಡಿದರೂ ಮಳೆ ಕೂಡ ಬರುವುದಿಲ್ಲ. ತಲೆ ಒಡೆದುಕೊಂಡರೆ ರಕ್ತ ಬರುತ್ತದೆಯೇ ವಿನಃ ಮಳೆ ಬರುವುದಿಲ್ಲ. ಮಾನ್ಯ ಜೀವರಾಜಆಳ್ವರವರು ಮಾತನಾಡುತ್ತಾ ಅರಣ್ಯವನ್ನು ಬೆಳೆಸಬೇಕೆಂದು ಹೇಳಿದರು. ಅರಣ್ಯವನ್ನು ಬೆಳೆಸುವುದರಿಂದ ಕೃಷಿ ಪ್ರಧಾನವಾದ ನಮ್ಮ ರಾಷ್ಟ್ರದಲ್ಲಿ ರೈತರಿಗೆ ಭೂಮಿಯಮೇಲೆ ನೀರಿನ ಅವಶ್ಯಕತೆ ಬಹಳವಾಗಿ ಇರುತ್ತದೆ. ಅರಣ್ಯವನ್ನು ಬೆಳೆಸುವುದರಿಂದ ಅವರ ನೀರಿನ ಕೊರತೆಯನ್ನು ನೀಗುವುದರ ಜೊತೆಗೆ ಪರಿಸರ ಮಾಲಿನ್ಯವನ್ನು ಕೂಡ ತೊಡೆದು ಹಾಕಬಹುದು ಅಲ್ಲದೆ ಎಲ್ಲೆಲ್ಲೂ ಹಸಿರು ನೋಡುವಂಥ ಒಂದು ಅವಕಾಶವೂ ದೊರಕುತ್ತದೆ. ಈ ಒಂದು ದೃಷ್ಟಿ ಯಿಂದ ಅರಣ್ಯವನ್ನು ಬೆಳೆಸತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಏಳನೆಯ ಪುಟದಲ್ಲಿ ಸಾಕಷ್ಟು ವಿವರಣೆಗಳನ್ನು ಅದಕ್ಕಾಗಿ ಕೊಟ್ಟಿದ್ದೇವೆ. ನಾನು ಕಾಡಿನ ಬಗ್ಗೆ ಮಾತನಾಡು ವಾಗ ನನ್ನ ಒಂದು ಕೋರಿಕೆಯನ್ನು ಹೇಳಲು ಇಚ್ಛೆಪಡುತ್ತೇನೆ. ಕಾಡನ್ನು ಬೆಳೆಸತಕ್ಕಂಥ ಕಾರ್ಯ ಕ್ರಮ ಕೇವಲ ಸರ್ಕಾರದ ಕಾರ್ಯಕ್ರಮವಾದರೆ ಅದು ಫಲಭರಿತವಾಗುವುದಿಲ್ಲ. ನಾವು ದಾರಿಯಲ್ಲಿ ಹೋಗುವಾಗ ಮರಗಳನ್ನು ಕಡಿಯತಕ್ಕಂಥನ್ನು ನೋಡುತ್ತೇವೆ. ಮರವನ್ನು ಕಡಿಯುತ್ತಿರುವಾಗ ಅದು ಕೆಳಗೆ ಬೀಳುವವರೆಗೂ ಅವನಿಗೆ ನೆರಳನ್ನು ಕೊಡುತ್ತಿರುತ್ತದೆ. ಇದು ಎಂಥ ಒಂದು ದುರಂತದ ಪರಿಸ್ಥಿತಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಬಳಸುತ್ತಿದ್ದ ಶಬ್ದ ಬಳಕೆ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿರತಕ್ಕಂಥ ಶಬ್ದಗಳನ್ನು ಬಳಸುತ್ತಿಲ್ಲ. ಅವರು ಯಾರ ಬಗ್ಗೆಯೂ ಹೇಳುತ್ತಿಲ್ಲ, ಅವರ ಭಾಗದ ವಿಷಯನ್ನು ಹೇಳುತ್ತಿರುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ರಾಮಯ್ಯನವರು ಮಾತನಾಡುತ್ತಾ ಮುಂಡೇಮಕ್ಕಳುಎಂಬ ಪದವನ್ನು ಬಳಸಿದರು.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ಅಧ್ಯಕ್ಷರು ಆ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ. ಪಾರ್ಲಿಮೆಂಟರಿ ಅಥವಾ ಅನ್‌ಪಾರ್ಲಿಮೆಂಟರಿ ಎಂದು ಹೇಳುವುದು ಪದದ ನೇರ ಅರ್ಥಕಲ್ಲ. ಅದರ ಕಾಂಟೆಕ್ಸ್ಟನ್ನು ನೋಡಬೇಕಾಗುತ್ತದೆ. ಶುದ್ಧ ಸಂಸ್ಕೃತವನ್ನು ಬಳಸಿದರೂ ಕೆಲವು ಸಾರಿ ಅನ್ ಪಾರ್ಲಿಮೆಂಟರಿ ಅನ್ನಿಸುತ್ತದೆ.

ಶ್ರೀ ವೈ. ಕೆ. ರಾಮಯ್ಯ.—ಅದರ ಬಗ್ಗೆ ನನ್ನ ಪ್ರಸ್ತಾಪ ಇಷ್ಟೆ. ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದವನು, ಕೋಳಿ ಗೂಡಿನಿಂದ ನೇರವಾಗಿ ಬಂದವನು. ನಾನು ಉಪಯೋಗಿಸಿದಂಥ ಪದ ಯಾರಿ ಗಾದರೂ ನೋವಾಗುತ್ತದೆಯೋ, ಯಾರ ಮರ್ಯಾದೆಯಾದರೂ ಕುಂದು ಬರುತ್ತದೆಯೋ, ಯಾವ

ವ್ಯಕ್ತಿಗಾದರೂ ಮಸಿ ಬಳಿಯುತ್ತದೆಯೇ ? ಆ ರೀತಿ ಯಾರಿಗಾದರೂ ನೋವಾದದ್ದು ನನ್ನ ಗಮನಕ್ಕೆ ಬಂದರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಅದು ಉಪಚಾರಿಕವಾಗಿ ನನ್ನದೇ ಆದ ಧಾಟಿ. ಮಾನ್ಯ ಕೃಷ್ಣನ್‌ರವರಿಗೆ ಹೇಳಬೇಕಾದರೆ ನನ್ನ ತಂದೆತಾಯಿಗಳು ಇಬ್ಬರೂ ಹೆಬ್ಬೆಟ್ಟಿನವರು. ಇಷ್ಟು ಮಾತನಾಡುವ ಶಕ್ತಿ ನಿಮ್ಮಂಥವರಿಂದ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರು ಮಾತನಾಡಬಹುದೆಂದು ಹೇಳಿದ್ದಾರೆ, ಮಾತನಾಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಗ್ರಾಮ್ಯ ಭಾಷೆ ಬಳಸುವಾಗ ಅಂಥ ಪದಗಳು ಬೇಕಾಗುತ್ತದೆ. ಇಲ್ಲದಿದ್ದರೆ ಆ ವಿಷಯಕ್ಕೆ ಇರುವ ಫೋರ್ಸ್ ಹೊರಟು ಹೋಗುತ್ತದೆ. ಇಲ್ಲಿ ಅಂಥದ್ದೇನೂ ಅಪಚಾರವಾಗಿಲ್ಲ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ರಾಮಯ್ಯನವರು ಯಾರಾದರೂ ಒಬ್ಬ ಸದಸ್ಯರಿಗೆ ಮುಂಡೇಮಕ್ಕಳು ಎಂದರೆ ಅದು ಅನ್‌ಪಾರ್ಲಿಮೆಂಟರಿಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅನ್‌ಪಾರ್ಲಿಮೆಂಟರಿ ಆಗದಿದ್ದರೂ ಆ ರೀತಿಯ ಮಾತು ಅಷ್ಟು ಚನ್ನಾಗಿರುವುದಿಲ್ಲ.

ಅಧ್ಯಕ್ಷರು.—ಉದ್ದೇಶಪಟ್ಟು ಯಾರನ್ನಾದರೂ ಅಂದಿದ್ದರೆ ತಪ್ಪಾಗುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಆ ರೀತಿ ಉಪಯೋಗಿಸುತ್ತಾರೆ. ಅದರಲ್ಲೇನೂ ತಪ್ಪಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಕೃಷ್ಣನ್‌ರವರು ವಕೀಲರ ಕೆಲಸ ಮಾಡಿದ್ದಾರೆಂದು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ನನಗೆ ವಕೀಲರ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಒಂದು ಜೋಕ್ ನೆನಪಾಗುತ್ತದೆ. ಒಬ್ಬ ವ್ಯಕ್ತಿ ಮಾತು ಎತ್ತಿದರೆ ಬೋಳಿಮಗನೆ, ಸೂಳೆಮಗನೆ ಅನ್ನುತ್ತಿದ್ದ. ಅವನ ಮೇಲೆ ಪೋಲೀಸರು ಕೇಸ್ ಹಾಕಿದರು. ನಂತರ ಚಾರ್ಜ್‌ಷೀಟ್ ಹಾಕಿ ಕೋರ್ಟಿಗೆ ಹಾಜರು ಪಡಿಸಿದರು. ವಿಚಾರಣೆ ಕಾಲದಲ್ಲಿ ನೀನು ಅವನನ್ನು ಬೋಳಿಮಗ ಅಂದದ್ದು ನಿಜವೇ ಎಂದು ಕೇಳಿದರು, ಆಗ ಅತ ಆ ಬೋಳಿ ಮಗನನ್ನು ನಾನು ಏಕೆ ಬೈಯಲಿ ಎಂದು ಹೇಳಿದ.

ಒಬ್ಬ ಮಾನ್ಯ ಸದಸ್ಯರು.—ಒಂದು ಸಾರಿ ಪ್ರಯೋಗ ಮಾಡಿದರು ಎಂದು ಹೇಳಿದ ಬಳಿಕ ಒಂದು ಡಜನ್ ಸಾರಿ ಪ್ರಯೋಗವಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾಡಿ ನಮಗೇನು ಇಲ್ಲ. ಆದರೆ ಈ ಸದನದಲ್ಲಿ ಮಾಡಿದಂಥ ಭಾಷಣವನ್ನು ನಾವು ಓದುತ್ತೇವೆ. ಮುಂದೆ ಬರತಕ್ಕವರು ಓದುತ್ತಾರೆ. ನಮ್ಮ ಈ ಒಂದು ಸಭೆಗೆ ಶೋಭೆ ತರತಕ್ಕ ಉದ್ದೇಶದಿಂದ ಹೇಳುತ್ತಿದ್ದೇನೆ. ನೂರು ವರ್ಷವಾದರೂ ಈ ಭಾಷಣಗಳನ್ನು ಮುಂದಿನವರು ರೆಫರ್ ಮಾಡುತ್ತಿರುತ್ತಾರೆ.

ಶ್ರೀ ವೈ. ಕೆ. ರಾಮಯ್ಯ.—ಆಗಬಹುದು. ಹಿರಿಯ ಸದಸ್ಯರು ಏನು ಅಪ್ಪಣೆ ಕೊಡಿಸಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ನಯವಾದ ಪದಗಳನ್ನು ಪ್ರಯೋಗ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಅಪ್ಪಿತಪ್ಪಿ ಬಂದರೆ, ಯಾರ ಮನಸ್ಸಿಗೂ ನೋವು ಮಾಡಬೇಕೆಂದಾಗಲಿ, ಗೌರವಕ್ಕೆ ಚ್ಯುತಿ ತರಬೇಕೆಂದಾಗಲಿ, ಮಸಿ ಬಳಿಯಬೇಕೆಂದಾಗಲೀ ನಾನು ಹೇಳುವುದಿಲ್ಲ.

ಈ ರಾಷ್ಟ್ರದಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ರಾಷ್ಟ್ರೀಯ ಕಾರ್ಯಕ್ರಮಗಳಾದಂಥ ಕುಟುಂಬ ಕಲ್ಯಾಣಯೋಜನೆ, ವನಸಂಪತ್ತು ವೃದ್ಧಿ ಮಾಡುವ ಕಾರ್ಯಕ್ರಮ, ವಿದ್ಯಾಭ್ಯಾಸಕ್ಕಾಗಿ ಕೊಡಬೇಕಾದ ಆದ್ಯತೆ ಇವು ಮೂರನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದರೆ ಕೆಲವಾರು ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂದು ಭಾವಿಸುತ್ತೇನೆ.

೧೨-೩೦ ಪಿ. ಎಂ.

ಅಧ್ಯಕ್ಷರು.—ಮಾನ್ಯ ರಾಮಯ್ಯನವರೇ, ಸೋಮವಾರ ನೀವು ಮುಂದುವರೆಸಬಹುದು. ಈಗ ಮುಂದಿನ ಸಬ್ಜೆಕ್ಟ್ ತೆಗೆದುಕೊಳ್ಳುತ್ತೇನೆ. ಕಾಲಿಂಗ್ ಅಟೆನ್‌ಷನ್ ಮತ್ತು ನಾನ್-ಅಫಿಷಿಯಲ್ ಬಿಸಿನೆಸ್ ತೆಗೆದುಕೊಳ್ಳುತ್ತೇನೆ. ಸೋಮವಾರ ಈ ಚರ್ಚೆಯನ್ನು ಮುಂದುವರೆಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೊಸ ಯೋಜನೆಯನ್ನು ಕೂಡ ಅವರು ಮಾಡಿಕೊಂಡು ಬರುತ್ತಾರೆ ಪೂರ್ತಿ ದಿವಸ.

ಶ್ರೀ ಎಂ. ರಘುಪತಿ.—ವಿರೋಧಪಕ್ಷದ ನಾಯಕರಿಗೆ ಅವಕಾಶ ಕೊಡಬೇಕು ಎಂದು ಅಷ್ಟೆ. ಇನ್ನೇನಿಲ್ಲ.

ಗಮನ ಸೆಳೆಯುವ ಸೂಚನೆ

ಬೆಂಗಳೂರಿನ ಎಂ.ಇ.ಐ. ಕಾರ್ಖಾನೆಗೆ ಸರ್ಕಾರಿ ನೆರವು ನೀಡದಿರುವುದು

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಸರ್ಕಾರಿ ಕಾರ್ಖಾನೆಯಾದ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್‌ಗೆ ಸರ್ಕಾರ ಯಾವ ರೀತಿಯ ನೆರವನ್ನು ನೀಡದೇ ಇರುವುದರಿಂದ ಉದ್ಭವಿಸುವ ಮುಗ್ಗಟ್ಟಿನ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿರುವ ಎಂ.ಇ.ಐ. ಕಾರ್ಖಾನೆಗೆ ಸರ್ಕಾರ ನೆರವು ನೀಡದೇ ಇರುವುದರಿಂದ ಉದ್ಭವಿಸಿರುವ ಮುಗ್ಗಟ್ಟಿನ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಆ ಬಗ್ಗೆ ಈ ಹೇಳಿಕೆ ಕೊಡುತ್ತಿದ್ದೇನೆ.

೧೯೪೭ರಲ್ಲಿ ಖಾಸಗಿ ವಲಯದ ನಿಯಮಿತ ಕಂಪೆನಿಯಾಗಿ ಸ್ಥಾಪಿತವಾದ ಮೈಸೂರು ಎಲೆಕ್ಟ್ರಿಕಲ್ ಕಾರ್ಖಾನೆಯು ೧೯೭೭–೭೮ರಲ್ಲಿ ಆರ್ಥಿಕ ತೊಂದರೆಗಳಿಗೆ ಒಳಗಾಗಿ ಮುಚ್ಚಲ್ಪಟ್ಟಿತು ಹಾಗೂ ೧೯೭೮ರ ಮೇ ತಿಂಗಳಿಂದ ೧೦ ತಿಂಗಳವರೆಗೆ ಉತ್ಪಾದನೆಯು ಸ್ಥಗಿತಗೊಂಡಿತ್ತು. ಮೈಸೂರು ಎಲೆಕ್ಟ್ರಿಕಲ್ ಕಂಪೆನಿಯ ಸಾಮರ್ಥ್ಯದ ಬಗ್ಗೆ ಎನ್ ಜಿ.ಇ.ಎಫ್.ನ ಅಧಿಕಾರಿಗಳ ಗುಂಪೊಂದು ನಡೆಸಿದ ಅಧ್ಯಯನ ವರದಿಯನ್ನು ಹಾಗೂ ಬೇರೆ ಬೇರೆ ಹಂತಗಳಲ್ಲಿ ನಡೆಸಿದ ಪರ್ಯಾಲೋಚನೆಗಳನ್ನು ಪರಿಶೀಲಿಸಿದ ಬಳಿಕ ಕರ್ನಾಟಕ ಸರ್ಕಾರವು ಈ ಕಂಪೆನಿಯ ಷೇರುಗಳನ್ನು ಅಧ್ಯಾದೇಶ ಹೊರಡಿಸುವ ಮೂಲಕ ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿತು. ಆ ಪ್ರಕಾರ ಕಂಪೆನಿಯ ೫೨.೨೫% ಸಂದಾಯವಾದ ಮೂಲ ಬಂಡವಾಳವನ್ನು ಕರ್ನಾಟಕ ಸರ್ಕಾರವು ಸ್ವಾಧೀನಪಡಿಸಿಕೊಂಡು ಉಳಿದ ೪೭.೭೫%ನ್ನು ಎಲ್.ಐ.ಸಿ.ಯು. ಟಿ.ಐ.ಗೆ ಬಿಟ್ಟುಕೊಟ್ಟು ಕಂಪೆನಿಯ ನಿಯಂತ್ರಣವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ರಾಜ್ಯ ಸರ್ಕಾರವು ಸ್ವಾಧೀನಪಡಿಸಿಕೊಂಡ ನಂತರ ಈ ಕೆಳಗಿನ ನೆರವನ್ನು ನೀಡಿದೆ :

೧) ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ಸ್ (ಸ್ಪೆಷಲ್ ಪ್ರಾವಿಷನ್ಸ್) ಆ್ಯಕ್ಟ್ ೧೯೭೭ರ ಅಡಿಯಲ್ಲಿ ಈ ಕಂಪೆನಿಯನ್ನು ''ಪರಿಹಾರ ಉದ್ದಿಮೆ'' ಯೆಂದು ಘೋಷಿಸಲಾಯಿತು,

೨) ಕೆನರಾ ಬ್ಯಾಂಕ್‌ನಿಂದ ಪಡೆದಿರುವ ೭೫ ಲಕ್ಷ ರೂ.ಗಳ ಸಾಲಕ್ಕೆ ಖಾತರಿ : ಯುನೈಟೆಡ್ ಕಮರ್ಶಿಯಲ್ ಬ್ಯಾಂಕ್‌ನಿಂದ ಪಡೆದ ಮಾರ್ಜಿನ್ ಹಣ ಕಂಪೆನಿಗೆ ಬಂಡವಾಳ ಮುಂಗಡ ಇವಕ್ಕೆ ಸರ್ಕಾರದ ಖಾತರಿ.

೩) ಓಕಳಿಪುರ ಘಟಕದ ಕಾರ್ಯಾಚರಣೆಯನ್ನು ಯಶವಂತಪುರ ಘಟಕಕ್ಕೆ ವರ್ಗಾಯಿಸುವುದಕ್ಕಾಗಿ ೩೦ ಲಕ್ಷ ರೂ.ಗಳ ಬ್ರಿಡ್ಜ್ ಸಾಲ.

೪) ವ್ಯಾವಹಾರಿಕ ಬಂಡವಾಳಕ್ಕಾಗಿ ೨೦ ಲಕ್ಷ ರೂ.ಗಳ ಸಾಲ.

೫) ಎಇಡಿ ಕಾಂಟ್ರಾಕ್ಟ್ ಯೋಜನೆಗಾಗಿ ತೆಗೆದುಕೊಂಡ ಉಪಕರಣಗಳಿಗಾಗಿ ೧೫ ಲಕ್ಷ ರೂ.ಗಳ ಸಾಲ.

೬) ೨೦ ಲಕ್ಷ ರೂ.ಗಳ ವ್ಯಾವಹಾರಿಕ ಬಂಡವಾಳ ಹಾಗೂ ೩೦ ಲಕ್ಷ ರೂ.ಗಳ ಬ್ರಿಡ್ಜ್ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಿದುದು.

೭) ೬೧ ಲಕ್ಷ ರೂ.ಗಳ ವಾಣಿಜ್ಯ ತೆರಿಗೆ ಬಾಕಿಯನ್ನು ಯೋಜನಾ ಸಾಲವನ್ನಾಗಿ ಪರಿವರ್ತಿಸಿದುದು.

೮) ೪ ಲಕ್ಷ ರೂ.ಗಳ ಖಾತರಿ ಕಮಿಷನ್ನನ್ನು ಮನ್ನಾ ಮಾಡಿದುದು.

ಇವಿಷ್ಟೆ ಅಲ್ಲದೆ ೧೯೮೭–೮೮ರ ವಾರ್ಷಿಕ ಯೋಜನೆಯಲ್ಲಿ ೨೫ ಲಕ್ಷ ರೂ.ಗಳನ್ನು ಒದಗಿಸುವ ಪ್ರಶ್ನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ. ಕಂಪೆನಿಯ ಸಾಮರ್ಥ್ಯವನ್ನು ಖಾತ್ರಿಪಡಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಐ.ಡಿ.ಬಿ.ಐ.ಯ ಸಮಾಲೋಚನೆಯೊಂದಿಗೆ ಕಂಪೆನಿಯ